MYSORE LEGISLATIVE ASSEMBLY

Wednesday, 10th March, 1965.

The House met in the Assembly Chamber, Vidhana Soudha, Bangalore, at Twelve of the Clock.

[MR. SPEAKER (SRI B. VAIKUNTA BALIGA, B.A., B.L.,) in the Chair.]

BUDGET ESTIMATES FOR 1965-66—GENERAL DISCUSSIONS (*contd.*)

MR. SPEAKER.—Before I call upon the Hon'ble Minister for Finance to reply to the General Discussion on the Budget, I will be wrong if I do not give chance to some more Members. Their names have been given to me. I will be untrue to myself if I do not give them the chances. But, I only appeal to them that they must co-ordinate from the beginning. The time was extended by one day. Even at the fag end of the day, if the members are uncoordinated, it will rather be embarrassing to me. So, I will allow some more Members. to participate in the Debate. I will give chance to three Members on each side, to speak for 10 minutes each.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ) ಸ್ವಾಮಿ, ನಮಗೆ ಸ್ವಾತಂತ್ರ್ಯ ಬಂದು 18 ವರ್ಷವಾಯಿತು. 18 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಸಾಮಾನ್ಯ ಜನರ ಸ್ಥಿತಿ ಏನೂ ಉತ್ತಮವಾಗಿಲ್ಲ. "ಹಾಡಿದ್ದೇ ಹಾಡೋ ದಾಸಯ್ಯ" ಎನ್ನುವ ಹಾಗೆ ಪ್ರತಿ ವರ್ಷ ಬಜೆಟ್ಟಿನಲ್ಲಿ ಒಂದೇ ರೀತಿಯಾಗಿ ಸಾಮಾನ್ಯ ಜನತೆಯ ಮೇಲಿನ ತೆರಿಗೆ ಭಾರ ಕಡಿಮೆ ಮಾಡಲು ಯಾವ ಪ್ರಯತ್ನವೂ ನಡೆದಿಲ್ಲ. ಶ್ರೀಮಂತ ಜನರಿಂದ ತೆರಿಗೆಯ ರೂಪದಲ್ಲಿ ಸರ್ಕಾರ ಹೆಚ್ಚು ಹಣ ಪಡೆಯಬಹುದಾಗಿತ್ತು. ಆದರೆ ಅವರಿಂದ ಹೆಚ್ಚು ಹಣ ಪಡೆಯಲು ಸರಕಾರ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ ಶ್ರೀಮಾನ್ ಜತ್ತಿಯವರು ತಿಳಿಸಿರುವ ಹಾಗೆ ಸುಮಾರು ಒಂದು ನೂರು ಕೋಟಿ ರೂಪಾಯಿ ಸೇಲ್ಸ್ ಟ್ಯಾಕ್ಸ್ ಅರಿಯರ್ಸ್ ಬರಬೇಕಾಗಿದೆ. ಅಷ್ಟೇ ಅಲ್ಲದೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಈ ತರಹದ ಅನೇಕ ತೆರಿಗೆಗಳನ್ನು ಸರಿಯಾಗಿ ವಸೂಲ್ಮಾಡದೇ ಇರುವುದಕ್ಕೆ ಕಾರಣವೇನೆಂದರೆ, ಅಧಿಕಾರಿಗಳು ಕೆಲವು ಸಂದರ್ಭದಲ್ಲಿ ಮಂತ್ರಿಗಳು ಕೂಡ ಶ್ರೀಮಂತರ ಭಕ್ತರಾಗಿದ್ದಾರೆ. ಆದುದರಿಂದಲೇ ಸರಕಾರಕ್ಕೆ ಹಣಕಾಸಿನ ಬಗ್ಗೆ ಇಂಥ ಪರಿಸ್ಥಿತಿ ಬಂದೊದಗಿದೆ. ಬೇರೆ ಕಾರಣವೇನೂ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅವರು ಶ್ರೀಮಂತರ ಭಕ್ತರಲ್ಲ. ಅವರು ಬಸವಣ್ಣನವರ ಭಕ್ತರು.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು) ಮುಕ್ಕಣ್ಣನ ಭಕ್ತರು.

ಶ್ರೀ ಪಿ. ವೆಂಕಟಗಿರಿಯಪ್ಪ.—ರಾಷ್ಟ್ರದ ಮುಖ್ಯವಾದ ಮೂಲ ಭೂತ ಸಮಸ್ಯೆ ಯಾವುದೂ ಬಗೆ ಹರಿದಿಲ್ಲ. ಆಹಾರ ಸಮಸ್ಯೆ, ನಿರುದ್ಯೋಗ ಸಮಸ್ಯೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ, ಯೋಜನೆಯಿಂದ ಪರಿಹಾರ ದೊರೆಯುತ್ತದೆ ಎಂದು ಪ್ರತಿ ವರ್ಷ ಅಶ್ವಾಸನೆ ಕೊಡಿಸುತ್ತಲೇ ಇದ್ದಾರೆ. ಆದರೆ ಪರಿಹಾರ ದೊರೆತಿಲ್ಲ. ಆಹಾರ ಸಮಸ್ಯೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದರೆ ಸರಕಾರ ಅನಿರೀಕ್ಷಿತವಾಗಿ ಕಂಟ್ರೋಲ್ ತಂದರು. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಆಹಾರ ಧಾನ್ಯ ಸಾಗಿಸುವುದಕ್ಕೆ ತಡೆ ಅಜ್ಞೆ ಹೊರಡಿಸಿದರು. ಮುಖ್ಯವಾಗಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಆಂಧ್ರದಿಂದ ನಮ್ಮ ರಾಜ್ಯಕ್ಕೆ ಆಹಾರ ಧಾನ್ಯ ಯಥೇಚ್ಚವಾಗಿ ಬರುತ್ತಿದ್ದುದು ನಿಂತು ಹೋಗಿ ಇಲ್ಲಿ ಬೆಲೆ ಏರಿದೆ. ಜಿಲ್ಲೆಯಿಂದ ಜಿಲ್ಲೆಗೆ ಸಾಗಾಣಿಕೆ ಬಂದು ಮಾಡಿದ ಮೇಲೆ ಬೆಲೆಗಳು ಯೋಚನೆಗೆ ಮೀರಿದ ಪ್ರಮಾಣದಲ್ಲಿ ಏರಿರುತ್ತವೆ. ಈ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಒತ್ತಾಯಪಡಿಸುವುದು ಇಷ್ಟೇ. ನಿಜವಾಗಿಯೂ ಕಂಟ್ರೋಲ್ ಮಾಡಿ ದೇಶದಲ್ಲಿಯ ಎಲ್ಲಾ ಜನರಿಗೆ ಆಹಾರ ಧಾನ್ಯ ಒದಗಿಸುವ ಶಕ್ತಿ ಇದ್ದರೆ ಕಂಟ್ರೋಲ್ ಮಾಡುವುದಕ್ಕೆ ನಾವೂ ಕೂಡ ಒಪ್ಪಿಕೊಳ್ಳಲು ತಯಾರಾಗಿದ್ದೇವೆ. ಬೆಲೆಗಳ ನಿರ್ಬಂಧ ವಿಧಿಸಿದ್ದೀರಿ. ದೊಡ್ಡ ಪಟ್ಟಣಗಳಲ್ಲಿ ಗಲಾಟೆ ಮಾಡಬಹುದೆಂದು ಬೆಂಗಳೂರು ಕೆ. ಜಿ. ಎಫ್. ದಾವಣಗೆರೆ ಮುಂತಾದ ದೊಡ್ಡ ಪಟ್ಟಣಗಳಿಗೆ ಆಹಾರ ಧಾನ್ಯ ಒದಗಿಸಿ ಸಣ್ಣ ಪಟ್ಟಣಗಳಿಗೆ ಸರಿಯಾಗಿ ಆಹಾರ ಧಾನ್ಯ ಒದಗಿಸಿಲ್ಲ. ಕೋಲಾರ ನಗರದ ಜನಸಂಖ್ಯೆ 34,000 ಇದ್ದರೂ ಕೂಡ ನಗರಕ್ಕೆ ಆಹಾರಧಾನ್ಯ ಒದಗಿಸಿಲ್ಲ. ಅಲ್ಲಿ ಇರತಕ್ಕಂಥ ಜನರು ಬಹಳ ಕಷ್ಟ ಪಡುತ್ತಿದ್ದಾರೆ, ಅವರಿಗೆ ಆಹಾರ ಧಾನ್ಯ ದೊರೆಯುತ್ತಿಲ್ಲ. ನಮ್ಮ ಕೋಲಾರ ಜಿಲ್ಲೆಯಲ್ಲಿ ರಾಗಿಯ ಬೆಲೆ ಒಂದು ಖಂಡಗಕ್ಕೆ 160 ರೂಪಾಯಿಯಂತೆ ಮಾರುತ್ತಿದ್ದಾರೆ. ಅದೇ ರೀತಿ ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುವ ಬೇರೇ ಭತ್ತವನ್ನು ಕ್ರೈಕೂಲಿಗೆ 90 ರೂಪಾಯಿಗಳಂತೆ ಮಾರುತ್ತಿದ್ದಾರೆ. ಇಷ್ಟು ಹೆಚ್ಚಿನ ಬೆಲೆ ಕೊಟ್ಟು ಜನರು ಜೀವನ ನಡೆಸಬೇಕಾಗಿದೆ ಆಹಾರ ಧಾನ್ಯ ನಿಗದಿ ಮಾಡಿದ ಬೆಲೆಗೆ ಒದಗಿಸಲು ಸಾಧ್ಯವಿದ್ದರೆ ನಿರ್ಬಂಧ ಮುಂದುವರಿಸಬಹುದು. ಇಲ್ಲದಿದ್ದರೆ ಈ ನಿರ್ಬಂಧ ಮುಂದುವರಿಸಲು ಏನು ಕಾರಣ ಎಂದು ಸರಕಾರಕ್ಕೆ ಪ್ರಶ್ನೆ ಕೇಳುತ್ತೇನೆ. ಆಹಾರ ಸಮಸ್ಯೆ ಮುಖ್ಯವಾದ ವಿಷಯವಾಗಿದೆ. ಅದನ್ನು ಬಗೆಹರಿಸಲು ಆಹಾರ ಉತ್ಪತ್ತಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಯೋಜನೆಯಲ್ಲಿ ಕೊಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಆಹಾರ ಸಮಸ್ಯೆ ಬಗೆಹರಿಸುತ್ತೇವೆ, ವ್ಯವಸಾಯ ಅಭಿವೃದ್ಧಿಯಾಗುತ್ತದೆ ಎಂದು ಸರಕಾರ ಆಗಾಗ್ಗೆ ತಿಳಿಸುತ್ತಲಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಚಾರ ನಾನು ತಿಳಿಸುತ್ತೇನೆ. ಕೆಲವು ಪ್ರದೇಶದಲ್ಲಿ ಮೇಜರ್ ಪ್ರಾಜೆಕ್ಟ್ಸ್ ಕೊಟ್ಟಿದ್ದೇವೆ ಅದರಿಂದ ದೇಶದಲ್ಲಿ ವ್ಯವಸಾಯ ಅಭಿವೃದ್ಧಿಯಾಗುತ್ತದೆ, ಹಾಗೂ ಆಹಾರ ಸಮಸ್ಯೆ ಬಗೆಹರಿಸುತ್ತೇವೆಂದು ಸರಕಾರ ತಿಳಿದುಕೊಂಡಿದ್ದರೆ ಅದು ಶುದ್ಧ ತಪ್ಪು ಎಂದು ನಾನು ತಿಳಿಸುತ್ತೇನೆ. ಮೈನರ್ ಇರಿಗೇಷನ್ನಿಗೆ ಎಷ್ಟು ಪ್ರಮಾಣದಲ್ಲಿ ಹಣ ಕೊಡಬೇಕಾಗಿತ್ತೋ ಅಷ್ಟು ಹಣ ಒದಗಿಸಿಲ್ಲ. ನಮ್ಮ ಕೋಲಾರ ಡಿಸ್ಟ್ರಿಕ್ಟ್ ವಿಚಾರ ಹೇಳುವುದಾದರೆ ಮೈನರ್ ಇರಿಗೇಷನ್ನಿಗೆ ಹೋದ ವರ್ಷ ನಮ್ಮ ಡಿವಿಜನ್ನಿಗೆ 7 ಲಕ್ಷ ರೂಪಾಯಿ ಕೊಟ್ಟಿದ್ದರು.

ಆ ಜಿಲ್ಲೆಯಲ್ಲಿರತಕ್ಕ ಒಟ್ಟು 7 ಸಾವಿರ ಗ್ರಾಮಗಳಲ್ಲಿ ಸುಮಾರು 600 ಗ್ರಾಮಗಳು ಇನಾಂ ಗ್ರಾಮಗಳು. ಬಹಳ ಕಾಲದಿಂದಲೂ ಸರ್ಕಾರದವರು ಈ ಗ್ರಾಮಗಳ ಬಗ್ಗೆ ಯಾವ ಒಂದು ಆಸಕ್ತಿ ಏನೂ ವಹಿಸಿರಲಿಲ್ಲ. ಆ ಗ್ರಾಮಗಳಲ್ಲಿ ಒಂದು ಕೆರೆಯಾಗಲೀ, ಒಂದು ರಸ್ತೆ ಆಗಲೀ ಇಂಥ ಯಾವ ಒಂದು ಅನುಕೂಲವೂ ಇಲ್ಲ. ಈ ವಿಚಾರವನ್ನು ನಾವು ಅನೇಕ ಜನ ಮಂತ್ರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಹೀಗೆ ಈ ಜಿಲ್ಲೆಯು ಪ್ರಾಮುಖ್ಯವಾಗಿ ಕೆರೆಗಳ ವಿಚಾರದಲ್ಲಿ ಅದರಲ್ಲೂ ಮೈನರ್ ಕೆರೆಗಳ ವಿಚಾರದಲ್ಲಿ ಬಹಳ ಹಿಂದೆ ಬಿದ್ದಿದೆ, ಬಹಳ ದುರವಸ್ಥೆಯಲ್ಲಿದೆ. ಅದಕ್ಕಾಗಿ ಈ ಜಿಲ್ಲೆಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಆದರೆ ಇಲ್ಲಿಯವರೆಗೂ ಸರ್ಕಾರಕ್ಕೆ ದಯೆ ಬರಲಿಲ್ಲ. ರಾಜ್ಯದ ಬೇರೆ ಪ್ರದೇಶಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇನ್ನೊಂದು ಭಾಗಕ್ಕೆ ಒಂದು ಹತ್ತು ಲಕ್ಷ ರೂಪಾಯಿಗಳನ್ನು ಜಾಸ್ತಿ ಮಾಡಿ ಎಂದರೆ ಹಿಂದುಮುಂದು ನೋಡುತ್ತಾರೆ. ಒಂದುವೇಳೆ ಇದನ್ನು ಮಾಡಿದರೆ ತಪ್ಪಾಗುತ್ತೆಂದು ಮಾನ್ಯ ಹಣಕಾಸಿನ ಸಚಿವರು ಹೇಳಿದರೂ ಹೇಳಬಹುದು. ಆದರೆ ಈಗ ನೀರಾವರಿ ಬಾವಿಗಳನ್ನು ಹೆಚ್ಚುಮಾಡದಿದ್ದರೆ ನಮ್ಮ ಜಿಲ್ಲೆಯಲ್ಲಿ ವ್ಯವಸಾಯಾಭಿವೃದ್ಧಿಯಾಗುವುದಿಲ್ಲ ಎಂಬ ಅಂಶವನ್ನು ಸರ್ಕಾರದವರೇ ಒಪ್ಪಿದ್ದಾರೆ. ಈ ಒಂದು ಬಾಬಿನಲ್ಲಿ ಕಳೆದ 3—4 ವರ್ಷಗಳಿಂದ ಬಾವಿಗಳಿಗೆ ಸಾಲ ಮತ್ತು ಸಬ್‌ಸಿಡಿಯನ್ನು ಕೊಡುತ್ತಾ ಬಂದುದರಿಂದ ದೇಶದಲ್ಲಿ 35 ಸಾವಿರ ಬಾವಿಗಳನ್ನು ತೆಗೆಸುವುದಕ್ಕೆ ಅನುಕೂಲವಾಯಿತು. ಇದರಿಂದ ಸುಮಾರು 35 ಸಾವಿರ ಟನ್ ಹೆಚ್ಚು ಆಹಾರ ದೇಶದಲ್ಲಿ ಉತ್ಪನ್ನವಾಗಿದೆ. ಆದರೆ ಇನ್ನು ಮುಂದಕ್ಕೆ ಬಾವಿಗಳಿಗೆ ಈ ಲಿಬರಲೈಸ್ಡ್ ಸ್ಕೀಮಿನಲ್ಲಿ ಕೊಡಲಾಗುತ್ತಿದ್ದ ಹಣವನ್ನು ಇನ್ನು ಮುಂದೆ ಶ್ರೀಮಾನ್ ಜತ್ತಿಯವರು ನಿಲ್ಲಿಸಬೇಕೆಂಬ ಅಭಿಪ್ರಾಯ ಇಟ್ಟುಕೊಂಡಿರುವಂತೆ ಭಾಸವಾಗುತ್ತಿದೆ. ಅವರು ಇನ್ನುಮುಂದೆ ಜಿಲ್ಲಾ ಜಮೀನು ಅಭಿವೃದ್ಧಿ ಸಾಲಗಳನ್ನು ಜಮೀನು ಅಡಮಾನಬ್ಯಾಂಕು ಮೂಲಕ ಪಡೆಯಬೇಕೆಂದು ಹೇಳುತ್ತಿದ್ದಾರೆ. ಆದರೆ ಅವರು ಬಹಳ ಸೂಕ್ಷ್ಮ ಬುದ್ಧಿ ಉಳ್ಳವರೆಂದು ಅನೇಕರು ಹೇಳುತ್ತಿದ್ದಾರೆ. ಅವರೀಗ ಅಡಮಾನದ ಸಹಕಾರ ಸಂಘವನ್ನು ಏಕೆ ತೋರಿಸುತ್ತಿದ್ದಾರೆಂದರೆ ಸರ್ಕಾರದವರು ಇಲ್ಲಿಯ

ವರೆಗೂ ಸೇಕಡ 3 ರಂತೆ ಬಡ್ಡಿ ಹಾಕುತ್ತಿದ್ದರು. ಇನ್ನು ಬ್ಯಾಂಕಿನಲ್ಲಿ ಸಾಲಕ್ಕೆ ಹೋದರೆ ಅವರು ಇಲ್ಲಿಯವರೆಗೂ ಹಾಕುತ್ತಿದ್ದ 7 ಪರ್ಸೆಂಟನ್ನೂ ಹಾಕಿ, ಈಗ ಕೇಂದ್ರದವರು ಜಾಸ್ತಿ ಮಾಡಿರತಕ್ಕ 1 ಪರ್ಸೆಂಟ್ ಬಡ್ಡಿಯನ್ನೂ ಸೇರಿಸಿ ಒಟ್ಟು 8 ಪರ್ಸೆಂಟ್ ಬಡ್ಡಿ ಹಾಕುತ್ತಾರೆ.

ಶ್ರೀ ಬಿ. ಡಿ. ಜತ್ತಿ.—ನಾವು ಅವರಿಗೆ ಆರೀತಿ ಜಾಸ್ತಿ ಮಾಡಿ ಎಂತ ಏನೂ ತಿಳಿಸಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಹಾಗಿದ್ದರೆ ಬಹಳ ಸಂತೋಷ.

ಶ್ರೀ ಬಿ. ಡಿ. ಜತ್ತಿ.—ನನಗೆ ತಮ್ಮ ಶಹಬಾಸ್‌ಗಿರಿಯೇನೂ ಬೇಕಾಗಿಲ್ಲ; ಇದು ನೇರವಾಗಿ ರೈತರಿಗೆ ಬೇಗ ಮುಟ್ಟಲಿ ಎಂಬ ಉದ್ದೇಶದಿಂದಲೂ ಮತ್ತು ನಾವು ಈ ಬಾಬಿಗೆ ಏನು ಮೊತ್ತವನ್ನು ಕೊಡಬೇಕೆಂದು ನಿರ್ಧಾರಮಾಡುತ್ತೇವೋ ಅದರ ನಾಲ್ಕುಪಟ್ಟು ಐದು ಪಟ್ಟು ಹಣವನ್ನು ಅದಕ್ಕೆ ಸೇರಿಸಿ ಅವರು ಕೊಡುತ್ತಾರೆ. ಅದು ರೈತರಿಗೆ ಹೆಚ್ಚಿನ ಅನುಕೂಲ ಉಂಟೆಂದು ನಾವು ಅದನ್ನು ಮಾಡಿದ್ದೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಅಂತೂ ಕೋಲಾರ ಜಿಲ್ಲೆಗೆ ಹೆಚ್ಚಿನ ಹಣವನ್ನು ಈ ಬಾವಿಗಳಿಗೆ ಕೊಡಬೇಕೆಂಬುದು ಬಹಳ ಮುಖ್ಯವಾದ ವಿಚಾರ. ಆದುದರಿಂದ ಸರ್ಕಾರ ಈ ಬಾಬಿಗೆ ಹೆಚ್ಚಿನ ಹಣವನ್ನು ಕೊಡಬೇಕೆಂದು ನಾನು ಒತ್ತಾಯಮಾಡುತ್ತೇನೆ.

ಇನ್ನು ನಾನು ವಿದ್ಯಾಭ್ಯಾಸದ ಬಗ್ಗೆ ಒಂದೆರಡು ಮಾತುಗಳನ್ನು ಆಡಬೇಕೆಂದು ಅಪೇಕ್ಷಿಸುತ್ತೇನೆ. ಆದರೆ ನಮ್ಮ ಸರ್ಕಾರದವರು ಯಾವಾಗಲೂ ಹೆಚ್ಚು ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆಯಬೇಕೆಂಬುದರ ಕಡೆಗೆ ಹೆಚ್ಚಿನ ಗಮನಕೊಡುತ್ತಿದ್ದು ಅವುಗಳ ಮಟ್ಟ ಯಾವ ರೀತಿ ಇದೆ ಎಂಬುದರ ಕಡೆಗೆ ಇವರ ಗಮನ ಅಷ್ಟಾಗಿ ಹೋಗಿರುವಂತೆ ಕಂಡುಬರುವುದಿಲ್ಲ. ನಮ್ಮ ರಾಜ್ಯದಲ್ಲಿ ನಾವೀ ದಿವಸ ಅಪಾರ ಹಣವನ್ನು ಈ ಬಾಬಿಗಾಗಿ ಖರ್ಚುಮಾಡುತ್ತಿದ್ದೇವೆ. ಆದರೆ ಇಲ್ಲಿ ಪಾಠಶಾಲೆಗಳ ಸಂಖ್ಯೆ ಹೆಚ್ಚುತ್ತಿದೆ. ಈ ದಿವಸ ತಾಲ್ಲೂಕ್ ಬೋರ್ಡಿನವರೂ ಮತ್ತು ಇನ್ನೂ ಕೆಲವು ದೊಡ್ಡ ಗ್ರಾಮಗಳವರೆಲ್ಲಾ ಸೆಕೆಂಡರೀ ಶಾಲೆಗಳನ್ನು ಪ್ರಾರಂಭಮಾಡಿರುತ್ತಾರೆ. ಆದರೆ ಒಂದು ಕಡೆಯಲ್ಲೂ ಸರಿಯಾದ ಕಟ್ಟಡಗಳಿಲ್ಲ, ಅಲ್ಲಿ ಕುಳಿತುಕೊಳ್ಳುವುದಕ್ಕೆ ಬೆಂಚುಗಳಿಲ್ಲ. ಅವುಗಳು ನೋಡುವುದಕ್ಕೆ ಪ್ರಾಥಮಿಕ ಶಾಲೆಗಳಿದ್ದಂತೆ ಇವೆ. ಅದಕ್ಕಾಗಿ ನಾವು ಹೇಳುವುದೇನೆಂದರೆ—ಸ್ಕೂಲುಗಳ ಸಂಖ್ಯೆ ಕಡಮೆಯಾದರೂ ಚಿಂತೆಇಲ್ಲ, ಅವುಗಳಿಗೆ ಬೇಕಾದ ಎಲ್ಲ ಸಲಕರಣೆಗಳನ್ನೂ ಒದಗಿಸಿ ಕೊಡಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ. ಅವುಗಳನ್ನು ನಡೆಸಲು ತಕ್ಕ ಕಟ್ಟಡಗಳನ್ನು ಕಟ್ಟಿಸಬೇಕಾದ್ದೂ ಅತ್ಯವಶ್ಯಕ. ನಾನು ಕೆಲವು ಹಳ್ಳಿಗಳಿಗೆ ಹೋಗಿ ನೋಡಿದ್ದೇನೆ. ಅಲ್ಲಿ ಇರತಕ್ಕ ಶಾಲೆಗಳು ಈಗಲೋ ಆಗಲೋ ಬೀಳತಕ್ಕ ಪರಿಸ್ಥಿತಿಯಲ್ಲಿವೆ. ಅಂಥ ಅಧೋಗತಿಯಲ್ಲಿರುವ ಶಾಲೆಗಳು ನಮ್ಮಲ್ಲಿ ಅನೇಕವುಇವೆ. ಕಟ್ಟಡಗಳನ್ನು ಕಟ್ಟಿಸತಕ್ಕ ಬಾಬಿಗೆ ಸರ್ಕಾರ ಹೆಚ್ಚು ಹಣ ಒದಗಿಸಬೇಕಾದ್ದು ಅಗತ್ಯ. ನಾವು ಹೀಗೆ ಹೆಚ್ಚು ಹಣವನ್ನು ಕೊಡಬೇಕೆಂದು ಕೇಳಿದರೆ ನಮ್ಮ ಹಣಕಾಸಿನ ಮಂತ್ರಿಗಳು ಅದಕ್ಕೆ ತಕ್ಕ ವರಮಾನವನ್ನೂ ತೋರಿಸಿ ಎಂತ ಕೇಳಬಹುದು. ಆದರೆ ನಾವು ಎಷ್ಟೋಸಾರ್ತಿ ಅದನ್ನೂ ಹೇಳಿದ್ದೇವೆ. ಆದರೆ ಆ ನಮ್ಮ ಮಾತುಗಳಲ್ಲಿ ಅವರಿಗೆ ಆಸಕ್ತಿಯಿಲ್ಲ. ಅದಕ್ಕೆ ನಾವು ಹೇಳತಕದ್ದು ಅವರ ಅಧಿಕಾರಿಗಳನ್ನೇ ಕೇಳಲಿ ಎಂದು ಹೇಳುತ್ತಿದ್ದೇವೆ. ನಾವು ಹೇಳಿರತಕ್ಕ ಸಲಹೆಗಳಲ್ಲಿ ಸರ್ಕಾರದವರು ಒಂದನ್ನೂ ಒಪ್ಪುವುದಿಲ್ಲ. ನಾವು ಹೇಳಿದಾಗ ಅವರು ಒಪ್ಪುವುದಿಲ್ಲ ಆದರೆ ನಾನು ಇಲ್ಲಿ ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ. ಎನ್. ಜಿ. ಓ. ಗಳ ಪ್ರಶ್ನೆಯನ್ನೇ ತೆಗೆದುಕೊಳ್ಳೋಣ—ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳಾದ ಮದ್ರಾಸ್ ಮತ್ತು ಕೇರಳದಲ್ಲಿ ಅವರ ಬೇಡಿಕೆ ಈಡೇರಿಸಿದ್ದಾರೆ, ಕೇರಳ ನಮ್ಮ ರಾಜ್ಯಕ್ಕಿಂತ ಚಿಕ್ಕದು, ಅದರ ವರಮಾನ ಕಡಿಮೆ, ಹಾಗಿದ್ದರೂ ಅಲ್ಲಿಯ ಸರ್ಕಾರ ಅದನ್ನು ಮಾಡಿರುವಾಗ ಇಲ್ಲಿ ನಮ್ಮ ಸರ್ಕಾರ ದುಡ್ಡಿಲ್ಲ ಎಂದರೇನರ್ಥ ? ಆದುದರಿಂದ ನಮ್ಮ ಸರ್ಕಾರ ಈ ವಿಚಾರದಲ್ಲಿ ಅದು ಇನ್ನೂ ಹೆಚ್ಚಿನ ಪರಿಸ್ಥಿತಿಗೆ, ಗಲಾಟೆಗೆ ಹೋಗುವುದಕ್ಕೆ ಮುಂಚಿತವಾಗಿಯೇ ಅವರ ಕೋರಿಕೆಯನ್ನು ಈಡೇರಿಸುವುದೊಳ್ಳೆಯದು. ಆದರೆ ನಮ್ಮ ಸರ್ಕಾರದಲ್ಲಿ ಮೊಂಡತನ ಜಾಸ್ತಿಯಾಗಿದೆ. ಹಿಂದೆ ವಿದ್ಯಾರ್ಥಿಗಳ ಗಲಾಟೆಯಲ್ಲೂ ಹೀಗೆ ಮಾಡಿದರು. ಅವರು ಕೇಳಿದಾಗ ಅವರ ಕೋರಿಕೆಯನ್ನು ನಡೆಸಿಕೊಡದೆ ಅವರು ಗಲಾಟೆಮಾಡುವುದಕ್ಕೆ ಪ್ರಾರಂಭಿಸಿದಮೇಲೆ ಅವರ ಡಿಮ್ಯಾಂಡನ್ನು ಸರ್ಕಾರದವರು ಒಪ್ಪಿಕೊಂಡರು, ಆದುದರಿಂದ ಪರಿಸ್ಥಿತಿ ಹದಗೆಡುವುದಕ್ಕೆ ಮುಂಚಿತವಾಗೇ ಈ ಎನ್.ಜಿ.ಓ. ಗಳ ಪ್ರಶ್ನೆಯನ್ನು ಬಗೆಹರಿಸುವುದು ಒಳ್ಳೆಯದು, ಆದರೆ ಇದಕ್ಕಾಗಿ ಹೆಚ್ಚು ಟ್ಯಾಕ್ಸನ್ನೂ ಹಾಕಬೇಕಾದ್ದಿಲ್ಲ. ಇಷ್ಟನ್ನು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಎನ್. ಎ. ಕರಿಲಿಂಗಣ್ಣನವರು (ಗೋಕಾಕ್-1).—ಅಧ್ಯಕ್ಷರೇ; ನಮ್ಮ ಅರ್ಥಿಕ ಸಚಿವರು 1965—66ನೇ ಸಾಲಿಗೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ನಾನು ಕೆಲವೊಂದು ಮಾತುಗಳನ್ನು ಆಡಬಯಸುತ್ತೇನೆ. ಈ ಬಡ್ಜೆಟ್ಟಿನ ಬಗ್ಗೆ ನನ್ನ ಅಭಿನಂದನೆಗಳನ್ನು ಸಲ್ಲಿಸಬೇಕೆಂಬುದೇ ನನ್ನ ಅಭಿಪ್ರಾಯ. ಸರ್ಕಾರದವರು ಮುಂಬರುವ ಸಾಲಿನಲ್ಲಿ ಎಲ್ಲ ವಲಯಗಳಲ್ಲಿಯೂ ಒಕ್ಕಲುತನಕ್ಕೆ ಒಂದು ವಿಶೇಷ ರಿಯಾಯಿತಿಯನ್ನು ತೋರಿಸುವುದಾಗಿ ತಿಳಿಸಿದ್ದಾರೆ. ಆದರೆ ಸಾಮಾನ್ಯವಾಗಿ ಕಷ್ಟಬಂದಾಗ ನಾವು ದೇವರ ಕಡೆಗೆ ಹೋಗತಕ್ಕದ್ದು ವಾಡಿಕೆ. ಆದರೆ ಈಗ ಕಷ್ಟಬಂದಿರುವುದಕ್ಕಾಗಿ ನಾವು ರೈತನ ಕಡೆಗೆ ಹೋಗಬೇಕಾದ ಪರಿಸ್ಥಿತಿ ಬಂದಿದೆ. ಆದರೆ ದೇವಸ್ಥಾನಕ್ಕೆಹೋಗುವಾಗ ನಾವು ಬರಿಯ ಕೈಲಿ ಹೋಗುವುದಿಲ್ಲ, ಕಾಯಿ, ಕರ್ಪೂರ ಇವುಗಳನ್ನು ತೆಗೆದುಕೊಂಡು ಹೋಗುತ್ತೇವೆ. ಆದರೆ ನಾವು ಈ ದಿವಸ ಪ್ರತ್ಯಕ್ಷದೇವರಾಗಿರತಕ್ಕ ಅಥವಾ ದೇವರ ಸ್ವರೂಪಿ ಆಗಿರತಕ್ಕ ರೈತನ ಕಡೆಗೆ ಹೋಗಬೇಕಾದರೆ, ಕಾಯಿ ಕರ್ಪೂರಗಳನ್ನು ತೆಗೆದುಕೊಂಡು ಹೋಗುವುದಕ್ಕೆ ಬದಲಾಗಿ ನಾವು ಆತನ ಮೇಲೆ ಹೊರಿಸಲು ಸರ್ಕಾರದವರು ಹೊಸ ಹೊಸದಾಗಿ ನಿರ್ಮಾಣ ಮಾಡಿರತಕ್ಕ ಕರಭಾರಗಳನ್ನು ತೆಗೆದುಕೊಂಡು ಹೋಗುತ್ತಿದ್ದೇವೆ. ಇದಕ್ಕಾಗಿ ನಾನು ತುಂಬಾ ವ್ಯಸನ ಪಡಬೇಕಾಗಿದೆ.

ರೈತನು ಮಳೆ, ಬಿಸಿಲು, ಚಳಿ ಇವುಗಳೆಲ್ಲೆಲ್ಲಾ ಕಷ್ಟಸೂಸಿ ತಾನು ಉತ್ಪನ್ನ ಮಾಡಿದಂತಹ ಆಹಾರ ಧಾನ್ಯಗಳಿಗೆ ಬೆಲೆ ನಿಗದಿ ಮಾಡುವಂತಹ ಪರಿಸ್ಥಿತಿ ಬಂದಿದೆ. ನಮ್ಮ ಪ್ರಾಂತ್ಯದ ಪರಿಸ್ಥಿತಿ ನೋಡಿದರೆ ಒಕ್ಕಲುತನ ಎಲ್ಲೂ ಲಾಭದಾಯಕವಾಗಿಲ್ಲ ಎಂಬ ಮಾತು ಎಲ್ಲರಿಗೂ ಮನದಟ್ಟಾಗುವಂತಹ ಪರಿಸ್ಥಿತಿ ಇದೆ. ಹಾಗಿದ್ದರೂ ಸಹ ಒಂದು ಕ್ವಿಂಟಾಲ್ ಜೋಳಕ್ಕೆ ಸರಕಾರದವರು 50-52 ರೂಪಾಯಿಗಳನ್ನು ಮಾಡಿದ್ದಾರೆ. ಕಷ್ಟಸೂಸಿ, ಖರ್ಚುಮಾಡಿ ಅವನೇ ದುಡಿಮೆ ಮಾಡಿದಂತಹ ಕಾಳನ್ನು ಮತ್ತೆ ಸೋಡಿ ದರದಿಂದ ಅವನಿಗೇ ಕೊಡುವುದು ಎಂದರೆ ಇದು ಯಾವ ನ್ಯಾಯವಾದ ಮಾತು ? ಆದ್ದರಿಂದ ಈಗ ಅವನು ಉತ್ಪನ್ನ ಮಾಡುವಂತಹ ಆಹಾರದ ಬೆಳೆಗೆ ಈಗ ಕಡಿಮೆ ಆದಾಯ ಬರುತ್ತಾ ಇದೆ. ಕಬ್ಬನ್ನೂ ಅಥವಾ ಮತ್ತೆ ಬೇರೆ ಯಾವುದಾದರೂ ಪದಾರ್ಥಗಳನ್ನು ಹಾಕುತ್ತಾ ಹೋದರೆ ಅದಕ್ಕೆ ವಿಪರೀತ ಬೆಲೆ ಬರತಕ್ಕ ಪರಿಸ್ಥಿತಿ ಈಗ ಇದೆ. ಆಹಾರ ಧಾನ್ಯಗಳ ಬೆಲೆ ಏರಿದೆ ಅದು ಒಂದು ಭೊಬ್ಬಾಟವಾಗಿದೆ. ಆದರೆ ಇದು ಯೋಗ್ಯವೇ ಅಯೋಗ್ಯವೇ ಎಂಬ ವಿಚಾರವನ್ನು ಆಲೋಚನೆ ಮಾಡಿದರೆ ಭಾರಿಯಾದಂತಹ ದರದಲ್ಲಿ ಕೊಳ್ಳುವಂತಹ ಜನರ ಪರಿಸ್ಥಿತಿ ಯಾದರೂ ಕೂಡ ಬಹಳ ಚಿಂತಾಜನಕವಾದುದು ನಿಜ ; ಇದನ್ನು ಹೋಗಲಾಡಿಸಬೇಕಾದರೆ ಸರ್ಕಾರದವರು ಏನಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುವುದು ನಿಶ್ಚಿತವಾದ ಮಾತು. ನನಗೆ ತಿಳಿದ ಮಟ್ಟಿಗೆ ಒಂದೆರಡು ಸಲಹೆಗಳನ್ನು ಮಾಡುತ್ತೇನೆ. ಸರಕಾರದವರು ಏನಾದರೂ ಆಹಾರಧಾನ್ಯವನ್ನು ಹೆಚ್ಚಾಗಿ ಬೆಳೆಯಬೇಕಾದರೆ ರೈತನ ಬೆಳೆಗೆ ಒಂದು ನಿಗದಿಯನ್ನು ಮಾಡಲೇ ಬೇಕು. ಇಂತಿಷ್ಟೇ ಆಹಾರಧಾನ್ಯ ಬೆಳೆಯಬೇಕು, ಇಂತಿಷ್ಟೇ ಕ್ಷೇತ್ರದಲ್ಲಿ ಬೆಳೆಯಬೇಕು ಎಂಬುದನ್ನು ನಿಶ್ಚಿತಮಾಡಬೇಕು, ಅವನು ಬೆಳೆದಂತಹ ಕಾಳಿಗೆ ಇಷ್ಟೇ ದರ ಕೊಡುತ್ತೇವೆ ಎಂದು ಪೂರ್ವಭಾವಿಯಾಗಿ ನಿಶ್ಚಿತ ಮಾಡಬೇಕು ಎಂದರೆ ಈ ಆಹಾರಧಾನ್ಯದ ಪರಿಸ್ಥಿತಿಯ ಬಿಕ್ಕಟ್ಟು ದೂರವಾಗುತ್ತದೆ ಎಂದು ನನ್ನ ನಂಬಿಕೆ ಇದೆ. ಅದನ್ನು ಮಾಡದೇ ಹಾಗೆಯೇ ಬಿಟ್ಟರೆ ಈಗ ಬಂದಿರತಕ್ಕ ಪರಿಸ್ಥಿತಿ ಏನಿದೆ ಇದಕ್ಕಿಂತಲೂ ಕಠಿಣವಾದ ಪರಿಸ್ಥಿತಿ ಬರುತ್ತದೆ ಎಂಬ ಮಾತು ಸ್ಪಷ್ಟವಾದ ಚಿತ್ರವಾಗಿದೆ. ರೈತನ ಸ್ವಭಾವ ಏನೆಂದರೆ ಯಾವ ಬೆಳೆಗೆ ಹೆಚ್ಚು ಲಾಭ ಬರುತ್ತದೆ ಅದನ್ನು ಮಾಡಲಿಕ್ಕೆ ಮನಸಾ ಸಿದ್ಧವಾಗಿರುತ್ತಾನೆ ಅವನಿಗೆ ಅಂಕಿಅಂಶಗಳ ಪರಿಸ್ಥಿತಿ ಗೊತ್ತಿರುವುದಿಲ್ಲ. ಈಗ ನೋಡಿರಿ, ಕಬ್ಬಿನ ಬೆಳೆಗೆ ಬಹಳ ದರ ಬರುತ್ತದೆ. ಅದನ್ನೇ ವಿಪರೀತವಾಗಿ ಬೆಳೆದವರಿಗೆ ವಿಪರೀತವಾದ ಬೆಲೆ ಬಂತು. ಆದರೆ ಈ ಸಲ ಬಹಳ ಕೆಳಮಟ್ಟಕ್ಕೆ ಬಂದಿದೆ. ಈ ದೃಷ್ಟಿಯಿಂದ ರೈತನಿಗೂ ಲಾಭವಿಲ್ಲ ಯಾರಿಗೂ ಲಾಭವಿಲ್ಲ, ಆಹಾರದ ಪರಿಸ್ಥಿತಿ ಕೂಡ ಬಿಕ್ಕಟ್ಟಾಗುತ್ತದೆ. ಪ್ರತಿಯೊಂದು ಬೆಳೆಗಳನ್ನೂ ಇಂತಿಷ್ಟು ಮಾಡಬೇಕೆಂಬುದನ್ನು ನಿಗದಿ ಮಾಡಿ ಪ್ರತಿಯೊಂದು ಬೆಳೆಯನ್ನೂ ಈ ದರದಂತೆಯೇ ತೆಗೆದುಕೊಳ್ಳಬೇಕೆಂದು ಮಾಡಿದರೆ ಆಹಾರ ಧಾನ್ಯಗಳ ಬಿಕ್ಕಟ್ಟಿನ ಪರಿಸ್ಥಿತಿ ಸಡಿಲವಾಗಿ ಒಂದು ಸರಿಸಮಾನವಾದ ಪರಿಸ್ಥಿತಿ ಉತ್ಪನ್ನ ವಾಗುತ್ತದೆ ಎಂಬ ಭಾವನೆ ನನಗಂತೂ ಇದೆ. ಆ ದೃಷ್ಟಿಯಿಂದ ಸರಕಾರದವರು ಆಹಾರ ಧಾನ್ಯಗಳ ಬೆಲೆಗಳನ್ನು ತೀವ್ರಗತಿಯಿಂದ ನಿಗದಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಎರಡನೆಯ ಮಾತು ಎಂದರೆ ರೈತನಿಗೆ ಕೊಆಪರೇಟೀವ್ ಮುಖಾಂತರ ಸಾಲವನ್ನು ಕೊಡುತ್ತಾರೆ. ರೈತನ ಪರಿಸ್ಥಿತಿಯನ್ನು ನೋಡಿದರೆ ಪ್ರತಿಯೊಬ್ಬ ರೈತನ ಸಾಲ ಭಾರಿ ಭಾರಿಯಾಗಿ ಹೆಚ್ಚಾಗಿದೆ. ಕೋಆಪರೇಟಿವ್‌ದಲ್ಲಿ ಸಾಲ ತೆಗೆದುಕೊಂಡಿದ್ದಾನೆ, ಬಾವಿ ತೆಗೆಯಲಿಕ್ಕೆ ಸಾಲ ತೆಗೆದುಕೊಂಡಿದ್ದಾನೆ, ಒಡ್ಡು ಹಾಕಲಿಕ್ಕೆ ಸಾಲ ತೆಗೆದುಕೊಂಡಿದ್ದಾನೆ. ಅಭಾವ ಪರಿಸ್ಥಿತಿ ಇರತಕ್ಕ

ಭಾಗದಲ್ಲಿ ಕಣಿಕೆ ಹೊಟ್ಟೆಗೆ ಸಾಲ ತೆಗೆದುಕೊಂಡಿದ್ದಾನೆ ಈ ರೀತಿ ಇದಕ್ಕೆ ಮಿತಿಯೇ ಇಲ್ಲದಂತಹ ಪರಿಸ್ಥಿತಿ ರೈತನ ಮೇಲೆ ಇದೆ. ಇವುಗಳನ್ನೆಲ್ಲಾ ಪರಿಶೀಲನೆ ಮಾಡಿ ತಾವು ನಡುವಿನ ದಳ್ಳಾಳಿಗಳ ಮೂಲಕ ಹಳ್ಳಿಯಲ್ಲಿರತಕ್ಕ ಸೊಸೈಟಿಗಳಿಗೆ ಹಂಚುವ ಪದ್ಧತಿಯನ್ನು ಬದಲಾವಣೆ ಮಾಡಬೇಕು. ನೇರವಾಗಿ ಅಪೆಕ್ಸ್ ಬ್ಯಾಂಕಿನಿಂದ ಸೀದಾ ಹಳ್ಳಿ ಸೊಸೈಟಿಗಳಿಗೆ ಸಾಲವನ್ನು ಹಂಚಿದರೆ ಎರಡು ಪರ್ಸೆಂಟ್ ಬಡ್ಡಿ ಬೀಳುತ್ತದೆ 8-9 ಪರ್ಸೆಂಟ್ ಬಡ್ಡಿ ಬೀಳುವುದು ಕಡಿಮೆಯಾಗುತ್ತದೆ. ಈ ಒಂದು ಏರ್ಪಾಡನ್ನು ಮಾಡಿದರೆ ರೈತನಿಗೆ ಸಾಕಾದಷ್ಟು ಪರಿಹಾರ ಕೊಟ್ಟಂತಾಗುತ್ತದೆ ಎಂದು ಹೇಳಿ ನನ್ನ ಎರಡನೆಯ ಸೂಚನೆಯನ್ನು ಮಾಡುತ್ತೇನೆ.

ಮತ್ತೊಂದು ಸೂಚನೆ ಏನೆಂದರೆ ಈಗ ಬೆಟರ್‌ಮೆಂಟ್ ಲೆವಿ ಹಾಕಬೇಕೆಂಬ ಮಾತು ಇದೆ. ಇದು ಸಹ ಅವನಿಗೆ ಭಾರಿಯಾದಂತಹ ಪರಿಸ್ಥಿತಿ ಮತ್ತು ಪೂರ್ವಭಾವಿಯಾಗಿ ಎಲ್ಲಾ ತರಹದ ನೀರಿನ ಸೌಕರ್ಯ ಇಲ್ಲದ ಪರಿಸ್ಥಿತಿಯಲ್ಲಿ ಉದಾಹರಣೆಗೆ ನಮ್ಮ ಭಾಗದಲ್ಲಿ ಹಿಡ್ಕಲ್ ಡ್ಯಾಂ ಕಟ್ಟದ ಕೆಲಸ ನಡೆದಿದೆ ಅದು ಇನ್ನೂ ಪೂರ್ತಿಯಾಗಿಲ್ಲ. ಹೀಗಿದ್ದರೂ ಸಹ ಹಾಕಬೇಕೆಂದು ಮಾಡಿರುವುದು ಯೋಗ್ಯವಾದುದಲ್ಲ. ಅಂತಹ ಪರಿಸ್ಥಿತಿ ಇರುವುದನ್ನು ಬಿಟ್ಟುಬಿಡಬೇಕು. ಪೂರ್ತಿ ನೀರಾವರಿ ಭರವಸೆಯನ್ನು ಕೊಡದೇ ಬೆಟರ್‌ಮೆಂಟ್ ಲೆವಿ ಹಾಕತಕ್ಕ ಪರಿಸ್ಥಿತಿಆಗಬಾರದು ಎಂಬುದು ನನ್ನ ಮತ್ತೊಂದು ಸೂಚನೆ. ಮತ್ತು ಇರಿಗೇಷನ್‌ಸೆಸ್‌ವಿಚಾರವಾಗಿ ಹೇಳುವುದಾದರೆ ಈಗ ಒಂದು ಎಕರೆಗೆ ಎರಡೂವರೆ ರೂಪಾಯಿ ತೆಗೆದುಕೊಳ್ಳುತ್ತಾ ಇದ್ದೀರಿ ಕಬ್ಬು ಮತ್ತು ಬಾಳೆಗಿಡಗಳಿಗೆ 27 ವರೆ ರೂಪಾಯಿ ಸೆಸ್ ತೆಗೆದುಕೊಳ್ಳುತ್ತಾರೆ. ಇದನ್ನೆಲ್ಲಾ ನೋಡಿದರೆ ರೈತನ ತೆರಿಗೆಯ ಭಾರ ಬಹಳ ಹೆಚ್ಚಾಗಿದೆ. ಯಾರು ನೀರು ತೆಗೆದುಕೊಳ್ಳದೆ ಇದ್ದಂಥ ರೈತನ ಮೇಲೆ ನಮ್ಮ ಮುಂಬೈ ಕರ್ಣಾಟಕದಲ್ಲಿ 56-57 ರಿಂದ ಇಲ್ಲಿಯವರೆಗೂ ಇರಿಗೇಷನ್ ಸೆಸ್‌ನ್ನು ಹಾಕಿ ಅವರು ಕೊಡಬೇಕೆಂದು ಮಾಡಿದ್ದಾರೆ. ಇದು ಯಾವ ತರಹದ ನ್ಯಾಯ ಸ್ವಾಮಿ ? ಇಡೀ ಮೈಸೂರು ದೇಶದಲ್ಲಿ ಇರಿಗೇಷನ್ ಸೆಸ್ ವಸೂಲು ಮಾಡುವಂತಹ ಪರಿಸ್ಥಿತಿ ಇಲ್ಲ, ಮುಂಬೈ ಕರ್ನಾಟಕದಲ್ಲಿ ಮಾತ್ರ ಇದೆ. ಇದನ್ನು ವಿಚಾರ ಮಾಡಿ ಇಡೀ ಮೈಸೂರು ರಾಜ್ಯದಲ್ಲಿ ಇರಿಗೇಷನ್ ಸೆಸ್ ವಸೂಲು ಮಾಡಬೇಕೆಂಬ ಮಾತುಬಂದ ಕಾಲಕ್ಕೆ ಅಲ್ಲೂ ವಸೂಲು ಮಾಡುವುದಕ್ಕೆ ಅಡ್ಡಿ ಇಲ್ಲ. ಅದರ ಸಲುವಾಗಿ 56-57 ರಿಂದ ಇಲ್ಲಿಯವರೆಗೂ ವಸೂಲು ಮಾಡಬೇಕೆಂದು ಮಾಡಿರುವುದನ್ನು ಪೂರ್ತಿಯಾಗಿ ಬಿಟ್ಟುಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನೊಂದು ಮಾತು ಹೇಳಬೇಕೆಂದರೆ ಗೋಕಾಕ್ ಮಿಲ್ಸ್‌ನವರಿಗೆ 65 ಕ್ಯೂಸೆಕ್ಸ್ ನೀರನ್ನು ಕೊಡುತ್ತಾರೆ. ಅದರ ಸಲುವಾಗಿ ವರ್ಷಕ್ಕೆ ಮಿಲ್ಲಿನವರಿಂದ 15 ಸಾವಿರ ರೂಪಾಯಿ ತೆರಿಗೆ ಬರುತ್ತದೆ. ರೈತರು 110 ಕ್ಯೂಸೆಕ್ಸ್ ನೀರನ್ನು ತೆಗೆದುಕೊಳ್ಳುತ್ತಾರೆ ಅದರಿಂದ 15 ಲಕ್ಷದಿಂದ 20 ಲಕ್ಷದ ವರೆಗೂ ಸರ್ಕಾರಕ್ಕೆಉತ್ಪನ್ನ ಬರುತ್ತದೆ. ಗೋಕಾಕ್ ಮಿಲ್ಸ್‌ನವರಿಗೆ ನೀರುಕೊಡುವುದನ್ನು ಬಂದು ಮಾಡಿ ಅವರಿಗೆ ಶರಾವತಿ ವಿದ್ಯುಚ್ಛಕ್ತಿಯನ್ನು ಕೊಟ್ಟರೆ ಆ ನೀರನ್ನೆಲ್ಲಾ ರೈತರಿಗೆ ಕೊಡಬಹುದು ಅದ್ದರಿಂದ ಸರ್ಕಾರದವರಿಗೆ ಹೆಚ್ಚಿನ ಉತ್ಪನ್ನ ಬರುತ್ತದೆ ಅದೂ ಅಲ್ಲದೆ ಈಗಿನ ಆಹಾರದ ಅಭಾವದ ಪರಿಸ್ಥಿತಿಯ ಕಾಲದಲ್ಲಿ ಹೆಚ್ಚು ಆಹಾರ ಧಾನ್ಯ ಬೆಳೆಯಲಿಕ್ಕೆ ರೈತನಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಇದನ್ನು ಪರಿಶೀಲನೆಮಾಡಿ ಗೋಕಾಕ್ ಮಿಲ್‌ನವರಿಗೆ ನೀರು ಕೊಡುವುದನ್ನು ಬಂದು ಮಾಡಿ ಆ ನೀರನ್ನು ಉಪಯೋಗಮಾಡಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಬೇಕೆಂದು ಹೇಳಿ ಇಷ್ಟು ಕಾಲಾವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಅಧ್ಯಕ್ಷರೇ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಇವತ್ತಿನ ದಿವಸ ನಮ್ಮ ಮುಂದೆ 18ನೆಯ ಬಡ್ಜೆಟ್ಟನ್ನು ಮಂಡಿಸಿದ್ದಾರೆ. ಎಷ್ಟೋ ಕಷ್ಟಪಟ್ಟು ಸುಮಾರು 3 ಕೋಟಿ 80 ಲಕ್ಷ ರೂಪಾಯಿಗಳ ಖೋತಾ ಬಡ್ಜೆಟ್ಟನ್ನು ಮಂಡಿಸಿದ್ದಾರೆ ಆದರೆ ಈ 3 ಕೋಟಿ 80 ಲಕ್ಷ ರೂಪಾಯಿಗಳನ್ನು ಭರ್ತಿ ಮಾಡಲಿಕ್ಕೆ ಯಾವ ಸೂಚನೆಯನ್ನು ಸೂಚಿಸಿಲ್ಲ. ಯಾವಾಗ, ಯಾವ ಸಮಯದಲ್ಲಿ ಅಪ್ರತ್ಯಕ್ಷ ತೆರಿಗೆಯನ್ನು ಹಾಕಿ ಈ ಭರ್ತಿಯನ್ನು ತುಂಬಿಕೊಳ್ಳುತ್ತಾರೆ ಎಂಬುದು ಅರ್ಥವಾಗುತ್ತಾ ಇಲ್ಲ. ಸುಮಾರು 1921 ರಿಂದ ನಮ್ಮ ದೇಶದಲ್ಲಿ ಆಹಾರ ಅಭಾವ ಇದೆ. ಅಕ್ಕಿಯನ್ನು ಬರ್ಮಾ, ರಂಗೂನ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತಾ ಇದ್ದ ಸಂದರ್ಭ ನನ್ನ ಅನುಭವದಲ್ಲಿ ಇದೆ. ಹಿಂದೆ ಮಹಾರಾಜರ ಸರ್ಕಾರ ಇದ್ದಾಗ ಕಾಂಗ್ರೆಸ್‌ನವರು ವಿರೋಧ ಪಕ್ಷದಲ್ಲಿ ಕುಳಿತು ಮಾತನಾಡುತ್ತಾ ಇದ್ದಾಗ ರಂಗೂನ್, ಬರ್ಮಾದಿಂದ ಏಕೆ ಅಕ್ಕಿಯನ್ನು ತರಿಸಿಕೊಳ್ಳಬೇಕು, ಅದಕ್ಕೆ ಬದಲಾಗಿ ನಮ್ಮಲ್ಲೇ ನೀರಾವರಿಯನ್ನು ಅಭಿವೃದ್ಧಿ ಮಾಡಿ ನಾವೇ ಹೆಚ್ಚು ಬತ್ತವನ್ನು ಬೆಳೆಯುವುದಕ್ಕೆ ಅನುಕೂಲ ಮಾಡಿಕೊಡಬಾರದು ಎಂದು

---

† Indicates that th remarks or speeches have not been revised by the member concerned.

(ಶ್ರೀ ಕೆ. ಚೆನ್ನಬೈರೇ ಗೌಡ)

ಹೇಳುತ್ತಾ ಇದ್ದರು. ಇಂತಹ ಜನ ಈಗ ಅಧಿಕಾರಕ್ಕೆ ಬಂದು 18 ವರ್ಷಗಳಾಗಿದ್ದರೂ ಸಹ ಪರ ದೇಶಗಳವರನ್ನು ಅಥವಾ ಇತರ ರಾಜ್ಯಗಳವರನ್ನು ಬೇಡಿಕೊಳ್ಳುತ್ತಾ ಇರುವುದು ಏಕೋ ನನಗೆ ಅರ್ಥವಾಗುವುದಿಲ್ಲ. ಇದಕ್ಕೆಲ್ಲಾ ಅವರಲ್ಲಿ ಸರಿಯಾದ ಒಂದು ಪ್ರೋಗ್ರಾಂ ಇಲ್ಲ ಎಂದು ಹೇಳ ಬೇಕಾಗುತ್ತದೆ ಏಕೆಂದರೆ ಇವತ್ತು ನಾಗರೀಕ ದೇಶಗಳಲ್ಲಿ ಕಂಡು ಬಂದ ಹಾಗೆ ಜಮೀನ್‌ದಾರರು ಗಳು ಟ್ರಾಕ್ಟರುಗಳನ್ನು ಇಟ್ಟುಕೊಂಡು, ನವೀನ ರೀತಿಯ ಯಂತ್ರೋಪಕರಣಗಳನ್ನು ಉಪಯೋಗಿಸಿ ವ್ಯವಸಾಯ ಮಾಡತಕ್ಕ ಪರಿಸ್ಥಿತಿ ನಮ್ಮ ದೇಶದಲ್ಲ ಇಲ್ಲ. 50-60 ಸಾವಿರ ರೂಪಾಯಿಗಳ ಟ್ರ್ಯಾಕ್ಟರುಗಳನ್ನು ಇಟ್ಟುಕೊಳ್ಳುವುದಕ್ಕೆ ದೊಡ್ಡ ದೊಡ್ಡ ಜಮೀನ್ದಾರರುಗಳಿಗೆ ಸಾಧ್ಯವಾದೀತೇ ಹೊರತು ಸಣ್ಣಪುಟ್ಟ ವ್ಯವಸಾಯಗಾರರಿಗೆ ಈ ವ್ಯವಸ್ಥೆಯನ್ನು ಮಾಡಿಕೊಡಲು ಇವತ್ತಿನವರೆಗೂ ಸರ್ಕಾರದವರು ಆಲೋಚನೆ ಮಾಡಿಲ್ಲ. ಜಕೋಸ್ಲೋವಾಕಿಯಾದವರು 3 ಎಚ್.ಪಿ. 5 ಎಚ್.ಪಿ. 7 ಎಚ್.ಪಿ. ಟ್ರ್ಯಾಕ್ಟರುಗಳನ್ನು ಕೊಡುತ್ತಾ ಇದ್ದಾರೆ 3 ಸಾವಿರದಿಂದ 5 ಸಾವಿರ ರೂಪಾಯಿಗಳ ವರೆಗೂ ಅಂತಹ ಟ್ರ್ಯಾಕ್ಟರುಗಳು ಬೆಲೆಯಾಗುತ್ತವೆ. ಅವುಗಳನ್ನು ರೈತರಿಗೆ ಒದಗಿಸಿಕೊಟ್ಟು ಹೆಚ್ಚು ಆಹಾರವನ್ನು ಉತ್ಪನ್ನಮಾಡುವುದನ್ನು ಬಿಟ್ಟು ಬೆಂಗಳೂರಿನಲ್ಲಿ ಸ್ಕೂಟರ್, ಮೋಟಾರ್ ಸೈಕಲ್, ಅಟೋ ರಿಕ್ಷ ಇಂತಹವುಗಳನ್ನು ತರಿಸಿಕೊಡುವುದಕ್ಕೆ ಹೆಚ್ಚು ಗಮನವನ್ನು ಕೊಡುತ್ತಾ ಇರುವುದು ಎಷ್ಟು ಮಾತ್ರವೂ ಸರಿಯಾದುದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಚಿಕ್ಕ ಚಿಕ್ಕ ಟ್ರ್ಯಾಕ್ಟರುಗಳನ್ನು ತರಿಸಿಕೊಟ್ಟಿದ್ದರೆ ಟ್ರ್ಯಾಕ್ಟರುಗಳ ಮೂಲಕ ಹೆಚ್ಚು ಆಹಾರಪದಾರ್ಥ ಗಳನ್ನು ಉತ್ಪನ್ನ ಮಾಡುವುದಕ್ಕೆ ಸಾಧ್ಯವಾಗುತ್ತಾ ಇತ್ತು, ಇಷ್ಟು ದಿವಸವಾದರೂ ಕೂಡ ನಮ್ಮ ಸರ್ಕಾರದವರು ಅದನ್ನು ಮಾಡಿಲ್ಲ. ಈಗ ಲಕ್ಕವಳ್ಳಿ, ತುಂಗಭದ್ರಾ ಮುಂತಾದ ಜಲಾ ಶಯಗಳು ನಿರ್ಮಿತವಾದರೂ ಕೂಡ ಅವರ ಕೆಳಗಿರುವ ಅಚ್ಚುಕಟ್ಟು ಪೂರ್ಣವಾಗಿ ಇನ್ನೂ ಸಾಗು ವಳಿಗೆ ಬಂದಿಲ್ಲ. ಜಲಾಶಯಗಳು ಪೂರ್ಣವಾಗಿ 10-12 ವರ್ಷಗಳಾದರೂ ಸಹ ಅದಕ್ಕೆ ಸಾಕಷ್ಟು ಗಮನಕೊಟ್ಟಿಲ್ಲ. ಜಮೀನಿಲ್ಲದಿರುವವರನ್ನು ಜಮೀನಿರುವ ಕಡೆಗೆ ಕರೆದುಕೊಂಡು ಹೋಗಿ ಅವರಿಗೆ ಅಲ್ಲಿ ಬೇಕಾದ ವಸತಿ ಸೌಕರ್ಯ, ಕಾಲುಕಡ್ಡಿ ಕೊಟ್ಟು ಅವರು ಅಲ್ಲಿ ಸಂಸಾರ ಸಮೇತ ನೆಲೆಸುವಂತೆ ಮಾಡಿದರೆ ಅವರಿಗೆ ಜಮೀನು ದೊರೆತಂತೆಯೂ ಆಯಿತು, ಉಳಿದ ಕಡೆ ಜಮೀನಿನ ಒತ್ತಡವೂ ಕೂಡ ಕಡಮೆಯಾದ ಹಾಗಾಯಿತು ಮತ್ತು ನೀರಾವರಿಗೆ ಬಂದಿರುವ ಜಮೀನು ಸಾಗುವಳಿಯಾಗಿ ದೇಶಕ್ಕೆ ಆಹಾರ ಧಾನ್ಯಗಳನ್ನು ಒದಗಿಸಿದಂತೆಯೂ ಆಗುತ್ತದೆ. ಅದಕ್ಕೆ ಗಮನ ಕೊಟ್ಟು ಇದುವರೆಗೂ ಆ ಕೆಲಸ ಮಾಡಿರುವುದಿಲ್ಲ.

12-30 P.M.

ಮಂತ್ರಿಗಳು ಮಾಡುವ ಕೆಲಸವೇನೆಂದರೆ ಎಲ್ಲಾದರೂ ಒಂದು ಓಪನಿಂಗ್ ಸೆರಿಮನಿ, ಫೌಂಡೇಷನ್ ಹಾಕುವುದು ಇವು ಮಾತ್ರ. ಹೀಗಾಗಿ ಜನರಿಗೇನೂ ಉಪಯೋಗವಾಗುತ್ತಿಲ್ಲ. ಪ್ರವಾಸ ಹೋದಾಗ ಫೋಟೋ ತೆಗೆಸಿಕೊಂಡು ಅದು ಪತ್ರಿಕೆಗಳಲ್ಲಿ ಬರುವುದಕ್ಕೆ ಹೆಚ್ಚು ಗಮನ ಕೊಡುತ್ತಾರೆ ಮತ್ತು ಫೌಂಡೇಷನ್ ಕಲ್ಲುಗಳ ಮೇಲೆ ತಮ್ಮ ಹೆಸರನ್ನು ಕೆತ್ತಿಸಿಕೊಳ್ಳಲು ಆತುರ ಪಡುತ್ತಾರೆ. ಮೊನ್ನೆ ಒಂದು ಪತ್ರಿಕೆಯಲ್ಲಿ ನೋಡಿದರೆ ಹಿಂದಿ ವಿರುದ್ಧ ಮದರಾಸಿನಲ್ಲಿ ಗಲಾಟೆ ಯಾಗುತ್ತಿದ್ದಾಗ ಅದಕ್ಕೆ ಸಂಬಂಧಪಟ್ಟ ಚಿತ್ರ ಒಂದು ಕಡೆ ಇದ್ದರೆ ಇನ್ನೊಂದು ಕಡೆ ನಮ್ಮ ಆಹಾರ ಮಂತ್ರಿಗಳು ಓಪನಿಂಗ್ ಸೆರಿಮನಿ ಮಾಡಿದ ಚಿತ್ರವಿತ್ತು. ಇಂಥಾದಕ್ಕೆ ಗಮನ ಕೊಡುವ ಬದಲು ಆಹಾರದ ಉತ್ಪತ್ತಿ ಹೆಚ್ಚಲು ಗಮನಕೊಟ್ಟಿದ್ದರೆ ಅಥವ ಉಳಿತಾಯ ಮಾಡುವುದಕ್ಕೆ ಶ್ರದ್ಧೆವಹಿಸಿದ್ದರೆ ಎಷ್ಟೋ ಚೆನ್ನಾಗಿತ್ತು. ಎ. ಜಿ ಆರ್. ಸಮಿತಿ ವರದಿ, ಗುಲ್ಹಾಟಿ ಸಮಿತಿ ವರದಿಗಳು ಸರಕಾರಕ್ಕೆ ಬಂದಿದ್ದರೂ ಕೂಡ ಅವುಗಳನ್ನು ಸರಿಯಾಗಿ ಕಾರ್ಯರೂಪಕ್ಕೆ ತರಲು ಪ್ರಯತ್ನ ಪಡುತ್ತಿಲ್ಲ. ಭೂಕಂದಾಯ ಹೆಚ್ಚು ಮಾಡಲು ಹವಣಿಸುತ್ತಿದ್ದಾರೆ. 30 ವರ್ಷಗಳಿಗೊಂದು ಸಲ ಭೂಕಂದಾಯ ರಿವೈಜ್‌ಮಾಡುವುದು ವಾಡಿಕೆಯಾದರೂ ಕೂಡ ಅದನ್ನು ಏರಿಸಲೇಬೇಕೆಂಬ ನಿಯಮವಿಲ್ಲ, ವಜಾ ಮಾಡಬಹುದು, ಕಡಮೆಮಾಡಬಹುದು. ಆರ್ಥಿಕ ಪರಿಸ್ಥಿತಿ ಹೇಗಿದೆ ಎಂದು ನೋಡಿ ಸೂಕ್ತ ಕ್ರಮ ಕೈಕೊಳ್ಳಬಹುದು. ಪೂರ್ವದಲ್ಲಿ ಭೂಕಂದಾಯವೇ ದೇಶದ ದೊಡ್ಡ ವರಮಾನವಾಗಿತ್ತು. ಆಗ 3 ಕೋಟಿ ರೂಪಾಯಿ ವರಮಾನ ಅದರಿಂದ ಬರುತ್ತಿತ್ತು. ಅದೇ ಈಗ ನಿನ್ನೆ ಹಣಕಾಸಿನ ಸಚಿವರು ಹೇಳಿದಂತೆ ಮಾರಾಟ ತೆರಿಗೆ ಬಾಕಿಯೇ 3 ಕೋಟಿ ಚಿಲ್ಲರೆ ಈಗಿದೆ. ಅದು ಹೆಚ್ಚೇನೂ ಅಲ್ಲ, ನಿಧಾನವಾಗಿ ವಸೂಲಾಗುತ್ತದೆ ಎಂದು ಅವರು ಹೇಳಿದರು. ಹಿಂದೆ ಮೂರು ಕೋಟಿ ಇದ್ದ ವರಮಾನ ಇಂದು ಏರಿದೆ, ಈಗ 125 ಕೋಟಿ ವರಮಾನವಿದೆ. 19 ಕೋಟಿ ಭೂಕಂದಾಯದಿಂದ

ಬರಬಹುದೆಂದು ಅಂದಾಜು ಮಾಡಿದ್ದಾರೆ. ಇತರ ವರಮಾನ ಬೇಕಾದಷ್ಟಿರುವಾಗ ಭೂಕಂದಾಯ ಈಗ ವಜಾಮಾಡಬಹುದಾಗಿತ್ತು. ವರಮಾನ ತೆರಿಗೆ ವಸೂಲುಮಾಡಲು ಸಿಬ್ಬಂದಿಗೆ 47·66 ಪರ್ಸೆಂಟ್ ಖರ್ಚಾಗುವುದೆಂದು ಹೇಳಿದ್ದಾರೆ. ವಸೂಲು ಮಾಡುವುದಕ್ಕೆ ಸಿಬ್ಬಂದಿಗೇ ಎಂ ಟಾವರೆ ಕೋಟಿ ರೂಪಾಯಿ ಖರ್ಚಾದರೆ ತೆರಿಗೆ ಹಾಕಿ ಪ್ರಯೋಜನವೇನು ? ಇದು ಸಿಬ್ಬಂದಿಗೆ ಹೆಚ್ಚು ಖರ್ಚಾಗುತ್ತಿದೆ ಎಂಬುದನ್ನು ತೋರಿಸುತ್ತದೆ. ಇದರಿಂದ ನಿರುದ್ಯೋಗಿಗಳಿಗೆ ಉದ್ಯೋಗ ದೊರೆತಿರಬಹುದು. ಆದರೆ ದೇಶಕ್ಕೆ ವರಮಾನ ಬರುವುದು ಕಡಮೆಯಾಯಿತು. ಹಿಂದೆ 22·7ರಷ್ಟು ಸಿಬ್ಬಂದಿಗಾಗಿ ಖರ್ಚಾಗುತಿದುದ್ದು ಇಂದು 1964-65ರಲ್ಲಿ 47.66 ಆಗಿದೆ ಅಂದರೆ ಇದಕ್ಕೆ ಆದಿ ಅಂತ್ಯವಿದೆಯೇ ? ಸೇಕಡ 50 ಭಾಗ ವರಮಾನದಲ್ಲಿ ಸಿಬ್ಬಂದಿಗಾಗಿ ಕೊಡುವುದೆಂದರೆ ಯಾವ ದೇಶದಲ್ಲಿರುವುದನ್ನು ನೋಡಿ ಜಾರಿಗೆ ತಂದರು ಎಂದು ಕೇಳಬೇಕಾಗುತ್ತದೆ. ಇದನ್ನು ಹೇಗೆ ನಿಗದಿ ಮಾಡಿದರೆಂಬುದೇ ಅರ್ಥವಾಗುವುದಿಲ್ಲ.

ಇನ್ನು ಎನ್. ಜಿ. ಓ.ಗಳ ವಿಚಾರ. ಮೊನ್ನೆ ಮುಖ್ಯ ಮಂತ್ರಿಗಳು ಅವರ ವಿಚಾರದಲ್ಲಿ ತಮಗೆ ಸಹಾನುಭೂತಿ ಇದೆ, ಆದರೆ ಅದಕ್ಕೆ ದಾರಿ ತೋರಿಸಿ ಎಂದು ಹೇಳಿದರು. ಪಾನನಿರೋಧವನ್ನು ತೆಗೆದುಹಾಕಿ ಅದರಿಂದ ಉಳಿಯುವ ಮತ್ತು ಬರುವ ಹಣದಿಂದ ಕೊಡಬಹುದು. ಸಂಖ್ಯಾಬಲ ಬೇಕಾದರೆ ಕಡಮೆಮಾಡಿ. ಆದರೆ ನೌಕರರಿಗೆ ಹೊಟ್ಟೆಬಟ್ಟೆಗಳಿಗೆ ಸಾಕಾಗುವಷ್ಟಾದರೂ ಸರಿಯಾದ ಸಂಬಳ ಕೊಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಎಸ್. ಪಿ. ಅಗ್ನಿಹೋತ್ರಿ (ಧಾರವಾಡ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ರಾಜ್ಯದ ಆರ್ಥಿಕ ಮಂತ್ರಿಗಳು ಮಂಡಿಸಿರುವ 1965-66ನೆಯ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ನಾನು ಕೆಲವು ಸಲಹೆಗಳನ್ನು ಮಾಡಲು ಬಯಸುತ್ತೇನೆ. ಈ ವರ್ಷ ಸಾಧಾರಣವಾಗಿ 4 ಕೋಟಿ ರೂಪಾಯಿಗಳ ಕೊರತೆಯ ಮುಂಗಡ ಪತ್ರ ಯಾವುದೇ ತೆರಿಗೆಯನ್ನು ಹೊಸದಾಗಿ ಹಾಕದೆ ಮಂಡಿಸಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಇನ್ನು ನಾನು ನನಗೆ ಕೊಟ್ಟಿರುವ 10 ನಿಮಿಷಗಳೊಳಗಾಗಿ ಎಲ್ಲವನ್ನೂ ಹೇಳುವುದಕ್ಕೆ ಪ್ರಯತ್ನ ಪಡುತ್ತೇನೆ. ಉಳಿದುದನ್ನು ಮುಂದೆ ಅವಕಾಶ ಕೊಟ್ಟಾಗ ಹೇಳುತ್ತೇನೆ. ಒಕ್ಕಲುತನದ ವಿಷಯ ಹೇಳಬೇಕೆಂದರೆ ನಮ್ಮಲ್ಲಿ ಸೇಕಡ 70ರಷ್ಟು ಜನ ವ್ಯವಸಾಯ, ಒಕ್ಕಲುತನ ಮಾಡುತ್ತಿದ್ದಾರೆ. ಸರಕಾರದವರು ಅವರಿಗೆ ಬೇಕಾದ ಸೌಲಭ್ಯಗಳನ್ನೊದಗಿಸುವುದಾಗಿ ಹೇಳಿದ್ದಂತೆ ನಾವು ಒಕ್ಕಲುತನ ಮಾಡುವವರಿಗೆ ತಿಳಿಸಿದೆವು. ಆದರೆ ಸರಕಾರ ಎಷ್ಟರಮಟ್ಟಿಗೆ ಅದರಂತೆ ಸಹಾಯಮಾಡಿದೆ ಎಂಬುದನ್ನು ವಿಚಾರಮಾಡಬೇಕಾಗಿದೆ. ಟ್ರ್ಯಾಕ್ಟರ್ ಯೂನಿಟ್, ಡೀಪ್ ಮತ್ತು ಷ್ಯಾಲೋ ಪ್ಲೋಯಿಂಗ್ ಮತ್ತು ಬುಲ್‌ಡೋಜರ್ ಎಂದು ಮೂರು ಯಂತ್ರಗಳನ್ನು ಕೊಟ್ಟು ಒಂದು ಯೂನಿಟ್ ಮಾಡಿದರು. ಆದರೆ ನಮ್ಮ ಭಾಗದಲ್ಲಿ ಯಾವ ಟ್ರ್ಯಾಕ್ಟರೂ ಕೆಲಸಮಾಡುತ್ತಿಲ್ಲ. ಯಾವ ಬುಲ್‌ಡೋಜರು, ಯಾವ ಷ್ಯಾಲೋ ಪ್ಲೋಯಿಂಗ್ ಟ್ರ್ಯಾಕ್ಟರು ಸಹ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ, ಯಾವಾಗಲೂ ಅವು ರಿಪೇರಿಯಲ್ಲೇ ಇರುತ್ತವೆ. ಕೇಳಿದರೆ ರಿಪೇರಿಮಾಡಿ ಕೊಡುವುದಕ್ಕೆ ಹುಕುಂ ಬಂದಿಲ್ಲ, ಮಾಡಲು ಸಾಧ್ಯವಿಲ್ಲ ಎಂದು ಆಫೀಸರು ಹೇಳುತ್ತಾರೆ. ಅದನ್ನು ಜನರಿಗೆ ನಾವು ಹೇಳಬೇಕಾಗಿದೆ. ರಿಪೇರಿಯಾದ ಮೇಲೆ ಸಿಕ್ಕುತ್ತದೆ ಎಂದು ನಾವು ಹೇಳುತ್ತಿದ್ದೇವೆ. ಉತ್ತಮ ಬೀಜ ಕೊಡುವುದಾಗಿ ಹೇಳಿದ್ದರು ; ಅದನ್ನು 4-5 ಜನರಿಗೆ ಕೊಟ್ಟರೆ ಸಾಲದು, ಎಷ್ಟು ಜನರಿಗೆ ಬೇಕೋ ಅವರಿಗೆಲ್ಲಾ ದೊರೆಯಬೇಕು. ಆ ರೀತಿ ದೊರೆಯುತ್ತಿಲ್ಲ. ರಸಾಯನಿಕ ಗೊಬ್ಬರ ಹೆಚ್ಚು ಬೇಕೆಂದು ಕೇಳಿದಾಗ ಕೊಡದಿದ್ದರೆ ಹೇಗೆ ಹೆಚ್ಚು ಬೆಳೆ ತೆಗೆಯುವುದು ಮತ್ತು ನಾವೇನು ಸಮಾಧಾನ ಹೇಳುವುದು ? ಗೊಬ್ಬರ ಕೊಡುತ್ತಾರೆಂದು ಹೇಳಿದರೆ ಎರಡನೆ ದಿವಸ ದೊರೆಯದಿದ್ದರೆ ಕೊಡಿಸುವಂತೆ ನಮ್ಮನ್ನೇ ಕೇಳುತ್ತಾರೆ. ಆದರೆ ಆಗ ಅದು ದೊರೆಯುವುದಿಲ್ಲ. ಹೀಗಾಗಿ ಒಕ್ಕಲುತನದ ಬಗ್ಗೆ ನಮ್ಮ ಧೋರಣೆಯೆಲ್ಲಾ ಬರೀ ಕಾಗದದಲ್ಲೇ ಉಳಿದಿದೆ. ಎಲ್ಲಿ ನೋಡಿದರೂ ಜಿಲ್ಲೆಗೊಬ್ಬರು ಅಧಿಕಾರಿ, ತಾಲ್ಲೂಕಿಗೊಬ್ಬರು ಅಧಿಕಾರಿ ಮತ್ತು ಅವರ ಕೆಳಗೆ ಅಗ್ರಿಕಲ್ಚರಲ್ ಅಸಿಸ್ಟೆಂಟ್ ಹೀಗೆ ಅಧಿಕಾರಿಗಳ ಸಂಖ್ಯೆಮಾತ್ರ ಜಾಸ್ತಿಯಾಗಿದೆ. ಅಷ್ಟೇ ಹೊರತು ಕೆಲಸವಾಗಿಲ್ಲ. ಈ ರೀತಿಯಾಗಿ ಒಕ್ಕಲುತನ ಮಾಡುವವರಿಗೆ ಬಹಳ ಕಷ್ಟವಾಗಿದೆ. ಎಲ್ಲಿಯವರೆಗೆ ಸರಿಯಾದ ಸುಧಾರಣೆಯಾಗುವುದಿಲ್ಲ ಅಲ್ಲಿಯವರೆಗೆ ಆಹಾರ ಪರಿಸ್ಥಿತಿ ಸುಧಾರಿಸುವುದಿಲ್ಲ. ಮತ್ತು ರಾಜ್ಯದಲ್ಲಿ ಶಾಂತಿ ನೆಲಸುವುದಿಲ್ಲ. ಪ್ರತಿಯೊಂದು ಜಿಲ್ಲೆಗೂ ಕೊಟ್ಟ ಟ್ರ್ಯಾಕ್ಟರ್ ಯೂನಿಟ್ ಸರಿಯಾಗಿ ಕೆಲಸಮಾಡದಿದ್ದರೆ, ಗೊಬ್ಬರ, ಬೀಜ ಎಲ್ಲರಿಗೂ ವೇಳೆಗೆ ಸರಿಯಾಗಿ ದೊರೆಯದಿದ್ದರೆ, ಮೇಲ್ವಿಚಾರಣೆ ದಕ್ಷ ರೀತಿಯಿಂದ ನಡೆಯದಿದ್ದರೆ ಎ.ಡಿ.ಓ. ಬಿ.ಡಿ.ಓ. ಮುಂತಾದವರು ಬೇಕಾದಷ್ಟಿದ್ದರೂ ಒಕ್ಕಲುತನಕ್ಕೆ ಸರಿಯಾದ ಪ್ರಾಶಸ್ತ್ಯ ದೊರೆತಂತಾಗುವುದಿಲ್ಲ. ಅದಕ್ಕಾಗಿ ಒಕ್ಕಲತನ ಖಾತೆ ಸರಿಯಾಗಿ ನಡೆಯಲು ಅದಕ್ಕೆ ಅವಶ್ಯಕವಾದ ಟ್ರ್ಯಾಕ್ಟರು

(ಎಸ್. ವಿ. ಅಗ್ನಿಹೋತ್ರಿ)

ಮೊದಲಾದುವು ಸರಿಯಾಗಿ ಸಕಾಲದಲ್ಲಿ ದೊರೆಯುವಂತೆ ನೋಡಿಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಕೋ ಆಪರೇಷನ್ ಬಗ್ಗೆ ಹೇಳುವುದಾದರೆ ಧಾರವಾಡ, ಬೆಳಗಾಂ, ಬಿಜಾಪುರ, ಕಾರವಾರ, ಉತ್ತರ ಕನ್ನಡ ಮುಂತಾದ ಕಡೆಗಳಲ್ಲಿ ಅದು ನಡೆಯುವುದನ್ನು ನೋಡಿ ಮುಂಬಯಿ ಪ್ರಾಂತದಲ್ಲಿ ಚೆನ್ನಾಗಿ ಕೆಲಸಮಾಡುತ್ತಿದೆ ಎಂದು ಪ್ರಶಂಸೆಮಾಡಿದ್ದಾರೆ. ಆದರೆ ಕೋಆಪರೇಟಿವ್ ಸೊಸೈಟಿಗಳಲ್ಲಿ ವಿವಿಧೋದ್ದೇಶ ಸೊಸೈಟಿ, ಅನಿಯಮಿತ ಸೊಸೈಟಿ, ನಿಯಮಿತ ಸೊಸೈಟಿ ಮುಂತಾದುವು ಇದ್ದರೂ ಸಕಾಲದಲ್ಲಿ ಸಾಲ ದೊರೆಯುತ್ತಿಲ್ಲ ಮತ್ತು ಒಂದು ರೀತಿಯಿಂದ ಅದು ಅವರಿಗೆ ಸಿಕ್ಕುವುದಿಲ್ಲ. ಆ ಸಾಲ ಬರುವ ವೇಳೆಗೆ ಅವರು ಬೇರೆ ಕಡೆ ಸಾಲ ಮಾಡಿರುತ್ತಾರೆ, ಸಾಲ ಸೊಸೈಟಿಯಿಂದ ಬಂದ ಕೂಡಲೆ ಅದನ್ನು ಬೇರೆ ಕಡೆ ಸಾಲ ತೆಗೆದುಕೊಂಡಿರುವುದಕ್ಕೆ ಕೊಟ್ಟುಬಿಡುವುದರಿಂದ ಕೈಲಿ ಹಣವೇನೂ ಉಳಿಯುವುದಿಲ್ಲ. ಈ ರೀತಿ ಇದೆ.

ಸರ್ಕಾರ ರಿಸರ್ವ್ ಬ್ಯಾಂಕಿನಿಂದ ನೂರಕ್ಕೆ ಎರಡೂವರೆಯಂತೆ ಸಾಲವಾಗಿ ಹಣ ತೆಗೆದುಕೊಂಡು ಅದನ್ನು ಏಳೂವರೆಯಂತೆ ಒಕ್ಕಲಿಗರಿಗೆ ಕೊಟ್ಟು ನೂರಕ್ಕೆ ಐದರಂತೆ ಬರುವ ಹೆಚ್ಚುವರಿಯನ್ನು ಅಧಿಕಾರಿಗಳಿಗೂ ಮತ್ತು ಸರ್ಕಾರದ ಸಲಕರಣೆಗಳಿಗೂ ಒದಗಿಸಿದ ಪ್ರಸಂಗ ಬಂದಿರುತ್ತದೆ.

ಅಧ್ಯಕ್ಷರು.—ಆ ವಿಚಾರದಲ್ಲಿ ಹಣಕಾಸಿನ ಸಚಿವರು ವಿವರಣೆಯನ್ನು ಕೊಟ್ಟರು.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಅದರ ವಿಷಯವಾಗಿ ಇಷ್ಟು ಹೇಳುತ್ತೇನೆ. ಈಗ ಇರುವ ಎಲ್ಲ ತರಹ ಸೊಸೈಟಿಗಳನ್ನೂ ತೆಗೆದು ಹಾಕಿ. ಪ್ರತಿಯೊಂದು ಪಂಚಾಯಿತಿ ಇರುವ ಕಡೆಯೂ ಒಂದೊಂದು ಸರ್ವಿಸ್ ಕೋಆಪರೇಟಿವ್ ಸೊಸೈಟಿಯನ್ನು ಮಾಡಿದರೆ ವಿವಿಧೋದ್ದೇಶದಿಂದ ಸಾಲ ಕೊಡುವುದು, ನಿಯಮಿತ ಸಾಲವನ್ನು ಕೊಡುವುದು, ಕಬ್ಬಿಣ, ಗೊಬ್ಬರ, ಬೀಜ ಇವೆಲ್ಲವನ್ನೂ ಕೂಡ ಒಂದೇ ಸೊಸೈಟಿಯಿಂದ ರೈತರಿಗೆ ಕೊಟ್ಟರೆ ಯೋಗ್ಯವಿತರಣೆಯಾಗುತ್ತದೆ ಮತ್ತು ಸೊಸೈಟಿಯ ಸದಸ್ಯರು ಸಹಕಾರ ತತ್ವವನ್ನು ತಿಳಿದುಕೊಳ್ಳುವುದಕ್ಕೆ ಸಹಾಯವಾಗಿ ಎಲ್ಲರಿಗೂ ಸಿಕ್ಕುವ ಸವಲತ್ತುಗಳು ಯೋಗ್ಯ ರೀತಿಯಲ್ಲಿ ಸಿಕ್ಕಿ ಅಧಿಕಾರಿಗಳು ತಾವಾಗಿಯೇ ಕಡಮೆ ಆಗುತ್ತಾರೆ. ಎಲ್ಲೆಲ್ಲಿ ಗ್ರೂಪ್ ಪಂಚಾಯಿತಿ ಇದೆಯೋ ಅಥವಾ ಸ್ವತಂತ್ರ ಪಂಚಾಯಿತಿ ಇದೆಯೋ ಅಲ್ಲಿ ಒಂದೊಂದು ಸರ್ವಿಸ್ ಕೋಆಪರೇಟಿವ್ ಮಾಡಿಕೊಂಡರೆ ಸಹಕಾರ ಸಂಘಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತವೆಂದು ನಾನು ಭಾವಿಸುತ್ತೇನೆ.

ಶಿಕ್ಷಣಕ್ಕಾಗಿ ಅರ್ಥ ಸಚಿವರು ಬೇಕಾದಷ್ಟು ಹಣವನ್ನು ಒದಗಿಸಿದ್ದಾರೆ. ಶಿಕ್ಷಣ ಯೋಗ್ಯ ರೀತಿಯಿಂದ ಎಲ್ಲರಿಗೂ ಸಿಕ್ಕುವಂತೆ ಶಿಕ್ಷಣ ಮಂತ್ರಿಗಳು ಪ್ರಯತ್ನ ಮಾಡುತ್ತಿದ್ದಾರೆ. ಒಂದೇ ಒಂದು ವಿನಂತಿಯನ್ನು ಇಲ್ಲಿ ಮಾಡಬೇಕಾಗಿದೆ. ಅಲ್ಲಿ ದುಡಿಯುವಂಥ ಶಿಕ್ಷಕರಿಗೆ ಯೋಗ್ಯ ರೀತಿಯಿಂದ ಸರ್ಕಾರ ನೋಡಿಕೊಳ್ಳುವುದಿಲ್ಲ ಎಂದು ನನ್ನ ಭಾವನೆ. ಎಲ್ಲಕ್ಕೂ ಮುಂಚಿತವಾಗಿ ಟ್ರೈನಿಂಗಿಗೆ ಕಳಿಸಿಕೊಡತಕ್ಕವರಿಗೆ ಆ ಕಾಲದಲ್ಲಿ ಅವರಿಗೆ ದೊರಕುವಂಥ ಪೂರ್ಣ ಪಗಾರವನ್ನು ಕೊಟ್ಟು ಕಳಿಸಬೇಕು. ಕೇವಲ 50 ರೂಪಾಯಿ ಸ್ಟೈಪೆಂಡ್ ಮೇಲೆ ಅವರನ್ನು ಟ್ರೇನಿಂಗಿಗೆ ಕಳಿಸಿದರೆ ಅದರಲ್ಲಿ ಅವರ ಮನೆಯನ್ನೂ ನಡೆಸಿಕೊಂಡು ಟ್ರೇನಿಂಗ್ ಎಲ್ಲಿ ಪಡೆಯುತ್ತಾರೆಯೋ ಅಲ್ಲಿ ತನ್ನ ಖರ್ಚನ್ನೂ ನೋಡಿಕೊಂಡು ಟ್ರೇನಿಂಗ್ ಪಡೆಯುವುದು ಎಂದರೆ ಬಹಳ ಕಷ್ಟವಾಗುತ್ತದೆ. ಅವರಿಗೆ ಪೂರ್ತಿ ಪಗಾರವನ್ನು ಕೊಡಲಿಕ್ಕೆ ಹಣವಿಲ್ಲ ಎಂದು ಹೇಳುತ್ತಾರೆ. ನಾವು ಶಿಕ್ಷಣಕ್ಕೆ ಬೇಕಾದಷ್ಟು ಹಣವನ್ನು ಕೊಟ್ಟರೂ ಶಿಕ್ಷಕರಿಗೆ ಏನೂ ಮಾಡುವುದಿಲ್ಲ. ಇದರಿಂದ ಅನ್ಯಾಯವಾಗಿ ತೊಂದರೆಯಾಗುತ್ತಿದೆ. ಈ ಅನ್ಯಾಯವನ್ನು ಸರಿಪಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಉರ್ದು ಟ್ರೇನಿಂಗ್ ಕಾಲೇಜು ಒಂದಿದೆ. ಅದರಲ್ಲಿ ಉರ್ದು ಟೀಚರ್ ಇದ್ದಾರೆ. ಅವರು ಟ್ರೈನಿಂಗಿಗೆ ಹೋಗಿ ಬಂದರೆ ಮುಂದಿನ ಇನ್‌ಕ್ರಿಮೆಂಟುಗಳು ಸಿಕ್ಕುತ್ತವೆ. ಟ್ರೈನಿಂಗಿಗೆ ಕಳಿಸಲು ಸಾಧ್ಯವಿಲ್ಲವಾಗಿದೆ. 15 ವರ್ಷದ ತನಕ ಟ್ರೈನಿಂಗಿಗೆ ಕಳಿಸದೆ ಇದ್ದರೆ ಅವರಿಗೆ ಸಿಕ್ಕುವ ಇನ್‌ಕ್ರಿಮೆಂಟು ಸಿಕ್ಕದೆ ಹೋಗುತ್ತದೆ. ಆದುದರಿಂದ ಟ್ರೈನಿಂಗಿಗೆ ಕಳಿಸುವುದು ಆಗದೆ ಇದ್ದರೂ ಕೂಡ ಅವರಿಗೆ ನಿಲ್ಲಿಸಿರತಕ್ಕ ಇನ್‌ಕ್ರಿಮೆಂಟುಗಳನ್ನು ಅವರಿಗೆ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಖಾದಿ ಬೋರ್ಡ್‌ಗೆ ರಾಜ್ಯ ಸರ್ಕಾರದಿಂದ 8 ಲಕ್ಷ ರೂಪಾಯಿ ಕೊಡುತ್ತಾರೆ. ಕಮಿಷನ್‌ನಿಂದ ಒಂದು ಕೋಟಿ ಏಳು ಲಕ್ಷ ರೂಪಾಯಿ ಕೊಟ್ಟರು ಕೂಡ ಲೆಕ್ಕಪತ್ರಗಳು ಆಡಿಟ್ ಆಗಿಲ್ಲ ಎಂದು ಹೇಳುವಂಥಾದ್ದು ಸರಿಯಲ್ಲ. ಸರ್ಕಾರದ ಹಣ ದುರುಪಯೋಗವಾಗುತ್ತಿದೆ ಎಂದು ನನ್ನ ಮನಸ್ಸಿಗೆ ಬರುತ್ತದೆ. ಇದಕ್ಕೆ ಒಂದು ಕಾರ್ಪೊರೇಷನ್ ಮಾಡಿ ಅದಕ್ಕೆ ಸರ್ಕಾರದಿಂದ

ಕೆಲವೊಂದು ಷೇರು ಹಣವನ್ನು ಕೊಡಿರಿ. ಸರ್ಕಾರಕ್ಕೂ ಅದಕ್ಕೂ ಇರುವ ಸಂಬಂಧವನ್ನು ತಪ್ಪಿಸಿ ಸರ್ಕಾರದಿಂದ ಅದಕ್ಕೆ ಹಣವನ್ನು ಈಡು ಮಾಡುವಂಥ ಪ್ರಸಂಗವನ್ನು ತಪ್ಪಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಖಾದಿ ಬೋರ್ಡ್ ಕೈಗಾರಿಕೆಗಳನ್ನು ಮತ್ತು ಗ್ರಾಮೋದ್ಯೋಗಗಳನ್ನು ನಡೆಸುತ್ತಿದೆ. ಒಂದು ಉದಾಹರಣೆ ಹೇಳಬೇಕಾದರೆ, ನಾನು ವಿಧಾನ ಸಭೆಯ ಸದಸ್ಯನಾಗಿದ್ದೇನೆಂದು ತಿಳಿದು ನಾಲ್ಕು ಚಲೋ ಮಾತುಗಳನ್ನು ಬರೆಯಬೇಕೆಂದು ಒಂದು ಸಂಸ್ಥೆಗೆ ಕರೆದುಕೊಂಡು ಹೋದರು. ಒಂದು ಕಡೆ ಕುಸುಬೆ ಎಣ್ಣೆ, ಜೇನು ತುಪ್ಪ, ಸಬಕಾರ ಪುಡಿ, ಕಡ್ಡಿಪೆಟ್ಟಿಗೆ ಮತ್ತು ಅರಿವೆ ಹೀಗೆ ಎಲ್ಲವನ್ನೂ ತಯಾರು ಮಾಡುವುದನ್ನು ತೋರಿಸಲಿಕ್ಕೆ ಕರೆದುಕೊಂಡು ಹೋದರು. ಕೆಲವು ಹೆಣ್ಣು ಮಕ್ಕಳು ಕುಸುಬೆ ಎಣ್ಣೆಯನ್ನು ಒಗ್ಗರಣೆ ಹಾಕಲಿಕ್ಕೂ, ಚಪಾತಿಗೆ ಸವರಲು ಜೇನುತುಪ್ಪವನ್ನೂ ತೆಗೆದು ಕೊಂಡು ಹೋದರು. ಒಬ್ಬಿಬ್ಬರು ಅಲ್ಲಿದ್ದ ಸಬಕಾರ ಪುಡಿಯನ್ನೂ ಇನ್ನು ಕೆಲವರು ಅಲ್ಲಿ ಇಸ್ತ್ರಿ ಮಾಡಿದ್ದ ಬಟ್ಟೆಗಳನ್ನೂ ಹಾಕಿಕೊಂಡು ನನ್ನನ್ನು ತೋರಿಸಲಿಕ್ಕೆ ಕರೆದುಕೊಂಡು ಹೋಗಲಿಕ್ಕೆ ಬಂದರು. ಇಂಥ ಪ್ರಸಂಗಗಳು ನಡೆದರೆ ರೈತರಿಗೆ ಏನು ಸವಲತ್ತುಗಳು ಸಿಕ್ಕಬಹುದು, ನಾವು ಆಹಾರ ಪರಿಸ್ಥಿತಿಯನ್ನು ಹೇಗೆ ಎದುರಿಸಬಹುದು ಎನ್ನುವುದನ್ನೆಲ್ಲಯೋಚಿಸಬೇಕು. ಸರ್ಕಾರದವರು ಇಂಥದ್ದೆಲ್ಲ ನಡೆಯದಂತೆ ಲಕ್ಷ್ಯ ಕೊಡಬೇಕು ಎಂದು ವಿನಂತಿ ಮಾಡಿಕೊಂಡು ಹತ್ತು ನಿಮಿಷ ಕೆಲವೊಂದು ವಿಷಯಗಳನ್ನು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Sri SANJEEVANATH AIKALA (Suratkal).—Mr. Speaker, Sir, this Budget Estimate as presented by our Finance Minister, reflects the true picture of an incompetent Government headed by an incorrigible Ministry. I say, incorrigible, because we trusted that this Ministry would consider all the criticisms levelled against them by Members of this House last year and thought that the Budget presented this year would be devoid of all those criticisms. But, unfortunately, we find the same picture repeated here.

Sir, let me first speak about the very serious problem, that is, food situation in the State, with particular reference to my district. The situation that is prevalent in my district is similar to that of the entire State. For the last ten months, the situation in my district is going from bad to worse. From January onwards, the leanest month in our district, people were given only half a Kg. of rice per day per family. Sir, can any one imagine that this small quantity of rice would be sufficient for the entire family? The Revenue Minister who makes statements day in and day out, says that there is no scarcity of food grains. What was the situation in my district? The first crop comes up in the month of September and November, and Most of the paddy would go to neighbouring districts like Hassan, Chikmagalur, Coorg and Shimoga. In January and February, when our district wanted paddy, this inter-district movement ban was imposed and there has been entirely no paddy trade between my district and the neighbouring districts. Sir, the other day a serious situation of non-availability of rice came up in my district. I went to Shimoga with a permit from the Deputy Commissioner of my district to import three lorry loads of paddy from Shimoga. I contacted the Deputy Commissioner of Shimoga and he was appraised of the serious situation prevailing in my district due to non-availability of rice and also showed the permit obtained from the Deputy Commissioner of my district. There are 133 millers in the entire Shimoga district and every miller says that he has more than 1,000

(SRI SANJEEVANATH AIKALA)

quintals of rice in stock after giving the Government quota. But, the Deputy Commissioner did not allow even one lorry of rice from Shimoga to go out. But, somehow or other, stealthily lorry loads of rice goes out of Shimoga to places like Dharwar and other North Karnatak districts. Our district will face a very serious situation after 2 or 3 weeks if rice is not sent there. What is the price of rice in my district? For 39 kilos the price has risen to Rs. 45 to 50 whereas in the last year it was between Rs. 20 and 25. Huge quantities of rice are available with millers in Shimoga. Does this show the co-operation of the Ministry—this incorrigible Ministry? This situation is known to our Director of Food Supplies and to the Revenue Minister and still they go on merry-making and enjoying.

SRI C. J. MUCKANNAPPA.—What is the remedy!

SRI SANJEEVANATH AIKALA.—The remedy it that the inter-district ban should be removed and free flow of foodgrains allowed. If this Government does not remove this ban, they will face a serious situation. The people will reply in the streets of Mangalore and Udipi. Let the Government make a serious note of it. If they have shown patience for so long it is out of their kindness and goodness. If the Government does not realise this situation and does not remove the inter-district ban, I think the stiuation will become worse. The Food Corporation Chairman is doing his best but I can frankly say that the Food Corporation is a big fraud and hoax. It was conceived by the Central Government to deceive the people and to throw the blame on some others. What we want is not an agency to distribute the foodgrains but what we want is an agency to grow more food and to give more incentives for the growth of food. There are the normal channels *e.g* traders, co-operative societies and fair-price shops to deal with distribution. It is a clear case of officers, salesmen and purchasers at a salary of Rs. 1,500 to 2,000 and with a big establishment. If the Finance Minister has the guts, let him impress upon the Central Government that there is no need for a Food Corporation as far as our State is concerned. As a matter of fact, such a Food Corporation need not be there anywhere else also.

About Shimoga, I need not dilate here because I have already written a letter to the Director of Food Supplies and the Hon'ble Revenue Minister.

Another small incident is this. About 1,500 labourers who have come from Andhra Pradesh are now working on the railway line in Mangalore. They are accustomed to coarse raw rice and the Deputy Commissioner of South Kanara permitted the contractor to get 1,200 quintals per fortnight from the Deputy Commissioner Shimoga District. That contractor went there and approached the Deputy Commissioner, Shimoga and apprised him of the serious situation and how the workers are suffering. They are accustomed to either jowar bread or coarse rice.

Here, I regret to say that the Deputy Commissioner was incorrigible. He refused to give permission to transport the rice from the millers. So, these workers are not able to work there and hundreds of them are going back to their place. The Public Works Minister may say later on that the work could not be completed because of this. Proper discretion is not left to the Deputy Commissioners to give permission whenever such a situation arises. These are the things which I request the Hon'ble the Finance Minister to look into.

Now, I come to the war that is raging between the Govenment and the N.G.Os. They held a meeting on 27th January 1965 and demanded extra D.A., H.R.A. and C.A. They had a protest march on 13 th February 1965. Then, they had a silent protest. Then, they will adopt go-slow policy and finally what methods they will resort to I do not know. Our Finance Minister says that he has pleaded with the Finance Commission to give more salaries to the N.G.Os. But what has the Finance Commission to do with this ? The Finance Commission is there only to allocate the taxes to the various States. The neighbouring States have not consulted the Finance Commission for increasing their D.A. or C.A. This is simply an eye-wash. I agree with the Hon'ble Member Sri Venkatagiriyappa that unless a situation is forced upon the Government, this Government will never yield. Of course, I am not for encouraging disloyalty or indiscipline among the N.G.Os. But I believe that they are doing a good thing at the right time. It is a legitimate demand. If the Government has a mind, they can find resources ; they can cut short infructuous expenditure or unnecessary departments which now exist and the over-burdened Ministry which alone will yield a big slice. With these observations, I conclude my speech.

† SRI B. D. JATTI.—Mr. Speaker, Sir, several members have raised the question that the budget estimates do not reveal the real deficit This is not correct. The deficit of revenue account of Rs. 3.91 crores for 1965-66 is correct as it has taken into account the increased D.A. and H.R.A. granted to the Government servants with effect from 1-1-65. As far as the revised estimates are concerned, the correct position has been indicated. The sources position for the year was reviewed by the Planning Commission twice and they assessed the overall gap at about Rs. twelve crores. Since then, several changes have occurred and additional commitments had to be incurred. This gap may therefore increase further. But as has been the experience in earlier years usually there will be shortfalls in expenditure and the ultimate gap may go beyond Rs. 11 to 12 crores during 1964-65. During discussions with the Planning Commission it was indicated that the State could anticipate Central assistance of about Rs. 7-8 crores over and above what was promised for the plan. In the estimates now placed before this Hon'ble House, an additional assistance of Rs. 8 crores has been taken credit of under the revised estimated for the year 1964-65. For the year 1965-66, the plan outlay has been fixed at Rs. 55·16 crores with a gap of Rs. 8 crores. The State's resources were placed at about Rs. 14 crores and Central

(SRI B. D. JATTI)

Assistance fixed was Rs. 34 crores. So, we will be getting Central assistance of Rs. 20 to 22 crores over and above Rs. 136 crores fixed for the State.

The State's resource of Rs.14 crores takes into account the following items :

1.	Public borrowing including loan to be raised by the Mysore State Electricity Board ...	Rs.	7.90 crores.
2.	Land revenue Resettlement (It may commence from July) ...		3.00 ,,
3.	Increase under water rates ...		0.50 ,,
4	Electricity tariff rates ...		0.50 ,,
5.	Increased recovery over and above Rs. 5 crores ...		1.00 ,,
6.	Share in small savings ...		3.50 ,,
7.	Repayment of Government of India loans ...		14.00 ,,

1-00 P.M.

In the estimates now placed before this House the yield from items (2) to (4), namely, land revenue resettlement, increase under water rates, electricity tariff rates, have however not been taken into account, but to implement even the plan outlay of Rs. 48.16 crores it is very necessary that needful action has to be taken so that the resources promised can be achieved. Then for the next year we have budgeted for a full outlay of Rs. 56.16 crores which leaves a gap of Rs. 8 crores We have also assumed an assistance of Rs. 8 crores from the Government of India. If this assistance is not forthcoming and if we implement the plan of Rs. 56 crores then there will be over-all deficit of Rs. 15 to 16 crores from next year. In all probability the Government of India may come to our aid, but it all depends as to what extent we could raise our resources and we must do our best in this behalf. But in case the Government of India do not help us the only way is to regulate our expenditure programme and adjust and see that the outlay of Rs. 56 crores is implemented in the next year. It is no doubt true that the grant of pay scales and allowances to Government servants on par with Madras will further worsen the position, but we have requested the Finance Commission to take these details into account while giving its award. With the grant of this increase the efficiency of the staff is expected to be better and in the long run it may be possible to reduce the staff also by readjustment over a period of years. I have already explained in my budget speech that our financial position is difficult because our investments have yet to commence yielding returns. We cannot stop the plan in the middle. but we must do our best to implement the plan. I have no doubt that Hon'ble Member will extend their co-operation for raising resources. We cannot depend on the Centre for cent per cent assistance because the

Government of India's resources are also limited. Atleast in the 4th plan a solution must be found by which the deficit budgets are avoided. This question will be discussed when the plan out lay for the 4th plan is determined by the Planning Commission in the very near future.

Displaced Goldsmiths.

A specific point was raised by the Hon'ble Member Sri Range Gowda that all possible help has been given to displaced goldsmiths for the entire State, but his taluka has been neglected and nothing is being done. I am sorry that he is not present here now. I will state the facts which I know personally because it is dealt with by the Finance Department. A sum of Rs. 40,000 was sanctioned to V.K.S. Society, Magadi Taluk for starting smithy, carpentry tools. The society went into production since 16-11-1964 and the value of its production is estimated at Rs. 1,500 per month. The total number of members in the society is 39. Then the second item which has been sanctioned to individual members is in the form of loan. The amount so far sanctioned to Magadi taluk is Rs. 2,100. In all five displaced goldsmiths approached the Government and for 3 members Rs. 500 each has been sanctioned and for the remaining two persons Rs. 300 each has been sanctioned. So I do not know how the Hon'ble member came to the conclusion that Government was not doing anything to help the displaced goldsmiths of his taluka.

The State Government has represented to the Finance Commission about its views on the several terms of reference. I have also arranged to place some copies of our memorandum with all the details in the Legislature Secretariat Library for the use of members. I will inform the House about the important points urged before the Finance Commission :

Income Tax.

In view of the changes in the taxation structure the entire tax from Companies has been excluded from the purview of the divisible pool. The State has therefore urged that at least 80 per cent of the income tax receipts should be allocated to the States, the allocation being 90 per cent on population basis and 10 per cent on collection basis. This is very important for States like Mysore which are really poor. If there are important cities like Bombay where they have got harbours which are fully developed and where trade is fully developed they will get more income not only from the citizens of the State, but from the citizens all over the country and even outside the country. That question has to be taken into consideration and the division should be on the basis of population.

Excise Duty.

The entire excise duty on all articles should come within the divisible pool. The first Finance Commission had recommended that 40 per cent

(SRI B. D. JATTI)

of the total collection should be allocated on population basis. Recently some of the items on which we used to collect tax came under the category of excisable articles and to that extent our income from sales tax has been reduced. If these items had not been subjected to excise, we would have been able to collect more in the form of sales tax. We have brought this fact to the notice of the Finance Commission.

Estate Duty

We have represented that the receipts from excise duty should be distributed on the basis of population and not on the basis of collection from the State. It is only by accident that Rajas and Maharajas are born in a particular State, but that should not be the basis for distribution of the estate duty. So we have represented that the distribution of these proceeds should be on the basis of population.

Tax on Railway Passenger Fares

When the tax on railway passenger fares was introduced, on an *adhoc* basis it was decided by the Government of India that the States' share should be Rs. 12.5 crores. There was no scientific basis for this. It was made only on an *adhoc* basis based on the average collection during the years 1958-59 and 1959-60. Now they are getting much more income than that, but the States' share has not increased. So we have requested the Government of India to give us more and if that is done we will be benefited by the tax on railway passenger fares.

Additional Excise Duties levied in lieu of Sales tax

Formerly we used to collect sales tax on certain items, but now the Government of India is collecting excise duty and it is also collecting additional excise duty. The States' share should be such that we should get not less than what we would have collected if sales tax had been continued.

The State is aware of the disparities in the emoluments of the State Government employees and the Central Government employees and the following points have also been brought to their notice:

1. The State has been entrusted with the heavy responsibility of implementing several welfare measures. The sources of revenue left to the State are inelastic. Except sales tax there is no item which is elastic. If the Government of India want to cut down the items subject to sales tax then our position will become still worse and so we have protested and we have made out a case for extra grant.

2. The State has 5 different areas which are often affected by scarcity. The State has to face law and order problems. The law and order problem will have to be faced by each State Government, but if

it is not due to the mistake of the State and if it is due to something else for which the State is not responsible, still the State Government will have to increase the police staff and they will have to station Home Guards in the entire State for which the State Government will have to incur expenditure. This point will have to be taken into consideration by the Government while giving assistance to the States. To secure uniformity, concessions had to be given to students involving a recurring cost of more than 50 lakhs per annum. For making Secondary Education free in this House and in the Upper House it was stressed and that question will have to be considered. If Government wants to take a decision in that case the Government will lose more income and the Finance Commission will have to take into consideration and give better award. About 500 schools have been sanctioned in excess of the plan ceiling. Here we have exceeded the target which was suggested in the Third Plan by about 250 schools. But whenever high schools are started, they are started on one condition that for the first three years hey are not entitled to grant. With that condition it has been possible for us to manage somehow or other. But immediately when the third year is over they will have to come for grant and the Government will have to bear that cost. That point is also placed before the Finance Commission. (7) In Bangalore City particularly and in the Mysore State in general, police force had to be reorganised. In Bangalore City the police force was organised some years ago when the population was about 4 or 5 lakhs. Now Considering the population of the Bangalore City, we are forced to re-organise and we had to increase the staff and spend more money. (8) The State has low percentage of irrigation. It is somewhere between 6 to 7 per cent whereas in the neighbouring State it is much more. Unless this percentage is increased it is not possible for us to grow more food and farmers economy cannot improve. If it has to be done we will have to get more money for completing uncompleted works. We have pressed that point with the Finance Commission. The *per capita* income of the State is 290 as against all-India figure of 326 and the economic standard is low as compared to other States. That is important Unless the entire country's economy is brought on a particular level, we cannot say that the country has advanced economically. If a particular portion lags behind than the total average of the country is less. We have made a case and I hope the Finance Commission will take that into consideration. The industries in the State had a set back for want of power. Now to attract industries several concessions have to be given. Many outsiders feel that now there is power, many industrialists will come and many enterprises will be started and we will in return get money. But, in order to attract industrialists to start a number of industries we will have to show a number of incentives for some years to come and we may not be in a position to earn on commercial basis. That point is made out.

11. The debt burden is increasing. There is need to liberalise the terms of the loan. This point has been stressed by several members that total loan may be consolidated and the period may be spread over a

(SRI B. D. JATTI)

long period. We are prepared to pay with interest without requesting the Government of India any reduction in the rate of interest. The only thing that we are trying to make out is that we should be allowed to pay our instalments and interest from the date when projects begin to yield or give good results. This point we have made before the Finance Commission and also before the Government of India. The Chief Minister has stressed this point in the National Development Council and also at the Chief Ministers' Conference.

12. The overall financial position of the State should be taken into account. When either the Finance Commission or the Planning Commission or the Government of India consider them, they should not take piecemeal stages and consider and then try to give assistance but should take the overall position of the finances of the State into consideration and then they should try to give better assistance to develop the State.

13. Whatever we have done to raise the resources we have shown with facts and figures and all those booklets or papers are kept in the library. The Hon'ble members may kindly go through them.

14. There are several areas which have no roads and not even drinking wells. For Example Bidar is one district where it is not possible to go from one District to another because there is no road. Unless these are brought to normal standards it is difficult for us to state that our State is advancing. That point we have made to the Finance Commission very strongly and I hope it will be taken into consideration.

15. As the State has no harbour and commercial development centres it is difficult to increase the State's resources. I have no doubt the Finance Commission will give a just and equitable award. The members will appreciate that the Commission has taken into account financial resources of not only States but also the Central Government. When we are planning for the country planning item is an item which is not concerning only States but it is to the entire country. So the Government of India will have to come to our aid. It was stressed and pressed by our Chief Minister recently in the National Development Council that out of the total money that is to be spent for the developmental activities, 90 per cent should come from the Centre and the remaining 10 per cent may be backed by the States. If that is accepted it will be convenient and easy to have bigger outlays for the States.

Now, during these days after the commencement of the session a number of Hon'ble Members on both sides have tried to show sympathies to the N.G.Os. The Government from the very beginning has shown sympathy to the Government servants and without their asking many a time we have tried to do our best to help them. After the formation of the New Mysore State, *i.e.*, from 1st November 1956 till now there were two

ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮೈಸೂರು ದೇಶದಲ್ಲಿ ನಡೆಯುತಕ್ಕ ಸಣ್ಣ ನೀರಾವರಿ ಕೆಲಸ ಕಾರ್ಯಗಳ ಬಗ್ಗೆ ಪ್ಲಾನಿಂಗ್ ಕಮೀಷನ್ನಿನವರು ನೋಡಿ ಸುಮಾರು 5 ಸಾವಿರ ನಾನ್ನೂರು ಚಿಲ್ಲರೆ ಕೆಲಸಗಳು ನಾಲ್ಕಾರು ವರ್ಷಗಳಿಂದ ನಡೆಯದೆ ಇರುವುದರಿಂದ ಹೊಸ ಕೆಲಸಗಳನ್ನು ಮಂಜೂರು ಮಾಡಬೇಡಿ ಎಂಬುದಾಗಿ ಈ ಸರ್ಕಾರಕ್ಕೆ ತಿಳಿಸಿರುವುದು ನಿಜವಲ್ಲವೆ ? ಮತ್ತು ಕೇಂದ್ರ ಸರ್ಕಾರದಿಂದ ಈ ಬಾಬಿಗೆ ಬರತಕ್ಕ ಹಣವನ್ನು ತಡೆಹಿಡಿದಿರುವುದು ನ್ಯಾಯವೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರ ಎರಡು ಮಾತುಗಳೂ ಸರಿಯಾಗಿಲ್ಲ. ಮೊದಲನೆಯ ವಿಚಾರದ ಬಗ್ಗೆ ಯಾರೋ ಮಾನ್ಯ ಸದಸ್ಯರಿಗೆ ತಪ್ಪು ಕಲ್ಪನೆಯನ್ನು ಮಾಡಿಕೊಟ್ಟಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಚಿಕ್ಕ ನೀರಾವರಿ ಯೋಜನೆಗಳಲ್ಲಿ ಮಾಡುವ ಕೆಲಸವನ್ನು ಎಲ್ಲಿಯೂ ಮಾಡಿಲ್ಲ. ಎರಡನೆಯ ವಿಚಾರದ ಬಗ್ಗೆ ಹಣ ಎಲ್ಲೆಲ್ಲಿ ಬೇಕಾಗಿದೆಯೋ ಅಲ್ಲಲ್ಲಿ ಇನ್ನೂ ಹೆಚ್ಚಿಗೆ ಕೊಡುತ್ತೇವೆಂದು ಕಮೀಷನ್ನಿನವರು ಹೇಳಿದ್ದಾರೆ.

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೆಬಿಹಾಳ್).—ಸಣ್ಣ ಹಿಡುವಳಿದಾರರಿಗೆ ಎಂದರೆ 5-10 ಎಕರೆ ಜಮೀನು ಇರತಕ್ಕವರಿಗೆ ತಗಾಯಿ ಲೋನ್ ಮತ್ತು ಪಾಪು ಸೆಟ್ಟುಗಳು ಸಿಕ್ಕುತ್ತವೆಯೇ ? ಅದಕ್ಕಾಗಿ ಸರ್ಕಾರದವರು ಅಂಥಾ ಜನಗಳಿಗೆ ಏನಾದರೂ ಕನ್‌ಸೆಷನ್ ತೋರಿಸುತ್ತಾರೆಯೇ ? ಸಾಯಿಲ್ ಟೆಸ್ಟ್ ಮಾಡುವುದಕ್ಕೋಸ್ಕರ ಬಿಜಾಪುರಕ್ಕೆ ಒಂದು ಯೋಜನೆ ಮಂಜೂರಾಗಿತ್ತು. ಅದು ಇನ್ನೂ ಕಾರ್ಯಗತವಾಗಿಲ್ಲ. ಅದರ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂಬುದನ್ನು ಹೇಳುತ್ತೀರಾ ?

2-30 P.M.

ಶ್ರೀ ಬಿ. ಡಿ. ಜತ್ತಿ.—ಅದು ಎಲ್ಲಿಗೆ ಬಂದಿದೆ ಎಂಬುದು ನನಗೆ ಗೊತ್ತಿಲ್ಲ. ಬೇಕಾದರೆ ಅದನ್ನು ವಿಚಾರಿಸಿ ಹೇಳುತ್ತೇನೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಇಂಟರ್‌ಸ್ಟೇಟ್ ಬಸ್ ಟ್ರಾನ್ಸ್‌ಪೋರ್ಟನ್ನು ಪ್ರೈವೇಟ್ ಪಾರ್ಟಿಗೆ ಕೊಡುವುದಕ್ಕೆ ಕಾರಣವೇನು ? ದೇಶದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಅದನ್ನು ಸರ್ಕಾರದವರೇ ವಹಿಸಿಕೊಳ್ಳುವುದಕ್ಕೆ ತೊಂದರೆ ಏನು ?

ಶ್ರೀ ಬಿ. ಡಿ. ಜತ್ತಿ.—ಬಸ್‌ಲೈನ್ ಕೊಡತಕ್ಕವರು ಆರ್.ಟಿ.ಓ. ಆಫೀಸಿನವರು, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ನಿನವರು. ಅದನ್ನು ಸರ್ಕಾರದವರು ಕೊಡುವುದಿಲ್ಲ.

ಶ್ರೀ ಕೆ. ಪಿ. ಗದಗ್.—ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ಬಗ್ಗೆ ಸ್ಟಡೀ ಟೀಮಿನವರು ವರದಿ ಮಾಡಿದಂಥಾದ್ದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಸರ್ಕಾರದವರ ಅಭಿಪ್ರಾಯವೇನು ?

SRI B. D. JATTI.—We have got a report from the Study Team and we will implement it.

ಶ್ರೀ ಪಿ. ವೆಂಕಟಗಿರಿಯಪ್ಪ.—ಭೂಕಂದಾಯವನ್ನು ಜಾಸ್ತಿ ಮಾಡಬಾರದು ಎಂದು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ಆದ್ದರಿಂದ ಭೂಕಂದಾಯವನ್ನು ಜಾಸ್ತಿ ಮಾಡುತ್ತಾರೆಯೇ ಹೇಗೆ ಎಂಬುದನ್ನು ಖಚಿತವಾಗಿ ತಿಳಿಸಬೇಕು.

ಶ್ರೀ ಬಿ. ಡಿ. ಜತ್ತಿ.—ಸರ್ವೇ ಸೆಟ್ಲ್‌ಮೆಂಟ್ ಕಾರ್ಯ ಸಂಪೂರ್ಣವಾಗಿ ಆಗಿದೆ. ಅದರ ರಿಪೋರ್ಟನ್ನು ಮಾನ್ಯ ಸದಸ್ಯರ ಕೈಗೆ ಕೊಟ್ಟಿದೆ. ಸರ್ವೆ ಸೆಟ್ಲ್‌ಮೆಂಟ್ ಗೊತ್ತುವಳಿ ಈ ಸಭೆಯ ಮುಂದೆ ಇದೆ. ಅದು ನಿರ್ಣಯ ಆದನಂತರ, ಅದರ ನಿರ್ಧಾರದ ಪ್ರಕಾರ ಸರ್ಕಾರದವರು ಮುಂದಿನ ಕಾರ್ಯವನ್ನು ಮಾಡುತ್ತಾರೆ.

ಶ್ರೀ ಸಿದ್ದಯ್ಯ ಕಾಶೀಮಠ್.—ನಮ್ಮ ರಾಜ್ಯದ ನಾನ್‌ಗೆಜೆಟೆಡ್ ನೌಕರರಿಗೆ ಮದ್ರಾಸ್ ಮಟ್ಟದಲ್ಲಿ ವೇತನ, ತುಟ್ಟಿಭತ್ಯವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಮದ್ರಾಸ್ ಸರ್ಕಾರದ ನೌಕರರ ಪೇ ಸ್ಕೇಲ್ಸ್ ಮತ್ತು ತುಟ್ಟಿಭತ್ಯ ಎಷ್ಟಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅದನ್ನು ಹೇಳಬೇಕಾದರೆ 3 ಗಂಟೆಯಾಗುತ್ತದೆ. ಅದರಲ್ಲಿ ಅನೇಕ ಕೇಡರುಗಳು ಇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ದೊಡ್ಡ ದೊಡ್ಡ ಜಲಾಶಯಗಳನ್ನು ನಿರ್ಮಾಣ ಮಾಡಿ ನೀರನ್ನು ಒದಗಿಸಿದ್ದಾರೆ. ಅಲ್ಲಿಗೆ ಪ್ಯಾಕೇಜ್ ಪ್ರೋಗ್ರಾಂ ಜಾರಿಗೆ ತಂದು ಶೀಘ್ರವಾಗಿ ಹೆಚ್ಚಿಗೆ ಆಹಾರವನ್ನು ಬೆಳೆಯುವುದರಲ್ಲಿ ತಪ್ಪು ಅಭಿಪ್ರಾಯವೇನು ?

ಶ್ರೀ ಬಿ. ಡಿ. ಜತ್ತಿ.—ನಾನು ಈಗಾಗಲೇ ಆ ವಿಷಯವನ್ನು ಹೇಳಿದ್ದೇನೆ. ಪ್ಯಾಕೇಜ್ ಪ್ರೋಗ್ರಾಂನಲ್ಲಿ ಇಂಟೆನ್ಸಿವ್ ಕಲ್ಟಿವೇಷನ್ ಬರುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅದನ್ನು ಮಾಡಬಹುದು.

Sri C. J. MUCKANNAPPA.—You were pleased to observe that you are going to give free education at the secondary level. What will be the cost ?

Sri B. D. JATTI.—I only said that this was a proposal before the Government. We have not yet worked out the actual cost.

ಶ್ರೀ ಗೋಪಾಲ ಶಾಲೆನ್ನ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಷೆಡ್ಯೂಲ್ಡ್ ಕಾಸ್ಟಿನವರ ವೆಲ್‌ಫೇರಿಗಾಗಿ ಒದಗಿಸಿದ್ದಂತಹ ಹಣದಲ್ಲಿ 11 ಲಕ್ಷ ರೂಪಾಯಿಗಳು ಉಳಿದು ಹೋಯಿತು. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಅದರ ಬಗ್ಗೆ ಒದಗಿಸಿರುವ ಹಣವನ್ನು ಪೂರ್ತಿ ಖರ್ಚು ಮಾಡುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈ ವರ್ಷದ ಬಡ್ಜೆಟ್ಟನ್ನು ನೋಡಿದರೆ ಅವರಿಗೆ ಗೊತ್ತಾಗುತ್ತದೆ. ಈ ವರ್ಷ ಆ ಬಗ್ಗೆ ಹೆಚ್ಚು ಹಣವನ್ನ ಒದಗಿಸಿದ್ದೇವೆ. ಅಷ್ಟು ಹಣವನ್ನು ಅದಕ್ಕಾಗಿ ಖರ್ಚು ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ.

Sri SANJEEVANATH AIKALA.—It was said that the Government are reviewing the Prohibition policy and that they would finalise the proposals soon. May I know at what stage the matter is pending ?

Sri B. D. JATTI.—We are progressing very fast.

ಶ್ರೀ ಬಿ. ಬೈರಪ್ಪಾಜಿ.—ಸಣ್ಣ ನೀರಾವರಿ ಯೋಜನೆಯ ಕೆಲಸಗಳನ್ನು ಮಾಡುವುದಕ್ಕೋಸ್ಕರ ತತ್‌ಕ್ಷಣ ಯಾವ ಕೆಲಸಗಳನ್ನೂ ಮಂಜೂರು ಮಾಡಕೂಡದು ಎಂದು ಸರ್ಕಾರದವರು ಆಜ್ಞೆಯನ್ನು ಹೊರಡಿಸಿದ್ದಾರೆಯೇ ? ಸಣ್ಣ ನೀರಾವರಿ ಕೆಲಸಗಳನ್ನು ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಕಟ್ಟುನಿಟ್ಟಾಗಿ ಆ ಕೆಲಸಗಳನ್ನ ತೆಗೆದುಕೊಳ್ಳಬಾರದು ಎಂದು ಎಂದು ಹೇಳಿಲ್ಲ. ಅರ್ಧಂಬರ್ಧ ಆಗಿರತಕ್ಕ ಕೆಲಸಗಳನ್ನು ಮೊದಲು ತೆಗೆದುಕೊಂಡು ಮುಗಿಸಿ ನಂತರ ಬೇರೆ ಕೆಲಸಗಳನ್ನು ತೆಗೆದುಕೊಳ್ಳುತ್ತಾರೆ.

Sri C. J. MUCKANNAPPA.—How is it that there no money provided for minor irrigation ?

Sri B. D. JATTI.—There is provision for maintenance. If the estimate is less than Rs. 20,000 it is not necessary to come here. We will give lumpsum amount and that money is distributed.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಈಗ ತಾನೇ ಮಾನ್ಯ ಅರ್ಥಿಕ ಸಚಿವರು ತಿಳಿಸಿದರು, 20 ಸಾವಿರ ರೂಪಾಯಿಗಳ ಕೆಲಸಗಳು ಸರ್ಕಾರಕ್ಕೆ ಬರಬೇಕಾದ್ದು ಇಲ್ಲ ಎಂದು. ನಿನ್ನೆ ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳಾದ ವೀರೇಂದ್ರ ಪಾಟೀಲ್ ಅವರು ಹೇಳಿದರು. 20 ಸಾವಿರ ರೂಪಾಯಿಗಳ ಕೆಲಸ ಕಾರ್ಯಗಳನ್ನು ಮಂಜೂರು ಮಾಡಬೇಕಾಗಿದ್ದರೆ ಅವು ಸರ್ಕಾರದ ಮುಂದೆ ಬರಬೇಕೆಂಬು. ಈಗ ಅವರು ಹೇಳಿದಕ್ಕೂ ಇವರು ಹೇಳಿದ್ದಕ್ಕೂ ಒಂದಕ್ಕೊಂದಕ್ಕೆ ಕಾಂಟ್ರಡಿಕ್ಷರಿಯಾಗಿದೆ. ಇದನ್ನು ಸ್ವಲ್ಪ ಹೇಳಬೇಕು.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ನಿನ್ನೆ ನಾನು ಇಲ್ಲಿ ಹೇಳಿದ್ದು ಏನೆಂದರೆ, 20 ಸಾವಿರ ರೂಪಾಯಿಗಳ ಒಳಗಡೆ ಖರ್ಚು ಮಾಡತಕ್ಕ ಎಲ್ಲಾ ಕೆಲಸಗಳಿಗೂ ಲಂಪ್‌ಸಮ್ ಆಗಿ ಎಗ್ಸಿಕ್ಯೂಟೀವ್ ಇಂಜಿನಿಯರು ಹಣವನ್ನು ಮಂಜೂರು ಮಾಡಬಹುದು. 20 ಸಾವಿರ ರೂಪಾಯಿಗಳ ಮೇಲ್ಪಟ್ಟು ಖರ್ಚು ಮಾಡತಕ್ಕವುಗಳು ಸರ್ಕಾರಕ್ಕೆ ಬರಬೇಕಾಗುತ್ತದೆ. ಏತಕ್ಕೆಂದರೆ 20 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಇರತಕ್ಕ ಕೆಲಸಗಳನ್ನ ಮಂಜೂರು ಮಾಡತಕ್ಕ ಅಧಿಕಾರವನ್ನು ಎಗ್ಸಿಕ್ಯೂಟೀವ್ ಇಂಜನೀಯರು ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರಿಗೆ ಕೊಟ್ಟರೆ ಅವರು ಆ ಕೆಲಸಗಳನ್ನು ಮನಸ್ಸಿಗೆ ಬಂದ ಹಾಗೆ 50 ಸಾವಿರ ಒಂದು ಲಕ್ಷ ರೂಪಾಯಿಗಳ ವರೆಗೂ ಬೆಳಸಿಕೊಂಡು ಹೋಗಿ ಯಾವ ಕೆಲಸಗಳನ್ನು ಪೂರ್ತಿ ಮಾಡದೆ ಅಲ್ಲಲ್ಲೇ ತಿರುಪತಿ ಕ್ಷೌರದ ಹಾಗೆ ಅರ್ಧಂಬರ್ಧ ಮಾಡುತ್ತಾರೆ. ಎಂಬುದನ್ನ ನಾವು ನೋಡಿದ್ದೇವೆ. ಆದ್ದರಿಂದ ಈಗ ಅದರ ಸಲುವಾಗಿ ಯಾವ ಕೆಲಸಗಳಿಗೆ ಲಂಪ್‌ಸಮ್ ಆಗಿ ಹಣವನ್ನು ಮಂಜೂರು ಮಾಡಿ, ಯಾವ ಕೆಲಸಗಳನ್ನು ಪ್ರಾರಂಭ ಮಾಡಿದ್ದಾರೆಯೋ ಅವುಗಳನ್ನು ಮೊದಲು ಮುಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾವು ಹೇಳಿದ್ದೇವೆ.

Sri S. SIVAPPA.—Nearly 14,000 tanks need immediate restoration. What are they contemplating to see that these tanks are taken up immediately ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಕೆರೆಗಳು ನಾದುರಸ್ತಿ ಇರುವುದು, ಒಡೆದು ಹೋಗಿರುವುದು, ಹೊಸದಾಗಿ ಆಗಬೇಕು ಅನ್ನುವುದು ಗೊತ್ತಿದೆ. ಆದರೆ ಈಗ ಪ್ರಾರಂಭ ಮಾಡಿದ್ದನ್ನು ಬಿಟ್ಟು ಬೇರೆ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ತೆಗೆದುಕೊಳ್ಳುವುದಿಲ್ಲ. ಅವು ಪೂರೈಸುವವರೆಗೂ ಸಿಕ್ಕಾಪಟ್ಟೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಅವು ಪೂರೈಸಿದನಂತರ ನೋಡುತ್ತೇವೆ. ಹಳೆ ಕರೆ ರಿಪೇರಿ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ. 8-10 ವರ್ಷದಲ್ಲಿ ಮುಗಿಸುವುದಕ್ಕೆ ಆಗುವುದಿಲ್ಲ. 15 ವರ್ಷವಾದರೂ ಬೇಕಾಗುತ್ತದೆ. ಹೊಸದಾಗಿ ಮಾಡುವುದಿಲ್ಲವೆಂತಲೂ ಹೇಳುವುದಿಲ್ಲ. ಸಮಯ ಬಂದಂತೆ ನೋಡಿಕೊಂಡು ಮಾಡುತ್ತೇವೆ. ಇದರ ತೀವ್ರತೆ ಎಲ್ಲರಿಗೂ ಗೊತ್ತಿದೆ. ತಮಗೆ ಎಷ್ಟು ತೀವ್ರತೆ ಇದೆಯೊ ನಮಗೂ ಅಷ್ಟು ತೀವ್ರತೆ ಇದೆ. ಸಣ್ಣ ಸಣ್ಣ ಕೆರೆಗಳ ರೀಪೇರಿಯಾಗಬೆಕಾದ ಅವಶ್ಯಕತೆಯೂ ಇದೆ. ನೀರಾವರಿ ಯೋಜನೆಗಳಾದರೆ ಕೂಡಲೆ ಬೆಳೆಯಾಗುತ್ತದೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಸಾಕಾದಷ್ಟು ಸಹಾನುಭೂತಿ ಇದೆ, ಕೆಲಸ ಮಾಡುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಶಿವಮೊಗ್ಗ ಮತ್ತು ಭದ್ರಾವತಿ ದೊಡ್ಡದಾಗಿ ಬೆಳೆಯುತಕ್ಕ ಪಟ್ಟಣಗಳಾಗಿವೆ. ಶಿವಮೊಗ್ಗ ಮಲೆನಾಡು ಆಗಿರುತ್ತದೆ. ಆದ್ದರಿಂದ ನಾಲ್ಕನೆಯ ಯೋಜನೆಯಲ್ಲಾದರೂ ಕೂಡ ಮೆಡಿಕಲ್ ಕಾಲೇಜನ್ನು ಸರಕಾರ ಅಲ್ಲಿ ತೆರೆಯುವುದರಲ್ಲಿ ತಮ್ಮ ಅಭಿಪ್ರಾಯ ವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಮೆಡಿಕಲ್ ಕಾಲೇಜನ್ನು ತೆರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಶಿವಮೊಗ್ಗಾದಲ್ಲಂತೂ ಮೊದಲು ಇಲ್ಲ.

Mr. SPEAKER.—In this Debate 42 members have participated. I do not think larger number than this had ever participated at any time. Now we will take up Demands.

BUDGET ESTIMATES FOR 1965-66—DEMANDS FOR GRANTS
DEMAND NO. 36—PUBLIC WORKS

Sri VEERENDRA PATIL.—Sir, on the recommendation of the Governor of Mysore, I beg to move :

> "That a sum not exceeding Rs. 22,83 31,000 be granted to the Government to defray the charges which will come in course of payment during the financial year for the period ending 31st day of March 1966, in respect of Public Works."

Mr. SPEAKER.—Motion moved :

"That a sum not exceeding Rs. 22,83,31,000 be granted to the Government to defray the charges which will come in of payment during the financial year for the period ending course 31st day of March 1966 in respect of Public Works."

The other Demands *viz.* Demand Nos. 6, 10, 29, 30, 45, 46, 47 32, 43, 48 and 50 are deemed to have been moved and they also may be taken up for discussion.

Sri B. D. JATTI.—Sir, we will now rise for Tea and meet after half-an-hour.

Mr. SPEAKER.—Yesterday it was decided that there would be no Tea-break.

Now the House will rise and meet after half an hour.

The House adjourned for recess at Forty-five Minutes past Two of the Clock and reassembled at Twenty-five minutes past Three of the Clock.

[MR. DEPUTY SPEAKER in the Chair.]

† ಶ್ರೀ ಆರ್. ಎಸ್. ಪಾಟೀಲ್.—ಅಧ್ಯಕ್ಷರೇ, ಇಂದು ಸಭೆಯ ಮುಂದೆ ಇರತಕ್ಕ ಎಲ್ಲ ಬೇಡಿಕೆಗಳನ್ನೂ ಸ್ವಾಗತಿಸುತ್ತ ನಾನು ಲೋಕೋಪಯೋಗಿ ಖಾತೆಗೆ ಸಂಬಂಧಪಟ್ಟ ಕೆಲವೊಂದು ಬೇಡಿಕೆಗಳಮೇಲೆ ಮಾತನಾಡುತ್ತೇನೆ.

ನಮ್ಮ ದೇಶದಲ್ಲಿ ಭಾರಿ ನೀರಾವರಿ, ಮಧ್ಯಮ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ಅವುಗಳಲ್ಲಿ ಎಲ್ಲವೂ ಪೂರ್ತಿಯಾಗಿಲ್ಲ. ಕೆಲವು ಪೂರ್ತಿ ಯಾಗಿವೆ. ಅವುಗಳಲ್ಲಿ ಕೂಡ ಬಹಳ ವರ್ಷಗಳಿಂದ ನಮ್ಮ ಜನತೆಗೆ ಉಪಯೋಗ ಕೊಡತಕ್ಕ ಯೋಜನೆಗಳಲ್ಲ, ಬಹಳ unproductive works ಆಗಿವೆ. ನಮ್ಮ ದೇಶದಲ್ಲಿ ಒಂದೇ ಒಂದು ಪ್ರೊಡಕ್ಟಿವ್ ವರ್ಕ್ ಎಂದರೆ ಅದು ಗೋಕಾಕ ನಾಲೆ. ಅದರಿಂದ ನಮ್ಮ ದೇಶದ ಆದಾಯ 13 ಲಕ್ಷ 77 ಸಾವಿರ ರೂಪಾಯಿ. ಇತರ ಎಲ್ಲ ಯೋಜನೆಗಳು ಕೃಷ್ಣರಾಜಸಾಗರ, ತುಂಗ, ನುಗು ಮುಂತಾದ ಎಲ್ಲವುಗಳಿಂದ ನಮಗೆ 1,27,800 ರೂಪಾಯಿ ಬರುತ್ತಿದೆ. ಈ ಯೋಜನೆಗಳಿಗೆ ಅಧಿಕವಾದ ವೆಚ್ಚವನ್ನು ಮಾಡಿದ್ದರೂ ಆದಾಯ ಮಾತ್ರ ಕಡಿಮೆಯಾಗಿದೆ. 5,45,95,000 ರೂಪಾಯಿಗಳನ್ನು ಖರ್ಚು ಮಾಡಿರುವುದರಲ್ಲಿ ಸುಮಾರು ಒಂದು ಕೋಟಿ ಚಿಲ್ಲರೆ ಉತ್ಪನ್ನ ಬರುತ್ತಿದೆ. ಈ ನಾಲ್ಕು ನೀರಾವರಿ ಕೆಲಸಗಳಿಂದ ಎಷ್ಟು ಹಣ ರಾಜ್ಯಕ್ಕೆ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ. ನೀರಾವರಿ ತೆರಿಗೆ ಇವೆಲ್ಲ ವಸೂಲಾಗುತ್ತಿಲ್ಲ ಎನ್ನುವ ತೀರ್ಮಾನಕ್ಕೆ ಬರಬಹುದಾಗಿದೆ. ಆದುದರಿಂದ ಈ ನಾಲ್ಕು ನೀರಾವರಿ ಬಾಬುಗಳಿಂದಲೂ ಉತ್ಪನ್ನ ಜಾಸ್ತಿ ಬರುವಂತೆ ಯಾವುದಾದರೂ ವ್ಯವಸ್ಥೆ ಮಾಡಬೇಕು ಎಂದು ಈ ಮೂಲಕ ಸರ್ಕಾರವನ್ನು ಕೇಳಿ ಕೊಳ್ಳುತ್ತೇನೆ.

ಬೊಂಬಾಯಿ ಕರ್ಣಾಟಕ, ಹೈದರಾಬಾದ್ ಕರ್ಣಾಟಕ, ಮತ್ತು ಹಳೇ ಮೈಸೂರು ಕರ್ಣಾಟಕದಲ್ಲಿ ನೀರಾವರಿ ತೆರಿಗೆಗಳಲ್ಲಿ ಏನು ವ್ಯತ್ಯಾಸವಿದೆ ಅದನ್ನು ತೆಗೆದು ಹಾಕಿ ಏಕರೂಪತೆ ಯನ್ನು ತರುವುದಕ್ಕಾಗಿ ಒಂದೇ ರೀತಿ ದರಗಳನ್ನು ಗೊತ್ತುಮಾಡಿ ಅದರ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ್ದಲ್ಲಿ ಒಳ್ಳೆಯದಾದೀತು. ನಮ್ಮಲ್ಲಿ ಕೆಲವೊಂದು ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಿವೆ. ಅಲ್ಲಿ ಬತ್ತದ ಬೆಳೆಗೆ 70 ರೂಪಾಯಿ ಪ್ರಕಾರ ವಾಟರ್ ರೇಟ್ ಪ್ರಪೋಸ್ ಮಾಡಿದ್ದಾರೆ. ಇತರ ಬೆಳೆಗಳಿಗೆ ಇನ್ನೂ ಹೆಚ್ಚು ಎಂದರೆ 5-10 ರೂಪಾಯಿ ಜಾಸ್ತಿ

ಕೊಡಬೇಕಾಗುತ್ತದೆ. ಇದರಮೇಲೆ ರೈತನಾದವನು ಹೆರ್ತ್ ಸೆಸ್, ಲೋಕಲ್ ಸೆಸ್ ಎಲ್ಲವನ್ನೂ ಕೊಡಬೇಕಾಗುತ್ತದೆ. ಇದೆಲ್ಲವನ್ನು ಗಣನೆಗೆ ತೆಗೆದುಕೊಂಡರೆ ಒಂದು ಎಕರೆಗೆ ಬಹಳ ಬಾರಿಯಾಗುವುದರಿಂದ, ರೈತರು ಬಹಳ ಕಷ್ಟಕ್ಕೆ ಸಿಕ್ಕುವುದರಿಂದ ಇದನ್ನು ವಿಮರ್ಶೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಟರ್‌ಮೆಂಟ್ ಲೆವಿ ಮಾಡಬೇಕು, ಮಾಡಬಾರದು ಎನ್ನುವುದು ನನ್ನ ಇಚ್ಛೆಯಲ್ಲ. ಹಾಗೆ ಮಾಡುವಾಗ ಯೋಜನೆಗಳಿಂದ ಯಾವ ಭಾಗದ ಜನರಿಗೆ ಅನುಕೂಲವಾಗಿದೆಯೊ ಅವರಿಗೆ ಮಾತ್ರ ಹಾಕಬೇಕು. ಎಷ್ಟೋ ಕಡೆ ಕಾಲುವೆ ಕೆಲಸಗಳು ಕೂಡ ಆಗಿಲ್ಲ. ಇಂಥ ಎಷ್ಟೋ ಕಾರ್ಯಗಳು ಆಗಿಲ್ಲ. ಆದುದರಿಂದ ಕೆಲಸಗಳೆಲ್ಲ ಪೂರ್ತಿಯಾಗಿ ನೀರನ್ನು ಕೊಡುವವರೆಗೂ ಬೆಟರ್‌ಮೆಂಟ್ ಲೆವಿ ಮಾಡಬಾರದು ಎನ್ನುವ ಸೂಚನೆಯನ್ನು ಮಾಡುತ್ತಿದ್ದೇನೆ.

ಬೊಂಬಾಯಿ ಸ್ಟೇಟ್‌ನಲ್ಲಿ ಇರಿಗೇಷನ್ ಸೆಸ್ ಎರಡೂವರೆ ರೂಪಾಯಿ ಪ್ರಕಾರ ವಸೂಲು ಮಾಡುತ್ತಿದ್ದರು. ನಾಲ್ಕು ರೂಪಾಯಿ ಮೇಂಟೆನೆನ್ಸ್ ಸೆಸ್ ಒಂದು ಎಕರೆಗೆ ಚಾರ್ಜು ಮಾಡುತ್ತಿದ್ದರು. ಯಾರು ನೀರಾವರಿ ಸೌಕರ್ಯಗಳನ್ನು ಪಡೆಯುತ್ತಾರೆ ಅಂಥವರು ಎರಡೂವರೆ ರೂಪಾಯಿ ನೀರಾವರಿ ಸೆಸ್ ಕೊಡುವಂಥ ನಿಯಮ ಇತ್ತು. ಹೊಸ ನಿಯಮದ ಪ್ರಕಾರ 1957 ರಿಂದ ಯಾರು ನೀರಾವರಿ ಸೌಲಭ್ಯಗಳನ್ನು ಉಪಯೋಗಿಸಿಕೊಂಡಿದ್ದಾರೆ, ಯಾರು ಉಪಯೋಗಿಸಿಕೊಂಡಿಲ್ಲ ಅಂಥವರು ಕೂಡ ಅಲ್ಲಿಂದ ಇಲ್ಲಿಯವರೆಗೂ ಇರುವ ಬಾಕಿಯನ್ನು ಕೊಡಬೇಕು ಎಂದು ರಿಕವರಿ ಆರ್ಡರ್ಸ್ ಮಾಡಿದ್ದಾರೆ. ಇದರಿಂದ ಜನ ಬಹಳ ತೊಂದರೆಗೆ ಒಳಗಾಗುತ್ತಾರೆ. ಇದನ್ನು ವಿಮರ್ಶಿಸಬೇಕೆಂದು ಹೇಳುತ್ತೇನೆ.

ಈಗ ಒಂದು ಕೆಲಸಕ್ಕೆ ಟೆಂಡರುಗಳ ಮೂಲಕ ಕಂಟ್ರಾಕ್ಟರುಗಳನ್ನು ಆಕರ್ಷಿಸುತ್ತಾರೆ. ಆದರೆ ಆ ಕೆಲಸಗಳಿಗೆ ಕಂಟ್ರಾಕ್ಟರುಗಳು ಬರುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಎರಡು ಮೂರು ಕೆಲಸಗಳಿಗೆ ಟೆಂಡರು ಕರೆದರೂ ಕಂಟ್ರಾಕ್ಟರುಗಳು ಬರಲಿಲ್ಲ. ಇದಕ್ಕೆ ಕಾರಣವೇನು ಎಂದು ಕೇಳಿದಾಗ ಎಕ್ಸ್‌ಟ್ರಾ ಐಟಂಗಳು ಇಂಥವಕ್ಕೆ ರೇಟನ್ನು ಮಂಜೂರು ಮಾಡುವ ಅಧಿಕಾರವನ್ನು ಕೇಂದ್ರದಲ್ಲಿ ಇಟ್ಟುಕೊಂಡಿದ್ದಾರೆ. ಅದೆಲ್ಲ ಚೀಫ್ ಇಂಜಿನಿಯರ್ ಅವರಲ್ಲಿ ಕೇಂದ್ರೀಕೃತವಾಗಿದೆ. ಸಣ್ಣ ಪುಟ್ಟ ಕೆಲಸಗಳಿಗೆಲ್ಲ ಪ್ರಾಂತೀಯ ರಾಜಧಾನಿಗೆ ಹೋಗಬೇಕು, ಅದಕ್ಕೆ ನಮಗೆ ಹೆದರಿಕೆಯಾಗಿದೆ, ಒಂದೊಂದು ಕೆಲಸ ಮಂಜೂರಾಗಿಬೇಕಾದರೆ ಆರು ತಿಂಗಳು ಒಂದು ವರ್ಷ ಬೇಕಾಗುತ್ತದೆ; ಎಂದು ಹೇಳುತ್ತಾರೆ. ಈ ಕಾರಣಗಳಿಂದ ಕಂಟ್ರಾಕ್ಟರುಗಳು ಮುಂದೆ ಬರುತ್ತಿಲ್ಲ.

3-30 P.M.

ಇದರಲ್ಲಿ ಎಕ್ಸ್‌ಪೆರಿಮೆಂಟ್ ಮಾಡುವ ವಿಚಾರ ಇದ್ದ ಹಾಗೆ ಕಾಣುತ್ತದೆ. ಇದರಿಂದ ದೇಶಕ್ಕೆ ಹಾನಿಯಾಗುತ್ತದೆ. ಅಸಿಸ್ಟೆಂಟ್ ಎಂಜನಿಯರರಿಗೆ ಯಾವ ಅಧಿಕಾರ ಕೊಟ್ಟಿದೆ? ಅಸಿಸ್ಟೆಂಟ್ ಎಂಜಿನಿಯರಿಗೆ ಯಾವ ಅಧಿಕಾರ ಕೊಡದೆ ಎಲ್ಲ ಅಧಿಕಾರ ಇನ್ನೊಂದು ಕಡೆ ಕೇಂದ್ರೀಕೃತವಾದರೆ ಲಾಭವಾಗುವುದಿಲ್ಲ. ಎಗ್ಸಿಕ್ಯುಟಿವ್ ಎಂಜಿನಿಯರ್ ಸ್ಯಾಂಕ್ಷನ್ ಮಾಡುವುದಕ್ಕೆ ಅಸಮರ್ಥವಾದ ಮೇಲೆ ಅಸಿಸ್ಟೆಂಟ್ ಎಂಜಿನಿಯರಿಗೆ ಎಷ್ಟೋ ಸ್ವಾತಂತ್ರ್ಯ ಉಳಿಯುವುದಿಲ್ಲ. ಆದರೆ ಮಹಾರಾಷ್ಟ್ರ ರಾಜ್ಯದಲ್ಲಿ ಅವರಿಗೆ ಎಷ್ಟೋ ಅಧಿಕಾರ ಕೊಟ್ಟಿದ್ದಾರೆ. ಆ ರೀತಿ ಮಾಡಬೇಕು. ಇಲ್ಲದಿದ್ದರೆ ಅಸಿಸ್ಟೆಂಟ್ ಎಂಜಿನಿಯರ್ ಸೆಕೆಂಡ್ ಡಿವಿಜನ್ ಕ್ಲಾರ್ಕ್ ಕೆಲಸ ಮಾಡುವುದಾದರೆ ಅದು ಸರಿಯಲ್ಲ. ಒಂದು ಕಡೆ ಡೀ-ಸೆಂಟ್ರಲೈಜೇಶನ್ ಆಫ್ ಪಾವರ್ಸ್ ಮಾಡುವುದು ಇನ್ನೊಂದು ಕಡೆ ಪಾವರ್ಸ್ ಸೆಂಟ್ರಲೈಜ್ ಮಾಡುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ನಮ್ಮ ಪ್ರದೇಶದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಂಡಮೇಲೆ ಗ್ರಾಮಗಳ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡಿಲ್ಲ. ಸುಮಾರು 200 ಹಳ್ಳಿಗಳಲ್ಲಿ ಕರುಣಾಜನಕ ಸ್ಥಿತಿ ಇದೆ. ಆ ಹಳ್ಳಿಯಲ್ಲಿ ಎಲ್ಲರೂ ನೇಕಾರರು ಇದ್ದಾರೆ. ನೀರು ಮಗ್ಗಗಳಲ್ಲಿ ಬಂದು ಬಹಳ ಕಷ್ಟ ಉಂಟಾಗಿದೆ. ನೀರು ನುಗ್ಗಿ ಈ ಪ್ರದೇಶ ಜವುಗು ಭೂಮಿಯಾಗಿದೆ. ಜವುಗು ಭೂಮಿಯಿಂದ ಉಂಟಾಗುವ ತೊಂದರೆಯಿಂದ ಜನರ ಆರೋಗ್ಯ ರಕ್ಷಣೆ ಮಾಡಬೇಕಾಗಿದೆ. ಈ ಕರುಣಾಜನಕ ಪರಿಸ್ಥಿತಿಯನ್ನು ತಡೆಗಟ್ಟುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಯೋಜನೆ ಫಲಪ್ರದವಾಗಿಲ್ಲ ಎಂದು ಕಂಡು ಬರುತ್ತದೆ. ಈ ಯೋಜನೆಗೆ ಹೆಚ್ಚು ಪ್ರೋತ್ಸಾಹ ಕೊಡಬಾರದು ಎಂದು ಹೇಳುವುದಿಲ್ಲ. ತಕ್ಷಣ ನೆರವು ಕೊಡುವುದಕ್ಕೆ ಗಮನ ಕೊಡಬೇಕು. ನಮ್ಮಲ್ಲಿಯ ಪ್ರದೇಶ ಆರಿಡ್ ಜೋನ್ ಆಗಿದೆ. ಬರಗಾಲಕ್ಕೆ ಮೇಲಿಂದಮೇಲೆ ತುತ್ತಾಗುತ್ತದೆ. ಬರಗಾಲ ಕಷ್ಟದಿಂದ ಜನರಿಗೆ ಅನ್ನ ವಸ್ತ್ರ ದೊರೆಯುವುದಿಲ್ಲ. ಇಂಥ ಬರಗಾಲ ಪೀಡಿತ ಪ್ರದೇಶದ ಬಗ್ಗೆ ನೀರಾವರಿ ಯೋಜನೆ ಮಾಡುವುದಕ್ಕೆ ಪ್ರಾಶಸ್ತ್ಯ ಕೊಡಬೇಕಾದುದು ಅಗತ್ಯ. ನಮ್ಮ ಬೆಳಗಾಂ ಜಿಲ್ಲೆಯ ಒಂದು ಕಡೆ ಮಲಪ್ರಭಾ ನದಿ ಇದೆ ಇನ್ನೊಂದು

(ಶ್ರೀ ಆರ್. ಎಸ್. ಪಾಟೀಲ್)

ಕಡೆ ಘಟಪ್ರಭಾ ನದಿ ಇದೆ. ಆದರೂ ಕೂಡ ಬೆಳಗಾಂ ಜಿಲ್ಲೆಯ ವಿಚಾರದಲ್ಲಿ ಅಲಕ್ಷ ಮಾಡುವ ಧೋರಣೆ ಕಂಡು ಬಂದಿದೆ. ನೀರಾವರಿ ಯೋಜನೆ ಕಾರ್ಯಗತ ಮಾಡುತ್ತಾರೆ ಎನ್ನುವುದು ಸಂತೋಷ. ಬೆಳಗಾಂ ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಕರ್ಯ ಈಗ ದೊರೆಯುತ್ತಿದೆ. ಆದರೆ ಹೆಚ್ಚು ದೊರೆಯುವುದಿಲ್ಲ. ಮಲಪ್ರಭಾ ಯೋಜನೆಯಿಂದ ಧಾರವಾಡ ಜಿಲ್ಲೆಗೆ ಹೆಚ್ಚು ಉಪಯೋಗವಾಗುತ್ತದೆ. ನಮ್ಮ ಜಿಲ್ಲೆಗೆ ಕೆಲವು ಪ್ರದೇಶಕ್ಕೆ ಅಲ್ಪ ಪ್ರಮಾಣದಲ್ಲಿ ಮಾತ್ರ ಉಪಯೋಗವಾಗುತ್ತದೆ. ಮೈನರ್ ಇರಿಗೇಶನ್ ಸಾಧ್ಯವಿದ್ದ ಕಡೆ ಪೂರೈಸಿ ಕೊಡಬೇಕು. ಹಾಗೂ ಘಟಪ್ರಭಾ ಯೋಜನೆಗೆ ಗಮನ ಕೊಡಬೇಕು ? ಈ ಯೋಜನೆಯಿಂದ 20 ಸಾವಿರ ಎಕರೆ ನೀರಾವರಿಯಾಗಬಹುದು ಎಂದು ಹೇಳಿದರೆ ತಪ್ಪಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ. ಮೇಜರ್ ಮತ್ತು ಮೈನರ್ ಇರಿಗೇಷನ್ ಪ್ರೊಜೆಕ್ಟ್ಸ ತೆಗೆದುಕೊಳ್ಳುವುದಲ್ಲದೆ ಆರಿಡ್ ಜೋನಿನಲ್ಲಿ ಬಾವಿಯಿಂದ ನೀರಾವರಿ ಸೌಕರ್ಯ ಎಲ್ಲಿ ಇಲ್ಲವೋ ಅಲ್ಲಿ ಮಾಡಿಕೊಡಬೇಕು.

ಇನ್ನೊಂದು ವಿಷಯ. ನಮ್ಮ ಸ್ಟೇಟ್ ಫಂಡಿನಿಂದ ಎಷ್ಟೋ ಹಣ ಖರ್ಚು ಮಾಡುತ್ತಿದ್ದೇವೆ. ಒಂದು ವಿಷಾದದ ಸಂಗತಿ ಎನೆಂದರೆ, ಬೆಳಗಾಂ ಜಿಲ್ಲೆಯಲ್ಲಿ ರಸ್ತೆ ಮೆಂಟೆನನ್ಸ್ ಇಲ್ಲ. ರೋಡ್ ವಿಚಾರದಲ್ಲಿ ಹೋಲಿಸಿ ನೋಡಿದರೆ ಬಹಳ ತಾರತಮ್ಯ ಕಂಡು ಬರುತ್ತದೆ. ಕಾರ್ಯ ದಕ್ಷತೆ ಹೆಚ್ಚಿದರೆ ಕೆಲಸ ಸುಗಮವಾಗಿ ಸುಲಭವಾಗುತ್ತದೆಂದು ಈ ಮೂಲಕ ಹೇಳಬಯಸುತ್ತೇನೆ. ಇದಕ್ಕೆ ಸರಕಾರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟಿರುವ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣ ಮುಗಿಸುತ್ತೇನೆ.

† ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳೇ, ಇವತ್ತಿನ ದಿವಸ ಸಭೆಯ ಮುಂದೆ ಇರತಕ್ಕ ಸುಮಾರು ಒಟ್ಟು ಮೊತ್ತ 72 ಕೋಟಿ 27 ಲಕ್ಷ ಇರತಕ್ಕ ಹಣವನ್ನು ಖರ್ಚು ಮಾಡತಕ್ಕಂಥ ಬೇಡಿಕೆ ಸಭೆಯ ಮುಂದೆ ಇಟ್ಟಿದ್ದಾರೆ. ನಮ್ಮ ಆಯವ್ಯಯದಲ್ಲಿ ಸುಮಾರು ಅರ್ಧದಷ್ಟು ಹಣ ಖರ್ಚು ಮಾಡತಕ್ಕಂಥ ಬಾಬಿಗೆ ಸಂಬಂಧಪಟ್ಟ ಈ ಒಂದು ದೊಡ್ಡ ಬೇಡಿಕೆ ಸಭೆಯ ಮುಂದೆ ಇದೆ. ಇಷ್ಟೇ ಅಲ್ಲದೆ ಇವತ್ತಿನ ದಿವಸ ಸಭೆಯ ಮುಂದೆ ಇಟ್ಟಿರತಕ್ಕಂಥ ಬೇಡಿಕೆಗಳಲ್ಲಿ ಪ್ರಾಮುಖ್ಯವಾದ ನಮ್ಮ ದೇಶದ ಆಡಳಿತಕ್ಕೆ ಸಂಬಂಧಪಟ್ಟ ಜನರಲ್ ಆಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ಅದೂ ಕೂಡ ಈ ಬೇಡಿಕೆಯಲ್ಲಿ ಅಡಕವಾಗಿದೆ. ಈ ಬೇಡಿಕೆಗಳಲ್ಲಿ ಕೆಲಸವನ್ನು ಅರಿಸಿ ಆ ಇಲಾಖೆಯ ಆಡಳಿತದಲ್ಲಿರುವ ಲೋಪದೋಷಗಳನ್ನು ಸಭೆಯ ಮುಂದೆ ಇಡುವುದಕ್ಕೆ ತಮ್ಮ ಅಪ್ಪಣೆ ಕೋರುತ್ತೇನೆ. ಜನರಲ್ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ಡಿಮ್ಯಾಂಡ್ ನಂಬರ್ 10 ಬಗ್ಗೆ ಮಾತನಾಡುತ್ತಾ ಈ ಇಲಾಖೆಗೆ ಸಂಬಂಧಪಟ್ಟಂಥ, ಪ್ರಾಮುಖ್ಯವಾಗಿ ಮಂತ್ರಿಗಳಿಗೆ ಸಂಬಂಧಪಟ್ಟಂಥ ವೆಚ್ಚ ಇದರಲ್ಲಿ ಸೇರಿದೆ. ಮಂತ್ರಿಗಳು ಮಾಡತಕ್ಕಂಥ ವೆಚ್ಚ ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಇದೆ ಎನ್ನುವುದನ್ನು ಈ ಆಯವ್ಯಯ ಪಟ್ಟಿಯಲ್ಲಿ ನೋಡುತ್ತಿದ್ದೇವೆ. 1962-63 ರಲ್ಲಿ 7-8 ಲಕ್ಷ ಇದ್ದುದು ಈಗ 16 ಲಕ್ಷಕ್ಕೆ ಏರಿದೆ. ಯಾವ ಸರಕಾರ ಮಿತವ್ಯಯ ಜಾರಿಗೆ ತರಬೇಕು ಎಂದು ನಿರ್ಧಾರ ಮಾಡಿದೆಯೋ, ಯಾವ ಸರಕಾರ ಎ. ಜಿ. ರಾಮಚಂದ್ರರಾಯರ ಕಮಿಟಿ ಮಾಡಿ ಯಾವ ರೀತಿ ಮಿತವ್ಯಯ ಮಾಡಬೇಕು ಎನ್ನುವುದಕ್ಕೆ ರಿಪೋರ್ಟ್ ತರಿಸುವುದಕ್ಕೆ ಏರ್ಪಾಡು ಮಾಡಿದ್ದಾರೋ, ಆ ರಿಪೋರ್ಟಿನಲ್ಲಿ ಕೂಡ ಮಂತ್ರಿಮಂಡಳ ಈ ದೇಶಕ್ಕೆ ಎಂಟು ಜನ ಮಂತ್ರಿಗಳು ಇದ್ದರೆ ಸಾಕು ಎಂದು ಪ್ರಾಮುಖ್ಯವಾಗಿ ಶಿಫಾರಸ್ಸು ಮಾಡಿದ್ದಾರೆ. ಅಂಥ ಶಿಫಾರಸ್ಸನ್ನು ಸರಕಾರ ಪ್ರಪ್ರಥಮವಾಗಿ ಒಪ್ಪಬೇಕಾಗುತ್ತದೆ. ತಮಗೆ ಸಂಬಂಧಪಟ್ಟ ಮಿತವ್ಯಯ ಶಿಫಾರಸ್ಸ ಎಕಾನಮಿ ಅಂಡ್ ರಿಸೋರ್ಸಸ್ ಕಮಿಟಿ ರಿಪೋರ್ಟಿನಲ್ಲಿ ಹೇಳಿದೆ. ಅವರಲ್ಲಿಯ ಮುಖ್ಯ ಅಂಶ ಅಂದರೆ ಮಂತ್ರಿ ಮಂಡಳ ಚಿಕ್ಕದಾಗಿ ಕಾಂಪಾಕ್ಟ್ ಆಗಿ ಇದ್ದರೆ ಚೆನ್ನಾಗಿ ಕೆಲಸ ಮಾಡುತ್ತದೆ ಎಂದು ಶಿಫಾರಸ್ಸು ಮಾಡಿದ್ದಾರೆ. ಇದನ್ನು ತಾವು ಕಾರ್ಯಗತ ಮಾಡದೆ ಹಿಂದೆ ಇದ್ದಂಥ ಮಂತ್ರಿಮಂಡಳದ ಗಾತ್ರಕ್ಕಿಂತ ಎರಡು ಮೂರು ಪಟ್ಟು ಜಾಸ್ತಿ ಮಾಡಿರುವುದು ನೋಡಿದರೆ ಮಿತವ್ಯಯದಲ್ಲಿ ಎಷ್ಟರ ಮಟ್ಟಿಗೆ ನಂಬಿಕೆ ಇದೆ ಎನ್ನುವುದನ್ನು ತೋರಿಸುತ್ತದೆ. ಮಂತ್ರಿಮಂಡಲದ ಕಡೆಗೆ ಕೈ ಮಾಡಿ ತೋರಿಸುವುದು ಏತಕ್ಕೆಂದರೆ ದೇಶದಲ್ಲಿ ಮಿತವ್ಯಯ ಮೊದಲು ಜಾರಿಗೆ ತರಬೇಕಾಗಿದೆ. ದೇಶದ ಏಳಿಗೆಯಾಗಬೇಕಾಗಿದೆ. ಮಿತವ್ಯಯ ಕಾರ್ಯಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಕಾರ್ಯಗತ ಮಾಡುವುದು ಆಗಿದ್ದರೆ ಪ್ರಥಮದಲ್ಲಿ ಮಂತ್ರಿಮಂಡಳ ಚಿಕ್ಕದಾಗಿ ಮಾಡಬೇಕಾಗಿತ್ತು.

ಈ ಹಿಂದೆ ಇದೇ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿ ಎಷ್ಟು ಖರ್ಚಿತ್ತು ಈಗ ಡಿಮ್ಯಾಂಡ್ ನಂಬರ್ 10ರಲ್ಲಿ ಎಷ್ಟಿದೆ ಎಂಬುದನ್ನು ನೋಡಿದರೆ ಸರ್ಕಾರದವರಿಗೇ ಎಷ್ಟು ಖರ್ಚು ಜಾಸ್ತಿಯಾಗಿದ ಎಂಬುದು ಗೊತ್ತಾಗುವುದು. ಈಗ ಈ ಖರ್ಚು ಎರಡರಷ್ಟು ಜಾಸ್ತಿಯಾಗಿದೆ. 1963-64 ರಲ್ಲಿ

7.5 ಲಕ್ಷ ರೂಪಾಯಿ ಖರ್ಚಾಗಿತ್ತು. ತಾವು ಪುಟ 39 ರಲ್ಲಿ ನೋಡಿದರೆ ಗೊತ್ತಾಗುತ್ತದೆ. ಅದು ಈ 65-66 ನೇ ಸಾಲಿಗೆ 15.5 ಲಕ್ಷವಾಗಿದೆ. ಇದನ್ನು ನೋಡಿದರೆ ಇವರು 100 ಕ್ಕೆ 100 ರಷ್ಟು ಖರ್ಚನ್ನು ಜಾಸ್ತಿ ಮಾಡಿದ್ದಾರೆಂದು ಕಂಡುಬರುತ್ತದೆ. ಇನ್ನು ರಾಜಭವನದ ಶೃಂಗಾರಕ್ಕಾಗಿ ಮಾಡುತ್ತಿರುವ ಖರ್ಚು ದಿನ ದಿನಕ್ಕೂ ಏರುತ್ತಿದೆ, ಸರ್ಕಾರದವರು ಹೋದ ವರ್ಷ ಆ ರಾಜ್ಯಪಾಲರ ಅಂತಸ್ತಿಗೆ ತಕ್ಕ ಹಾಗೆ ಮಾಡಬೇಕಾಗಿದೆ, ಆದುದರಿಂದ ಖರ್ಚನ್ನು ತಗ್ಗಿಸಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ, ಆದರೆ ಈ ಮಿತವ್ಯಯವನ್ನು ಅನುಸರಿಸಬೇಕೆಂಬ ಒಂದು ಕಟ್ಟುನಿಟ್ಟಾದ ಆಚರಣೆ ಮೇಲಿನಿಂದ ಬರಬೇಕು. ಈ ಒತ್ತಾಯ ಮೇಲಿಂದ ಬಂದರೆ ಒಳ್ಳೆಯದು. ಆದರೆ ಇಲ್ಲಿ ಹಾಗಾಗುತ್ತಿಲ್ಲ, ಮಿತವ್ಯಯವನ್ನು ಕೇವಲ ಕೆಳಮಟ್ಟದಲ್ಲಿ ಎಲ್ಲಿಯೋ ಒಂದೆರಡು ಜನ ಗುಮಾಸ್ತರನ್ನೋ ಅಥವಾ ಜವಾನರನ್ನೋ ಕೆಲಸದಿಂದ ತೆಗೆದು ಹಾಕಿದರೆ ಅದು ನಿಜವಾದ ಮಿತವ್ಯಯವಲ್ಲ. ಈ ನೀತಿಯನ್ನು ಸರ್ಕಾರ ಮೇಲ್ಮಟ್ಟದಲ್ಲಿ ಅನುಸರಿಸಬೇಕು. ನಮ್ಮ ಪಕ್ಕದ ರಾಜ್ಯವಾದ ಮದ್ರಾಸಿನಲ್ಲಿ ಕೇವಲ 8 ಜನ ಮಂತ್ರಿಗಳಿದ್ದಾರೆ. ಅವರದು ನಮ್ಮ ದೇಶಕ್ಕಿಂತ ದೊಡ್ಡ ದೇಶ; ಮೇಲಾಗಿ ಹೆಚ್ಚು ಆದಾಯವಿರತಕ್ಕ ದೇಶ. ಆದರೂ ಅಲ್ಲಿ ಕೇವಲ 8 ಜನ ಮಂತ್ರಿಗಳು ಮಾತ್ರ ಇದ್ದಾರೆ. ಹಾಗಿರುವಾಗ ಇಲ್ಲೇಕೆ ಇಷ್ಟು ಜನ ಮಂತ್ರಿಗಳು ಇರಬೇಕು ? ಇಲ್ಲಿ ಇಷ್ಟು ಜನ ಮಂತ್ರಿಗಳಿರುವುದನ್ನು ನೋಡಿ ಒಬ್ಬರು ಇದನ್ನು ಮುರುಕು ಮನೆಗೆ 30 ಕಂಬಗಳಿದ್ದಂತಿದೆ ಮೈಸೂರಿನ ಮಂತ್ರಿಮಂಡಲ ಎಂದು ಹೇಳಿರತಕ್ಕದ್ದು ನ್ಯಾಯವಾಗಿದೆ. ಅದೇ ರೀತಿ ಇಲ್ಲಿ 30 ಜನ ಮಂತ್ರಿಗಳಿದ್ದಾರೆ. ಈ ವಿಚಾರವನ್ನು ನಿಮ್ಮ ಕಾಂಗ್ರೆಸ್ ಕಡೆ ಇರತಕ್ಕ ಸದಸ್ಯರೇ ಹೇಳಿದ್ದಾರೆ. ಮುರುಕು ಮನೆಗೆ ಒದೆ ಕೊಟ್ಟಷ್ಟೂ ಮನೆಗೆ ಭದ್ರ ಇಲ್ಲವಿದ್ದರೆ ಇಲ್ಲಿ ಹಾಗೇ ಮುರಿದು ಬೀಳತಕ್ಕ ಸರ್ಕಾರಕ್ಕೆ ಅಥವಾ ಮಂತ್ರಿ ಮಂತ್ರಿಮಂಡಲಕ್ಕೆ ಹೀಗೆ ಒಂದು ಒದೆ ಕೊಟ್ಟು ಸರ್ಕಾರವನ್ನು ಬಲಪಡಿಸುತ್ತೇವೆಂದು ಹೇಳತಕ್ಕದ್ದು ಸರಿಯಲ್ಲ. ಇಲ್ಲಿ ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿ ಒಬ್ಬೊಬ್ಬರಿಗೂ ಕೊ-ಆರ್ಡಿನೇಷನ್ ಇಲ್ಲ. ಇಲ್ಲಿ ಮಂತ್ರಿಗಳೊಬ್ಬರು ಸಭೆಯಲ್ಲಿ ಮಾಡಿರತಕ್ಕ ಒಂದು ಹೇಳಿಕೆಯನ್ನು ಬಹಳ ಮೇಲ್ಮಟ್ಟದಲ್ಲಿರತಕ್ಕ ಸದಸ್ಯರೊಬ್ಬರು ಅದನ್ನು ಬೇಜಾಬ್ದಾರಿಯ ಹೇಳಿಕೆ ಎಂದು ಹೇಳಿದ್ದಾರೆ. ಹೀಗೆ ಅದನ್ನು ಅವರು ಖಂಡನೆ ಮಾಡಿದ್ದಾರೆ. ಹೀಗಾದರೆ ಇನ್ನು ಈ ಸಭೆಯಲ್ಲಿ ಕೊಡತಕ್ಕ ಹೇಳಿಕೆಗಳಿಗೆ ಇನ್ನಾವ ಮರ್ಯಾದೆ ಇದೆ ಎಂದು ನಾನು ಕೇಳಬೇಕಾಗಿದೆ. ಈ ಸಭೆಯಲ್ಲಿ ಕೈಗಾರಿಕಾ ಸಚಿವರೊಬ್ಬರು ಮಾಡಿರತಕ್ಕ ಒಂದು ಹೇಳಿಕೆಯನ್ನು ಇದು ಬೇಜಾಬ್ದಾರಿಯ ಹೇಳಿಕೆ ಎಂಬುದಾಗಿ ಮೇಲ್ಮಟ್ಟದಲ್ಲಿರತಕ್ಕ ಒಬ್ಬ ಸದಸ್ಯರು ಹೇಳಿದ್ದಾರೆ. ಹೀಗಿರುವಾಗ ಇನ್ನುಳಿದ ಮಂತ್ರಿಗಳು ಅವರಿಗೇನು ಅವರ ಸಹೋದ್ಯೋಗಿಗಳಿಗೇನು ರಕ್ಷಣೆಯನ್ನು ಕೊಟ್ಟರೆಂದು ನಾನು ಕೇಳುತ್ತೇನೆ? ಈ ಸಭೆಯ ನಡವಳಿಕೆಯ ಬಗ್ಗೆ ಇರತಕ್ಕ ಗೌರವ ಹೀಗಿದೆ. ಇದಕ್ಕೆಲ್ಲಾ ಕಾರಣ ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತಿರುವುದೇ ಆಗಿದೆ. ಇದರಿಂದ ಅಡ್ಮಿನಿಸ್ಟ್ರೇಷನ್ ಕೂಡ ಸಡಿಲಾಗುತ್ತಿದೆ. ಮಿತವ್ಯಯದ ದೃಷ್ಟಿಯಿಂದಲಾದರೂ ಇದನ್ನು ಕಡಮೆ ಮಾಡಿದರೆ ದೇಶಕ್ಕೆ ಒಳ್ಳೆಯದಾಗುವುದು. ಸಂಸ್ಥಾನದ ಭದ್ರತೆಗಾಗಿ ಇವರು ಹಣವನ್ನು ಖರ್ಚು ಮಾಡಿದ್ದರೆ ನಾವು ಚಿಂತೆಪಡಬೇಕಾಗಿರಲಿಲ್ಲ. ಆದರೆ ಇವರು ಇವರ ಒಂದು ಸ್ಥಾನ ಭದ್ರತೆಗಾಗಿ ಇಷ್ಟು ಹಣವನ್ನು ವ್ಯಯಮಾಡುವುದು ಒಳ್ಳೆಯದಲ್ಲ. ಇದರಿಂದ ದೇಶಕ್ಕೆ ತುಂಬಾ ಅನ್ಯಾಯವಾಗುತ್ತದೆ. ಎಲ್ಲಿ ಖರ್ಚನ್ನು ಕಡಮೆ ಮಾಡುವುದಕ್ಕೆ ಸಾಧ್ಯವಿದೆಯೋ ಅಲ್ಲಿ ಅದನ್ನು ಕಡಮೆ ಮಾಡದೆ, ಎಲ್ಲಿ ಖರ್ಚನ್ನು ಕಡಮೆ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿ ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡುವುದರಿಂದಲೇ ನಮ್ಮ ಹಣಕಾಸಿನ ಪರಿಸ್ಥಿತಿ ಇಷ್ಟು ಚಿಂತಾಜನಕ ಸ್ಥಿತಿಗೆ ಬರುವುದಕ್ಕೆ ಈ ಮಂತ್ರಿಮಂಡಲವೇ ಕಾರಣವೆಂದು ನಾನು ಹೇಳಬೇಕಾಗಿದೆ, ಈ ಮಂತ್ರಿಗಳೇ ಇದಕ್ಕೆಲ್ಲಾ ಜವಾಬ್ದಾರರೆಂದು ನಾನು ಹೇಳುತ್ತೇನೆ. ಇದಕ್ಕೆ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಬೇಕಾಗಿದೆ. ಇನ್ನು ನಮ್ಮ ಸೆಕ್ರೆಟೇರಿಯಟ್ಟನ್ನು ಆಧುನಿಕ ರೀತಿಯಲ್ಲಿ ಮಾರ್ಪಾಡು ಮಾಡಿ ಇಲ್ಲಿರತಕ್ಕ ವ್ಯವಸ್ಥೆಯನ್ನು ರೀ ಆರ್ಗನೈಜ್ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ಮಾಡಬೇಕಾದ್ದು ಅಗತ್ಯ. ಇಲ್ಲಿ ಆ ಹಳೇ ಕಾಲದಲ್ಲಿದ್ದ ಇಂಗ್ಲೀಷರ ಕಾಲದಲ್ಲಿದ್ದ ಪದ್ಧತಿ ಇನ್ನೂ ಮುಂದುವರಿದುಕೊಂಡು ಬರುತ್ತಿದೆ, ನಿವೃತ್ತ ಮಂತ್ರಿಗಳಾಗಿರತಕ್ಕ ಶ್ರೀ ಕಡಿದಾಳ್ ಮಂಜಪ್ಪನವರೇ ಈ ಮಾತನ್ನು ಹೇಳಿದ್ದಾರೆ, ಈಗಿರತಕ್ಕ ಪದ್ಧತಿ ನವಾಬರ ಕಾಲದ್ದು ಎಂದ್ದಾರೆ. ಆದರೆ ಅವರು ನಿವೃತ್ತರಾದ ಮೇಲೆ ಈ ಮಾತನ್ನು ಹೇಳುತ್ತಿದ್ದಾರೆ. ಅವರು ಮಂತ್ರಿಗಳಾಗಿದ್ದಾಗ ಇದನ್ನು ಏಕೆ ಸರಿ ಮಾಡಲಿಲ್ಲ ! ಅವರು ನಿವೃತ್ತರಾದ ಮೇಲೆ ಅವರಿಗಿದು ಅರಿವಾಯಿತೇನೋ ಆದರೆ ಈ ದಿವಸ ಇದು ಅಂಥವರಿಗೇ ಇಷ್ಟು ಚುಚ್ಚಿರಬೇಕಾಗಿದ್ದರೆ ಇನ್ನು ಸಾಮಾನ್ಯ ಜನರಿಗೆ ಹೇಗಾಗಿರಬಹುದು ! ಈ ದಿವಸ ಯಾವ ಒಬ್ಬ ಪ್ರಜೆಯೇ ಆಗಲೀ ಯಾವ ಒಂದು ಕಛೇರಿಗೆ ಹೋದರೂ ಅವರಿಗೆ ದೊರೆಯಬೇಕಾದ ಪರಿಹಾರ ತ್ವರಿತವಾಗಿ ದೊರೆಯುತ್ತಿಲ್ಲ. ನಮ್ಮ ಕಾನೂನಿನಲ್ಲಿ ಎರಡು ದೃಷ್ಟಿಗಳಿದ್ದಂತೆ ಕಾಣುತ್ತಿದೆ. ಬಾಯಿದ್ದವರಿಗೇ ಒಂದು ಕಾನೂನು, ಬಾಯಿಲ್ಲದವರಿಗೇ ಒಂದು ಕಾನೂನು. ಅವರು ಯಾವ ಪಕ್ಷವಾಗಿರಲಿ, ಬಾಯಿ ಜೋರಾಗಿರತ್ಕ ವ್ಯಕ್ತಿ ಯಾವ ಕಛೇರಿಗೆ ಹೋಗಲಿ ಆತನ ಕೆಲಸಗಳು

(ಶ್ರೀ ಎಸ್. ಶಿವಪ್ಪ)

ಬೇಗ ಆಗುತ್ತವೆ. ಆದರೆ ಒಬ್ಬ ದಡ್ಡ ಹೋದಾಗ ಅತನ ಕೆಲಸಗಳು ಅಷ್ಟು ಬೇಗ ಆಗುವುದಿಲ್ಲ. ಇದು ಖಂಡಿತವಾದ ಮಾತು ಹೀಗೆ ಎರಡು ತೆರನಾದ ಕಾನೂನಿರತಕ್ಕದ್ದು ಸರಿಯಲ್ಲ. ಎಲ್ಲರಿಗೂ ಒಂದು ಸಮಾನಾವಕಾಶ ಇರಬೇಕಾದ್ದು ನ್ಯಾಯ. ಆದುದರಿಂದ ಈ ದಿವಸ ಸೆಕ್ರೆಟೇರಿಯಟ್ಟಿನಿಂದ ಹಿಡಿದು ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳ ಮಟ್ಟದವರೆಗೂ ಎಲ್ಲವನ್ನೂ ಆಧುನಿಕ ರೀತಿಯಲ್ಲಿ ರೀಆರ್ಗನೈಜ್ ಮಾಡಿ ಜನಸಾಮಾನ್ಯರಿಗೆಲ್ಲಾ ಒಂದೇ ರೀತಿಯ ನ್ಯಾಯ ಸಿಗುವಂತೆ ಮಾಡಬೇಕಾದ್ದು ಅತ್ಯಾವಶ್ಯಕ.

ಇನ್ನು ಲೋಕೋಪಯೋಗಿ ಶಾಖೆಯ ವಿಚಾರಕ್ಕೆ ಬಂದರೆ ಈ ಇಲಾಖೆಗೆ ನಾವು ಬಹಳ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಆದರೆ ನಮ್ಮ ಅಭಿವೃದ್ಧಿಯ ಕೆಲಸಗಳು ಮಾತ್ರ ಒಂದೂ ಆಗುತ್ತಿಲ್ಲ. ಆದರೆ ನಮ್ಮ ದೇಶದ ಪ್ರಗತಿಯೆಲ್ಲಾ ಈ ಒಂದು ಇಲಾಖೆಯ ಮೇಲೆ ನಿಂತಿದೆ. ನಾವು ನಮ್ಮ ದೇಶದಲ್ಲಿ ಆಗಬೇಕಾದ ನೀರಾವರಿ ಕಾಂಗಾರಿಗಳು ರಸ್ತೆ, ಕಟ್ಟಡ, ಇತ್ಯಾದಿ ಕೆಲಸಗಳನ್ನೆಲ್ಲಾ ಈ ಇಲಾಖೆಗೆ ವಹಿಸಿದ್ದೇವೆ. ಆದರೆ ಈ ಇಲಾಖೆಯ ಕಳೆದ 2-3 ವರ್ಷಗಳ ಒಂದು ವಿಹಂಗಮ ದೃಷ್ಟಿಯನ್ನು ನೋಡುವುದಾದರೆ-ನಮ್ಮಲ್ಲಿ ದುಡ್ಡಿಲ್ಲ. ಕೇಂದ್ರದಿಂದ ಧನ ಸಹಾಯ ಬರಲಲ್ಲ ಎಂದು ಹೇಳಿ ಇಲ್ಲಿ ನಡೆಯಬೇಕಾಗಿದ್ದ ಅನೇಕ ಸಣ್ಣಪುಟ್ಟ ಕೆಲಸಗಳನ್ನೂ ಸಹಾ ಮಾಡಿರುವುದಿಲ್ಲ. ಆದಾಗ್ಗೂ ಈ ಇಲಾಖೆಯಲ್ಲಿ ಅಧಿಕಾರಿಗಳ ಸಂಬಳ ಸಾರಿಗೆಗಳು, ಆದರಲ್ಲೂ ಟಾಪ್ ಹೆವಿ ಬಹಳವಾಗಿದೆ. ಮೊದಲು ಇದ್ದ ಅಡ್ಮಿನಿಸ್ಟ್ರೇಟೀವ್ ಯುನಿಟ್ಟಿಗೂ ಈಗಿರುವುದಕ್ಕೂ ಸಂಬಂಧವೇ ಇಲ್ಲ. ಮೊದಲು ಕೇವಲ ಇಬ್ಬರು ಚೀಫ್ ಇಂಜನಿಯರುಗಳಿದ್ದರು. ಆದರೆ ಈ ದಿವಸ ಇಲಾಖೆಯಲ್ಲಿ 5-6 ಜನ ಚೀಫ್ ಇಂಜನಿಯರುಗಳಿದ್ದಾರೆ. ಇನ್ನೂ ಎಷ್ಟು ಜನರಿದ್ದಾರೋ ಗೊತ್ತಾಗುವುದಿಲ್ಲ. ಅವರು ಇಷ್ಟು ಅಧಿಕ ಸಂಖ್ಯೆಯಲ್ಲಿದ್ದರೂ ಲೆಕ್ಕಗಳನ್ನಾದರೂ ಸರಿಯಾಗಿ ಕೊಡುತ್ತಾರೆಯೇ ಎಂದರೆ ಅದೂ ಕೂಡ ಇಲ್ಲ. ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ ಹೀಗೆ ಬೇರೆ ಬೇರೆ ಕಡೆ ಲೆಕ್ಕಗಳನ್ನು ಕೊಡುತ್ತಿದ್ದಾರೆ. ಇಷ್ಟು ಜನ ಚೀಫ್ ಇಂಜನಿಯರುಗಳಿದ್ದೇನು ಫಲ ?

ಮೈನರ್ ಇರಿಗೇಷನ್‌ಗೆ ಹೆಚ್ಚು ಹಣ ದೊರೆಯದೇ ಇದ್ದರೂ ಕೂಡ ಇವತ್ತು ಇಂಜನಿಯರಿಂಗ್ ಇಲಾಖೆಯಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ನಿರ್ಮಾಣ ಮಾಡತಕ್ಕ ಕೆಲಸದಲ್ಲಿ ಏನು ಅರ್ಥವಿದೆ ಎಂದು ಹೇಳಿ ನಾನು ಲೋಕೋಪಯೋಗಿ ಸಚಿವರನ್ನು ಕೇಳುತ್ತೇನೆ. ಅವರು ಯುವಕರು, ಉತ್ಸಾಹಿಗಳು ಅವರ ಕಾಲದಲ್ಲಿ ಅನೇಕ ಕೆಲಸಗಳಾಗುತ್ತವೆ ಎಂದು ನಾನು ಇವತ್ತಿನ ದಿವಸ ಬಹಳ ಆಶೆಯನ್ನು ಇಟ್ಟುಕೊಂಡಿದ್ದೆ ಏಕೆಂದರೆ ಅವರು ಜಬರ್‌ದಸ್ತಾಗಿ ಇಲಾಖೆಯಲ್ಲಿರತಕ್ಕ ತಪ್ಪುಗಳನ್ನು ಕಂಡುಹಿಡಿದು ಯಾರೇ ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕ ಶಕ್ತಿ, ಸಾಮರ್ಥ್ಯ ಅವರಲ್ಲಿ ಇದೆ ಎಂಬುದು ನನಗೆ ಗೊತ್ತಿದೆ. ಅವರಿಗೆ ಇವತ್ತು ಕೇಳುತ್ತೇನೆ ನಿಮ್ಮ ಇಲಾಖೆಯಲ್ಲಿ ಅನೇಕ ದೊಡ್ಡ ದೊಡ್ಡ ಕೆಲಸಗಳು ನಡೆಯುತ್ತಾ ಇವೆ, ಅನೇಕ ದೊಡ್ಡ ದೊಡ್ಡ ಕಾಂಗಾರಿಗಳು ನಡೆಯುತ್ತಾ ಇವೆ. ಮೈಸೂರು ದೇಶದಲ್ಲಿ ಇಬ್ಬರು ಚೀಫ್ ಇಂಜನಿಯರುಗಳು ಇದ್ದಾಗ ಭದ್ರಾ ಪ್ರಾಜೆಕ್ಟ್ ಆಗಲಿ, ಕೃಷ್ಣರಾಜ ಸಾಗರ ಪ್ರಾಜೆಕ್ಟ್ ಆಗಲಿ, ಅವುಗಳೆಲ್ಲವನ್ನೂ ಇಲಾಖೆಯವರೇ ಮಾಡಿಸಿದ್ದಾರೆ, ಅವರ ಮುಖಾಂತರ ಖುದ್ದಾಗಿ ಅವರ ನೇತೃತ್ವದಲ್ಲೇ ಅನೇಕ ದೊಡ್ಡ ದೊಡ್ಡ ಕೆಲಸಗಳನ್ನು ಈ ದೇಶದಲ್ಲಿ ಮಾಡಿಸಿದ್ದಾರೆ. ಆ ಕೆಲಸಗಳು ಇವತ್ತಿಗೂ ಕೂಡ ಶಾಶ್ವತವಾಗಿ ಇವೆ. ಎಷ್ಟು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂಬುದನ್ನು ಇವತ್ತಿನ ದಿವಸ ನಾವೆಲ್ಲರೂ ಕೂಡ ನೋಡಬಹುದಾಗಿದೆ. ಬೆಂಗಳೂರಿನಿಂದ ನೆಲಮಂಗಲಕ್ಕೆ ಸಿಮೆಂಟ್ ಕಾನ್‌ಕ್ರೀಟ್ ರಸ್ತೆ ಹಾಕಿದ್ದಾರೆ. ಅದನ್ನೂ ನೋಡಿ ತಾವೂ ಕೂಡ ಬೇರೆ ಕಡೆಗಳಲ್ಲಿ ಕಾನ್‌ಕ್ರೀಟ್ ರಸ್ತೆ ಮಾಡಿಸಿದ್ದೀರಿ, ಸೇತುವೆ ಕಟ್ಟಿಸಿದ್ದೀರಿ ಒಂದು ಮಳೆ ಬಂದರೆ ಸಾಕು ರಸ್ತೆ, ಸೇತುವೆ ಎಲ್ಲಾ ಕೊಚ್ಚಿಹೋಗಿರುವುದನ್ನು ನಾವೆಲ್ಲರೂ ನೋಡುತ್ತಾ ಇದ್ದೇವೆ. ಇವತ್ತು ಸಿಬ್ಬಂದಿ ಹೆಚ್ಚಾಗಿದೆ, ಇಲಾಖೆಯಲ್ಲಿ ಖರ್ಚು ಹೆಚ್ಚಾಗಿದೆ, ಇಂಜನಿಯರುಗಳ ಸಂಖ್ಯೆ ಜಾಸ್ತಿಯಾಗಿದೆ ಆದರೂ ಕೂಡ ಸರಿಯಾಗಿ ಕೆಲಸ ಮಾಡದೇ ಇರುವುದರಿಂದ ದೇಶದಲ್ಲಿ ಎಷ್ಟು ದುಡ್ಡು ಖರ್ಚು ಮಾಡುತ್ತಾ ಇದ್ದೇವೆಯೋ ಅದಕ್ಕೆ ತಕ್ಕ ಪ್ರತಿಫಲ ದೊರಕದೆ ಹೋಗಿದೆ. ಅನೇಕ ಜನ ಇಂಜನಿಯರುಗಳು ಮತ್ತು ಕಂಟ್ರಾಕ್ಟರುಗಳು ಮೋಸ ಮಾಡತಕ್ಕ ಕೆಲಸ ದಿನ ದಿನಕ್ಕೆ ಜಾಸ್ತಿಯಾಗುತ್ತಾ ಇದೆ. ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕು. ಇವತ್ತು ದೊಡ್ಡ ದೊಡ್ಡ ಯೋಜನೆಗಳು ಎಂದರೆ ಶರಾವತಿಯಾಗಲಿ, ಯಾವ ಯೋಜನೆಯೇ ಆಗಲಿ ಕಂಟ್ರಾಕ್ಟರುಗಳಿಗೆ ಕೊಟ್ಟು ಅವರ ಮೂಲಕ ಕೆಲಸ ಮಾಡುತ್ತಾ ಇರುವುದರಿಂದ ಅನೇಕ ರೀತಿಯಲ್ಲಿ ಹಣ ದುರ್ವ್ಯಯವಾಗುವುದಕ್ಕೆ ಅದು ಒಂದು ಪ್ರಬಲವಾದ ಕಾರಣವಾಗಿದೆ. ಇದನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ. ಎಲ್ಲಿಯವರೆಗೆ ದೊಡ್ಡ ದೊಡ್ಡ ಕಂಟ್ರಾಕ್-

ಕ್ಟರುಗಳ ಮುಖಾಂತರ ಕೆಲಸ ಮಾಡುವ ಪದ್ಧತಿಯನ್ನು ಇಟ್ಟುಕೊಂಡಿರುತ್ತಿರೋ ಅಲ್ಲಿಯವರೆಗೆ ಆ ಕಂಟ್ರ್ಯಾಕ್ಟುದಾರರು ತಮ್ಮ ಪ್ರಭಾವವನ್ನು ಸರ್ಕಾರದ ಇಂಜನಿಯರುಗಳ ಮೇಲೆ ಮತ್ತು ಇತರ ಎಲ್ಲರ ಮೇಲೂ ಬೀರಿ ಹಣವನ್ನು ದುರ್ವ್ಯಯಪಡಿಸತಕ್ಕ ಕೆಲಸ ನಡೆಯುತ್ತಲೇ ಇರುತ್ತದೆ. ಮತ್ತೊಂದು ವಿಷಯ ತಿಳಿದುಬರುತ್ತಾ ಇದೆ ಯಾವ ಪ್ರಾಜೆಕ್ಟಾಗಲಿ, ಕಾಂಗಾರಿಯಾಗಲಿ ಇವತ್ತಿನ ದಿವಸ ನಮ್ಮ ದೇಶದಲ್ಲಿ ಅದಕ್ಕೆ ಖರ್ಚಾಗುತ್ತಾ ಇರತಕ್ಕ ಹಣದಲ್ಲಿ 100ಕ್ಕೆ 50 ರಷ್ಟು ಭಾಗ ಅನೇಕ ರೀತಿಯಲ್ಲಿ ದುರ್ವ್ಯಯವಾಗುತ್ತಾ ಇದೆ, ತಾವು ಕೊಡತಕ್ಕ ಹಣಕ್ಕೆ ಸರಿಯಾದ ರೀತಿಯಲ್ಲಿ ಸಿಮೇಂಟು ಮತ್ತು ಕಬ್ಬಿಣವನ್ನು ಉಪಯೋಗ ಮಾಡುತ್ತಾ ಇಲ್ಲ. ಹೀಗಾಗಿ ನಮ್ಮ ದೇಶದ ಸಂಪತ್ತು ಖಂಡಿತವಾಗಿಯೂ ದುರ್ವ್ಯಯವಾಗುತ್ತಾ ಇದೆ. ಇದು ಒಂದು ರಸ್ತೆ ವಿಚಾರ ಮಾತ್ರ ವಲ್ಲ. ಉದಾಹರಣೆಗೆ ಕೃಷ್ಣರಾಜಸಾಗರ ನೋಡಿ, ಅದೇ ರೀತಿ ಇನ್ನೂ ಕೆಲವು ಸೇತುಗೆಗಳನ್ನು ನೋಡಿ ಅವುಗಳನ್ನು ಕಟ್ಟಿ ನೂರಾರು ವರ್ಷಗಳು ಆದರೂ ಕೂಡ ಇನ್ನೂ ಕೂಡ ಬಲವಾಗಿವೆ. ಅವನ್ನು ಬರೀ ಗಾರೆಯನ್ನು ಉಪಯೋಗಿಸಿ ಕಟ್ಟಿದ್ದಾರೆ. ಈಗಿನ ಸೇತುವೆಗಳು ಮೂರು ನಾಲ್ಕು ತಿಂಗಳಿನಲ್ಲಿ ಬಿದ್ದು ಹೋಗಿರುವುದನ್ನು ನೋಡಿದ್ದೇವೆ. ಆದ್ದರಿಂದ ನಾನು ಮಾನ್ಯ ಲೋಕೋಪ ಯೋಗಿ ಸಚಿವರಿಗೆ ಹೇಳುತ್ತೇನೆ. ಯಾವ ಕಾಂಟ್ರ್ಯಾಕ್ಟ್‌ದಾರನೇ ಆಗಿರಲಿ ದಾಕ್ಷಿಣ್ಯವಿಲ್ಲದೇ ಅವನಿಗೆ ಕೊಟ್ಟಿರತಕ್ಕ ಸಿಮೆಂಟನ್ನು, ಕಬ್ಬಿಣವನ್ನು ದುರುಪಯೋಗ ಮಾಡಿದ್ದೇ ಆದರೆ ಅವನಿಗೆ ಯಾವ ಶಿಕ್ಷೆಯನ್ನು ಕೊಟ್ಟಿದ್ದೀರಿ ? ಶರಾವತಿಯಲ್ಲಿ ಸಹಸ್ರಾರು ಮೂಟೆಗಳು ಸಿಮೆಂಟ್ ಪತ್ತೆ ಇಲ್ಲದೇ ಹೋಗಿದೆ, ಕಬ್ಬಿಣ ಪತ್ತೆ ಇಲ್ಲದೇ ಹೋಗಿದೆ; ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ದೊಡ್ಡ ದೊಡ್ಡ ವ್ಯಕ್ತಿಗಳ ಮೇಲೆ ಇವತ್ತಿನವರೆಗೂ ಕಾರ್ಯಕ್ರಮವನ್ನು ತೆಗೆದುಕೊಳ್ಳದಿದ್ದರೆ ಏನು ಪ್ರಯೋಜನ ? ಜತ್ತಿಯವರು ಇದ್ದಾರೆ, ನಮಗೆ ಬೇಕಾದವರು ಇದ್ದಾರೆ, ಅವರ ರಕ್ಷಣೆ ಇದೆ, ಎಂದು ಹೇಳಿ ಅವರಲ್ಲಿ ಅಹಂಭಾವ ಇದೆ. ಸಣ್ಣಪುಟ್ಟ ಇಂಜನಿಯರುಗಳ ಲಕ್ಷವೇ ಇಲ್ಲ, ಅಂತಹ ವ್ಯಕ್ತಿಗಳು ಈ ದೇಶದಲ್ಲಿ ಇದ್ದಾರೆ. ಮುಖ್ಯಮಂತ್ರಿಗಳ ರಕ್ಷಣೆ ಅವರಿಗೆ ಇದೆ ಎಂಬ ಮಾತು ತಿಳಿದು ಬಂದಿದೆ. ಅವಕ್ಕೆ ಸಾಕಷ್ಟು ಪುರಸ್ಕಾರ ಕೂಡ ಇದೆ. ಏಕೆಂದರೆ ಅವರು ಹೇಳತಕ್ಕ ಮಾತಿನ ರೀತಿಯಲ್ಲೂ ಕೂಡ ಕೆಲಸಗಳು ನಡೆಯುತ್ತಾ ಇವೆ. ದೊಡ್ಡ ದೊಡ್ಡ ಕಂಟ್ರ್ಯಾಕ್ಟ್ ದಾರರು ಏನೇ ಮಾಡಿದರೂ ದಬಾಯಿಸಿಕೊಂಡುಬಿಡುತ್ತಾ ಇದ್ದಾರೆ. ಸಣ್ಣಪುಟ್ಟವರು ಬಡ ಪಾಯಿ ಇದ್ದರೆ ಅವರಿಗೆ ಶಿಕ್ಷೆ ಕೊಟ್ಟು ನಿರ್ಮೂಲ ಮಾಡುತ್ತೀರಿ. ಈ ರೀತಿ ಈ ಕೆಲಸಗಳು ಪ್ರಭಾವಶಾಲಿ ವ್ಯಕ್ತಿಗಳ ಕೈಗೆ ಸೇರಿ ಖಂಡಿತವಾಗಿಯೂ ನಮ್ಮ ದೇಶದ ಅಪಾರವಾದ ಹಣ ಖರ್ಚಾಗಿರುವುದು ದುರ್ವ್ಯಯವಾಗಿರುವುದಕ್ಕೆ ಕಾರಣವಾಗಿದೆ. ಈ ಶಾಸನ ಸಭೆಯಲ್ಲಿ ಕೆಲವು ದಿವಸಗಳ ಕೆಳಗೆ ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡತಕ್ಕ ಕಾಲದಲ್ಲಿ ಯಾವ ಯೋಜನೆಯನ್ನು ತೆಗೆದುಕೊಂಡರೂ ಕೂಡ ಅದು ಪುನಃ ರೀ ಎಸ್ಟಿಮೇಟ್ ಆಗಬೇಕು, ಪುನಃ ಅದನ್ನು ಪರೀಕ್ಷೆ ಮಾಡಬೇಕು ಎಂಬ ಕಾರಣಗಳನ್ನು ಮುಂದಿಡುತ್ತಾ ಬಂದಿದ್ದೀರಿ. ಆ ಯೋಜನೆಗಳನ್ನು ಒಂದು ಶಾಸ್ತ್ರೀಯವಾದ ಅಡಿಗಲ್ಲು ಅಥವಾ ಪದ್ಧತಿಯ ಮೇಲೆ ಪಿ. ಡಬ್ಲ್ಯೂ. ಡಿ. ಅವರು ಏಕೆ ಮಾಡಿಲ್ಲ ಎಂಬುದನ್ನು ಪರೀಕ್ಷೆ ಮಾಡಬೇಕು. ಏಕೆಂದರೆ ಇವತ್ತು ನಮ್ಮದು ಒಂದು ಪ್ಲಾನ್ಡ್ ಎಕಾನಮಿ. ಒಂದು ನಿಯೋಜಿತ ರೀತಿಯಲ್ಲಿ ರಾಷ್ಟ್ರದ ಯೋಜನೆಗಳನ್ನು ಮಾಡತಕ್ಕ ಕಾಲದಲ್ಲಿ ನಾವು ಇಂದು ಇದ್ದೇವೆ. ನಿಯೋಜಿತ ಕಾರ್ಯಕ್ರಮದ ಪ್ರಕಾರ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕ ಕಾಲ ದಲ್ಲಿ ಯಾವ ಯೋಜನೆಯಾಗಲೀ ಆ ಯೋಜನೆಗೆ ಪ್ಲಾನು ತಯಾರು ಮಾಡತಕ್ಕ ಕಾಲದಲ್ಲಿ ಶಾಸ್ತ್ರೀ ಯವಾಗಿ ಮಾಡಬೇಕು. ಅದಕ್ಕೆ ಎಷ್ಟೇ ವಿಳಂಬವಾದರೂ ಪರವಾಗಿಲ್ಲ. ಸರಿಯಾಗಿ ಪ್ಲಾನ್ ಮಾಡಿ, ಎಸ್ಟಿಮೇಟ್ ಮಾಡಿ, ಅದು ಎಷ್ಟಿರಬೇಕು, ಎಷ್ಟುಗಾತ್ರ ಇರಬೇಕೆಂಬುದನ್ನು ಶಾಸ್ತ್ರೀ ಯವಾಗಿ ಪರಿಶೀಲನೆ ಮಾಡಬೇಕು. ಒಂದು ಸಾರಿ ಮಾಡಿದ ಒಂದು ಪ್ಲಾನ್ ಯಾವ ಕಾರಣ ದಿಂದಲೂ ಹೆಚ್ಚಿನ ಬದಲಾವಣೆಯಾಗುವುದಕ್ಕೆ ಅವಕಾಶವಿರಬಾರದು. ಅನಿವಾರ್ಯವಾದ ಸಂದರ್ಭಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡತಕ್ಕ ಕಾಲ ಬರಬಹುದು, ಇವತ್ತಿನ ದಿವಸ ನೂರಕ್ಕೆ ತೊಂಭತ್ತು ಭಾಗ ಬದಲಾವಣೆಯಾಗುತ್ತಾ ಇವೆ, ಇದನ್ನು ತೀವ್ರವಾಗಿ ಆಲೋಚನೆ ಮಾಡಿ ಇಂಜನಿಯರುಗಳು ಯಾರೇ ಆಗಲಿ, ಅದನ್ನು ಏಕೆ ಸರಿಯಾಗಿ ಮಾಡಲಿಲ್ಲ ಎಂಬುದನ್ನು ಕಂಡು ಹಿಡಿಯಲೇ ಬೇಕಾಗಿದೆ. ಇವತ್ತಿನ ದಿವಸ ಈ ರೀತಿ ಲೋಕೋಪಯೋಗಿ ಇಲಾಖೆಯಲ್ಲಿ ಆಗುತ್ತಾ ಇರುವುದಕ್ಕೆ ಕಾಣ ಇದೆ ಎಂದು ಹೇಳುತ್ತೇನೆ. ಎಸ್ಟಿಮೇಟ್ ಮಾಡುವಾಗಲೇ ಅವನು ಏನೋ ತಪ್ಪು ಇಟ್ಟಿರುತ್ತಾನೆ. ಕಂಟ್ರ್ಯಾಕ್ಟರು ಮತ್ತು ಅವರು ಇಬ್ಬರೂ ಕೂಡ ಏಕೀಭವಿಸಿ ಇಬ್ಬರಿಗೂ ಪ್ರಯೋಜನವಾಗತಕ್ಕ ರೀತಿಯಲ್ಲಿ ಇದನ್ನೆಲ್ಲಾ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾ ಇದ್ದಾರೆ. ಇದು ನಿಜವಾದರೆ ಇದನ್ನು ಪರೀಕ್ಷೆ ಮಾಡಿ ಇಲ್ಲದೆ ಹೋದರೆ ನಮ್ಮ ದೇಶದ ಹಣಕಾಸು ಹಿಡಿತಕ್ಕೆ ಸಿಕ್ಕುವುದಿಲ್ಲ ಎಂಬುದನ್ನು ಒತ್ತಾಯವಾಗಿ ಹೇಳುತ್ತಾ ಇದ್ದೇನೆ. ಇವತ್ತು ಪ್ರಾಜೆಕ್ಟುಗಳನ್ನು ಕಾರ್ಯಗತ ಮಾಡತಕ್ಕ ಕಾಲದಲ್ಲಿ ಅನೇಕ ಸಾರಿ ಹೇಳಿದ್ದೇನೆ. ಕಾವೇರಿ

(ಶ್ರೀ ಎಸ್. ಶಿವಪ್ಪ)

ವ್ಯಾಲಿ ಪ್ರಾಜೆಕ್ಟಿನಿಂದ ಮೈಸೂರು ಮತ್ತು ಮದರಾಸು ಸರ್ಕಾರಕ್ಕೆ ಆಗಿರುವ ಒಪ್ಪಂದ 1972ಕ್ಕೆ ಮುಗಿಯುತ್ತದೆ. ಅದು ಮುಗಿಯುವುದರೊಳಗೆ ಅಲ್ಲಿ ದೊಡ್ಡ ಪ್ರಾಜೆಕ್ಟುಗಳು ಏನಿವೆ ಅವನ್ನೆಲ್ಲಾ ಕಾರ್ಯಗತ ಮಾಡಿದ್ದರೆ ಬಹುಶಃ ಕಾವೇರಿ ನದಿಯಿಂದ ನಮಗೆ ಎಷ್ಟುಪಾಲು ನೀರು ಬರಬೇಕೋ ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವೇ ಆಗದೇ ಇರಬಹುದು, ಆ ಒಂದು ಕಾರಣದಿಂದ ಕಾವೇರಿ ವ್ಯಾಲಿಯಲ್ಲಿರತಕ್ಕ ಹೇಮಾವತಿ, ಹಾರಂಗಿ, ಕಂಬದ ಕಡ ಇದನ್ನೆಲ್ಲಾ ಮಾಡಬೇಕು. ಆದರೆ ಈ ಯೋಜನೆಗಳನ್ನೆಲ್ಲಾ ಒಂದಲ್ಲ ಒಂದು ಕಾರಣದಿಂದ ಮುಂದೂಡುತ್ತಾ ಇದ್ದೀರಿ. ಹೇಮಾವತಿ ಪ್ರಾಜೆಕ್ಟಿನ ವಿಷಯ 40 ವರ್ಷಗಳಿಂದ ಪರಿಶೀಲನೆಯಲ್ಲಿದೆ. ಶ್ರೀಮಾನ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಎಸ್ಟಿಮೇಟ್ ಮಾಡಿದ್ದರು. ಪುನಃ ಎಸ್ಟಿಮೇಟ್ ಪ್ಲಾನ್ ಎಲ್ಲಾ ಆಯಿತು, ಈಗಲೂ ಕೂಡ ಏನು ಮಾಡಬೇಕೆಂದು ಇದ್ದೀರೋ ಗೊತ್ತಿಲ್ಲ. ಏನೋ ಕಾರಣದಿಂದ ಮುಂದ ಮುಂದಕ್ಕೆ ಹಾಕುತ್ತಾ ಇದ್ದೀರಿ ಎಂದು ನನಗೆ ಅನಿಸುತ್ತದೆ. ಹಣದ ಅಭಾವ ಇರುವಾಗ ಅದಕ್ಕೆ ಇಟ್ಟಿರತಕ್ಕ ಹಣವನ್ನು ಬೇರೆ ಕಡೆಗೆ ಉಪಯೋಗಮಾಡಬೇಕೆಂಬ ದೃಷ್ಟಿಯಿಂದ ಮಾಡುತ್ತಾ ಇದ್ದೀರಿ ಎಂದು ನಾನು ಭಾವಿಸುತ್ತೇನೆ. ಆದರಿಂದಲೇ ಈ ರೀತಿ ಮುಂದೆ ಹಾಕತಕ್ಕ ಧೋರಣೆ ಇರಬಹುದು ಎಂದು ನನಗೆ ಸಂಶಯ ಬರುತ್ತಾ ಇದೆ. ಅದನ್ನು ನಾನು ಪರಿಹಾರ ಮಾಡಿಕೊಳ್ಳಬೇಕಾಗಿದೆ. ಈ ರೀತಿಯಲ್ಲಿ ಇಂಬ್ಯಾಲೆನ್ಸ್ ಇರಬಾರದು, ಎಲ್ಲಿ ನೀರು ದೊರೆಯುತ್ತದೆ ಅಂತಹ ಎಲ್ಲಾ ಕಡೆಗಳಲ್ಲೂ ಕೆಲಸಗಳನ್ನು ತೆಗೆದುಕೊಳ್ಳತಕ್ಕ ಕಾಲದಲ್ಲಿ ತಾವು ಸಮದೃಷ್ಟಿಯಿಂದ ಎಲ್ಲಾ ಕಡೆಯಲ್ಲೂ ಕೂಡ ಹಣವನ್ನು ಖರ್ಚುಮಾಡತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಮೊದಲೇ ಮೈಸೂರು ದೇಶದವರು ನೀರಾವರಿಯಲ್ಲಿ ಬಹಳ ಕೆಳಮಟ್ಟದಲ್ಲಿ ಇದ್ದೇವೆ. ಇಂಡಿಯಾ ದೇಶದ ಪ್ರಮಾಣವನ್ನು ತೆಗೆದುಕೊಂಡರೆ ಶೇಕಡ 6-7 ರಷ್ಟು ಇದ್ದೇವೆ. ಇದನ್ನು ಎಷ್ಟು ಹೆಚ್ಚು ಮಾಡಿದರೂ ಕೂಡ ಸಾಲದು. ಇದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂದರೆ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು 225 ಕೋಟಿ ರೂಪಾಯಿಗಳಷ್ಟು ಯೋಜನೆಗಳನ್ನು ಮಾಡಬೇಕೆಂದು ಹೊರಟಿದ್ದೀರಿ. ಅದರಲ್ಲಿ ಇವತ್ತು ಕೇವಲ 80-90 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. 25 ಲಕ್ಷ ಎಕರೆ ಪೊಟೆನ್ಶಿಯಲ್ ಮಾಡಬೇಕೆಂದು ಹೊರಟಿರಿ, ಆದರೆ ಇವತ್ತು ಆಗಿರುವುದು ಕೇವಲ 5 ಅಥವಾ 6 ಲಕ್ಷ ಎಕರೆ ಮಾತ್ರ. ಈ ಒಂದು ವೇಗದಲ್ಲಿ ಹೋಗುವುದಾದ ಇನ್ನು ಎಷ್ಟು ದಿವಸ ಪ್ರಯತ್ನ ಮಾಡಿದರೂ ಕೂಡ ನಮ್ಮ ದೇಶದಲ್ಲಿ ಈ ನೀರಾವರಿಯನ್ನು ಮೇಲ್ಮಟ್ಟಕ್ಕೆ ತರುವುದಕ್ಕೆ ಅಥವಾ ಅದರ ವ್ಯಾಪ್ತಿಯನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವಾಗಲಾರದು. ಆದ್ದರಿಂದ ತೀವ್ರವಾದ ಗಮನವನ್ನು ಈ ಕಡೆಗೆ ಕೊಟ್ಟು ಇದಕ್ಕೆ ಬೇಕಾಗತಕ್ಕ ಹಣವನ್ನು ಬರಮಾಡಿಕೊಳ್ಳಲು ಕೇಂದ್ರ ಸರ್ಕಾರದವರನ್ನು ಒತ್ತಾಯ ಮಾಡಿ ಹಿಂದೆ ಬಿದ್ದಿರತಕ್ಕ ಮೈಸೂರು ದೇಶವನ್ನು ಇಂಡಿಯಾ ದೇಶದ ಮಟ್ಟಕ್ಕೆ ತರಬೇಕು. ಆ ಒಂದು ದೃಷ್ಟಿಯಿಂದಲೂ ಮತ್ತು ಸಮಾನತೆಯ ದೃಷ್ಟಿಯಿಂದಲೂ ಕೂಡ ನಮ್ಮ ಮೈಸೂರು ದೇಶ ಈಗ ನೀರಾವರಿಗೆ ಹೆಚ್ಚಿನ ದುಡ್ಡನ್ನು ಕೇಳುವುದಕ್ಕೆ ಅಧಿಕಾರವನ್ನು ಹೊಂದಿದೆ. ಇವತ್ತು ಇಡೀ ಭಾರತದಲ್ಲಿ ನಾವು ಎಲ್ಲರಿಗಿಂತ ಹಿಂದುಳಿದಿದ್ದೇವೆ. ಕೇಂದ್ರದವರಾದರೂ ಕೊಡಬೇಕು ಅಥವ ಹೇಗಾದರೂ ಮಾಡಿ ಇತರ ಕಡೆಗಳಿಂದ ಹೆಚ್ಚು ಹಣ ಬರಮಾಡಿಕೊಂಡು ನೀರಾವರಿ ಹೆಚ್ಚಿಸಲು ತ್ವರಿತ ಕ್ರಮ ಕೈಕೊಳ್ಳಬೇಕಾದ್ದು ಅಗತ್ಯವಾಗಿದೆ.

4-00 P.M.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಸ್ತೆಗಳಿಗೆ ಕೊಟ್ಟಿದ್ದ ಹಣ 3 ವರ್ಷಗಳ ಅವಧಿಯಲ್ಲೇ ಖರ್ಚಾಗಿದೆ ಎಂದು ಹೇಳಿದರು, ಅದೇನೋ ನ್ಯಾಯವಾದುದೇ ಆಗಿದೆ. 1962ನೆಯ ಇಸವಿಯಲ್ಲಿ ಚುನಾವಣೆ ನಡೆಯಬೇಕಾಗಿದ್ದುದರಿಂದ ಹಿಂದಿದ್ದ ಸರಕಾರ ಜನತೆಗೆ ಹೆಚ್ಚು ಸೌಕರ್ಯ ಒದಗಿಸಿರುವುದಾಗಿ ತೋರಿಸಿಕೊಳ್ಳಲು ಹಾಗೆ ಬೇಗ ಖರ್ಚು ಮಾಡಿದರು ಆದರೆ ಆಗ ಮಾಡಿದ ರಸ್ತೆ ಒಂದು ಕಡೆಯೂ ಇಲ್ಲ. ಕಾಲುವೆ ತೆಗೆದು ರಸ್ತೆಗೆ ಮಣ್ಣು ಹಾಕಿದರು. ಆದರೆ ರಸ್ತೆ ಇರುವುದೇ ಕಾಣುತ್ತಿಲ್ಲ, ಅದು ಚಿಂತಾಜನಕ ಸ್ಥಿತಿಯಲ್ಲಿದೆ. ರೂರಲ್ ಕಮ್ಯೂನಿಕೇಷನ್ ರಸ್ತೆ ಹಿಂದೆ ಮಾಡಿದ್ದರೇ ಎಂದು ಕೇಳುವ ಸ್ಥಿತಿಗೆ ಬಂದಿದೆ. ಹಿಂದೆ ಮಾಡಿದ ರಸ್ತೆಗಳು ಯೋಗ್ಯ ರೀತಿಯಲ್ಲಿ ಜನರಿಗೆ ಅನುಕೂಲವಾಗುವಂತಿರಲು ಸೂಕ್ತ ಕ್ರಮ ಕೈಕೊಳ್ಳಬೇಕು, ಮಾಡಿರುವ ರಸ್ತೆಗಳನ್ನು ಉಳಿಸಬೇಕು. ಅದಕ್ಕೇನಾದರೂ ಮಾಡಿ ಹಣ ಒದಗಿಸಬೇಕು, ಇಲ್ಲದಿದ್ದರೆ ಹಾಳಾಗುತ್ತವೆ. ಹಿಂದೆ ಮಾಡಿರುವ ರಸ್ತೆಗಳಗಳನ್ನು ಸರಿಯಾದ ಸ್ಥಿತಿಯಲ್ಲಿಡದಿದ್ದರೆ ಹಾನಿಯಾಗುತ್ತದೆ.

ಹೀಗೆ ಲೋಕೋಪಯೋಗಿ ಇಲಾಖೆ ಮಾಡಬೇಕಾದ ಕೆಲಸ ಸಾಕಷ್ಟು ಆಗಿಲ್ಲ. ಮೆಹನತ್ತಿನಿಂದ ಕೆಲಸ ಮಾಡದಿದ್ದರೆ ಮಂತ್ರಿಗಳು ಜವಾಬ್ದಾರರಾಗಬೇಕಾಗುತ್ತದೆ. ಆ ಇಲಾಖೆ ಮಂತ್ರಿಗಳು ಯಾವಾಗಲೂ ಉತ್ಸಾಹಶಾಲಿಗಳೆಂಬ ಭಾವನೆ ಇತ್ತು. ಇವತ್ತು ಅವರು ದೊಡ್ಡ ದೊಡ್ಡವರ ಬಲೆಗೆ ಬಿದ್ದು ಅಥವ ಪ್ರಭಾವಕ್ಕೊಳಗಾಗಿ ಅಥವ ಮುಖ್ಯಮಂತ್ರಿಗಳ ಮಾತಿಗೆ ಕಟ್ಟುಬಿದ್ದು ಅನೇಕ ದೊಡ್ಡದೊಡ್ಡ ತಪ್ಪುಗಳನ್ನು ಮಾಡುತ್ತಿದ್ದಾರೆ. ಅದಾಗಬಾರದು. ಅವರು ಇವತ್ತು ಅಧಿಕಾರದಲ್ಲಿರಬಹುದು, ನಾಳೆ ಹೋಗಬಹುದು. ಧೈರ್ಯದಿಂದ ಕೆಲಸ ಮಾಡಿ ಇರುವ ಲೋಪಗಳನ್ನು ಸರಿಪಡಿಸುವಾಗ ಒಂದು ವೇಳೆ ಮಂತ್ರಿತನ ಹೋದರೆ ಶಹಭಾಸ್‌ಗಿರಿ ಕೊಡಬಹುದು. ದಾಕ್ಷಿಣ್ಯಕ್ಕೆ ಸಿಕ್ಕಿಕೊಂಡರೆ ಇಲಾಖೆ ಕೆಲಸ ಮಾಡುವುದು ಕಷ್ಟ. ಆದುದರಿಂದ ಬಲವತ್ತರವಾಗಿ ಕೆಲಸಮಾಡಿ ಜಯಿಸಬೇಕು ಎಂದು ಅವರಿಗೆ ಎಚ್ಚರಿಕೆ ಕೊಡುವುದರ ಮೂಲಕ ಸಲಹೆ ಮಾಡುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಬೋರ್ಡಿದೆ, ಅದಕ್ಕೆ ಸುಮಾರು ಹನ್ನೆರಡೂವರೆ ಕೋಟಿ ರೂಪಾಯಿಗಳ ಆದಾಯವಿದೆ. ಮೊದಲು ಎಂಟೂವರೆ ಕೋಟಿ ಇತ್ತು. ಶರಾವತಿ ಯೋಜನೆ ಕೆಲಸವಾಗುತ್ತಾ ಬಂದಾಗಿನಿಂದ ಆದಾಯ ಹೆಚ್ಚುತ್ತಿದೆ, 65-66ಕ್ಕೆ ಹನ್ನೆರಡೂವರೆ ಕೋಟಿ ರೂಪಾಯಿಗಳ ಅಂದಾಜಾಗಿದೆ. ಶರಾವತಿ ಯೋಜನೆಯಿಂದ ಹೆಚ್ಚು ವಿದ್ಯುಚ್ಛಕ್ತಿ ಸರಬರಾಯಾಗುವುದರಿಂದ ಆದಾಯದ ಅಂದಾಜು ಏರಿದೆ. ಇಂಥ ಇಲಾಖೆಗೆ ರಚಿಸಿರುವ ಬೋರ್ಡನ್ನು ಪುನಃರಚನೆ ಮಾಡಬೇಕಾಗುತ್ತದೆ. ಇದರ ಸಂಬಂಧದಲ್ಲಿ ರಾಜಕೀಯವನ್ನಿಟ್ಟುಕೊಂಡು ಕೆಲಸವಿಲ್ಲದ ಆಡಳಿತ ಪಕ್ಷದವರಿಗೆ ಉದ್ಯೋಗ ಒದಗಿಸಿಕೊಡಬೇಕೆಂಬ ಒಂದೇ ಒಂದು ದೃಷ್ಟಿಯಿಂದ ಟೆಕ್ನಿಕಲ್ ಮತ್ತು ಅಡ್ಮಿನಿಸ್ಟ್ರೇಟಿವ್ ಎಕ್ಸ್‌ಪೀರಿಯನ್ಸ್ ಯಾವುದೂ ಇಲ್ಲದಿರುವವರನ್ನು ಈ ಕೆಲಸಕ್ಕೆ ಹಾಕುವುದಾದರೆ ಕಷ್ಟ. ಈ ಇಲಾಖೆ ದೊಡ್ಡದಾಗಿ ಬೆಳೆಯಬೇಕಾಗಿದೆ. ಇಡೀ ಭಾರತದಲ್ಲೇ ಕಾಣದಿರುವ ಹಾಗೆ ಕೆಲಸ ಮಾಡಿ ಉತ್ಪತ್ತಿ ಹೆಚ್ಚಿಸಲು ಇಲ್ಲಿ ಅವಕಾಶವಿದೆ. ಇದರ ಕೆಲಸವೂ ಸಹ ಜಾಸ್ತಿಯಾಗುತ್ತಿದೆ. ಶರಾವತಿಯು ಒಂದೇ ಟ್ರಾನ್ಸ್‌ಮೀಟರ್ ಈಗ ಕೆಲಸ ಮಾಡುತ್ತಿದೆ, ಮುಂದೆ 10 ಲಕ್ಷ ಕಿಲೋವಾಟ್ ಹಂಚುವ ಶಕ್ತಿ ಈ ಸಂಬಂಧವಾದ ಬೋರ್ಡಿಗೆ ಬೇಕು. ಕೆಲವು ದಿವಸಗಳಲ್ಲೇ ಬೋರ್ಡ್ ಪುನರ್‌ರಚನೆ ಮಾಡಬೇಕಾಗಿರುವುದರಿಂದ ರಚಿಸುವಾಗ ದಯೆಯಿಟ್ಟು ರಾಜಕೀಯ ಪ್ರಭಾವಕ್ಕೊಳಗಾಗಿ ರಾಜಕೀಯ ವ್ಯಕ್ತಿಯನ್ನು ಇದಕ್ಕೆ ಹಾಕಬಾರದು. ಟೆಕ್ನಿಕಲ್ ಮತ್ತು ಅಡ್ಮಿನಿಸ್ಟ್ರೇಟಿವ್ ಎಕ್ಸ್‌ಪೀರಿಯನ್ಸ್ ಇರುವವರನ್ನೇ ಹಾಕಿದರೆ ಅನುಕೂಲವಾಗುತ್ತದೆ. ಈ ಸಂಬಂಧವಾದ ಆದಾಯ ಹೆಚ್ಚಿಸಿ ಕೈಗಾರಿಕೆಗಳನ್ನು ಚೆನ್ನಾಗಿ ಬೆಳೆಸುವುದಕ್ಕೆ ಶಕ್ತಿ ಮತ್ತು ಅವಕಾಶ ಮೈಸೂರು ದೇಶಕ್ಕಿದೆ. ಎಲ್ಲಾ ಇಲಾಖೆಗಳಿಗಿಂತ ಹೆಚ್ಚಾಗಿ ಬೆಳೆಯುವ ಶಕ್ತಿ ಈ ಇಲಾಖೆಗೆ ಇದೆ. ಇದರ ಬಗ್ಗೆ ಆಳವಾಗಿ ಯೋಚನೆ ಮಾಡಬೇಕು. ಆ ದೃಷ್ಟಿಯಿಂದ ಎಲೆಕ್ಟ್ರಿಸಿಟಿ ಬೋರ್ಡನ್ನು ರಚಿಸಿದರೆ ದೇಶಕ್ಕೆ ಬಹಳ ಹೆಚ್ಚಿನ ಉಪಯೋಗವಾಗುತ್ತದೆ.

ಇವತ್ತು 72 ಕೋಟಿ ರೂಪಾಯಿಗಳ ಬೇಡಿಕೆ ಸಭೆಯ ಮುಂದಿದೆ. ಅವು ಮುಖ್ಯ ಮಂತ್ರಿಗಳು ಮತ್ತು ಲೋಕೋಪಯೋಗಿ ಇಲಾಖೆ ಮಂತ್ರಿಗಳಿಗೆ ಸಂಬಂಧಪಟ್ಟಿದೆ. ಮುಖ್ಯ ಮಂತ್ರಿಗಳು ಇಲ್ಲಿಲ್ಲ ಈಗ ಭ್ರಷ್ಟಾಚಾರದ ಅಪಾದನೆಗಳು ಈ ಇಲಾಖೆ ಮೇಲೆ ಇವೆ. ಕೇವಲ ಉದಾರತೆಯಿಂದ ನೋಡಿ ಮೂಲೆಗೊತ್ತದೆ ಮಂತ್ರಿಮಂಡಲದ ಒಂದು ಬಿಗಿ ಹಿಡಿತ ಇಟ್ಟುಕೊಳ್ಳಬೇಕು. ಭ್ರಷ್ಟಾಚಾರ ತಗ್ಗಿಸುವ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಹಣಕಾಸಿನ ಸ್ಥಿತಿ ಅಪಾಯ ಸ್ಥಿತಿಗೆ ಬರುತ್ತದೆ. ದೇಶದಲ್ಲಿ ಆರ್ಥಿಕಪರಿಸ್ಥಿತಿ ಚೆನ್ನಾಗಿ ಬೆಳೆಯುವ ಹಾಗೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಮುಂದಿರುವ ಎಲ್ಲ ಬೇಡಿಕೆಗಳನ್ನೂ ಅನುಮೋದಿಸುತ್ತಾ ಕೆಲವು ಬೇಡಿಕೆಗಳ ಬಗ್ಗೆ ಒಂದೆರಡು ಸಲಹೆಗಳನ್ನು ಮಾಡುತ್ತೇನೆ. ಪಬ್ಲಿಕ್‌ವರ್ಕ್ಸ್ ಮತ್ತು ಇರಿಗೇಷನ್ ಬಾಬುಗಳಿಗೆ ಒದಗಿಸಿರುವ ಹಣ ಏನೇನೂ ಸಾಲದು ಈ ಇಲಾಖೆಗಳಿಂದ ಬಹಳ ಉಪಯೋಗವಾಗುವುದೆಂಬ ನಿರೀಕ್ಷೆ ಜನರಿಗೆ ಬಹಳವಾಗಿದೆ. ಈಗ ಈ ಇಲಾಖೆಯಲ್ಲಿ ಹಳೇ ಕೆಲಸಗಳೇ ಮುಗಿದಿಲ್ಲ. ಹಳೇ ಕೆಲಸಗಳಿಗೆ ಒದಗಿಸಿರುವ ಹಣ ಪೂರೈಸುತ್ತಿ. ಇನ್ನೂ ಹೊಸದಾಗಿ ಕೆಲಸಗಳು ತೆಗೆದುಕೊಳ್ಳುವಂತೆಯೇ ಇಲ್ಲ. ಅವಕ್ಕೆ ಹೆಚ್ಚು ಹಣ ಬೇಕು. ಅವನ್ನು ಸಾಕಷ್ಟು ಹಣ ಒದಗಿಸದಿದ್ದರೆ ಹೇಗೆ ಹೇಗಾದರೂ ಹಣ ಒದಗಿಸಲೇಬೇಕು.

ಪಬ್ಲಿಕ್‌ವರ್ಕ್ಸ್ ಮತ್ತು ಇರಿಗೇಷನ್ ಬಗ್ಗೆ ಶಿವಮೊಗ್ಗ ತಾಲ್ಲೂಕಿಗೆ ಏನೇನು ಒದಗಿಸಿದ್ದಾರೆಂದು ಬಡ್ಜೆಟ್ಟನ್ನ ಬಹಳ ಆಸಕ್ತಿಯಿಂದ ನೋಡಿದೆ ಹೆಚ್ಚಾಗಿ ಕೊಟ್ಟಿರುವುದೇನೂ ಕಾಣಲಿಲ್ಲ. ಇದನ್ನು ಮರೆತರೇ ಹೇಗೆ ಎಂದು ನನಗೆ ಅನುಮಾನವಾಗುತ್ತಿದೆ. ಅದೂ ಅಲ್ಲದೆ ಹೆಣ್ಣುಮಗಳು ಆ ತಾಲ್ಲೂಕಿನಿಂದ ಸದಸ್ಯಳಾಗಿದ್ದಾಳೆ, ಕೇಳುವುದಿಲ್ಲ ಎಂದುಬಿಟ್ಟರೋ ಏನೋ ಎಂಬ ಅನುಮಾನ ಬಂತು. ಇಲ್ಲಿ ಬಡ್ಜೆಟ್ ತಯಾರು ಮಾಡುವುದಕ್ಕೆ ಮೊದಲೇ ಏನು ನಮ್ಮ ಭಾಗದಲ್ಲಿ ಮಾಡಬೇಕೆಂದು ನಮ್ಮ ಸ್ಥಳೀ

(ಶ್ರೀಮತಿ ರತ್ನಮ್ಮ ಮಾಧವರಾವ್)

ವಿಪರ್‌ನಲ್ಲಿ ಸೇರಿಸಬೇಕಾದ ಕೆಲಸವನ್ನೆಲ್ಲ ಸೇರಿಸಿ ಸರ್ಕಾರಕ್ಕೆ ಬಂತು. ಅದು ಎಲ್ಲಿ ಹೋಯಿತೋ ಏನೋ ಗೊತ್ತಾಗಲಿಲ್ಲ. ಇಲ್ಲಿ ಬರುವುದರಲ್ಲಿ ಯಾವುದೂ ಇಲ್ಲವೇ ಇಲ್ಲ. ಶಿವಮೊಗ್ಗಾದ ಒಂದು ಸೇತುವೆ ಬಗ್ಗೆ ಅನೇಕ ವರ್ಷಗಳಿಂದ ಬೇಡಿಕೆಯಿದೆ, ಅದೇನೂ ಹೊಸದಲ್ಲ. ಅದನ್ನು ಈ ಬಡ್ಜೆಟ್ಟಿನಲ್ಲಿ ಸೇರಿಸಬೇಕೆಂದು ಹೇಳಿದರೂ ಕೂಡ ಅದು ಬಿಟ್ಟುಹೋಗಿದೆ. ಈ ಸೇತುವೆ ವಿಚಾರದಲ್ಲಿ ಶಿವಮೊಗ್ಗ ಮುನಿಸಿಪಾಲಿಟಿಯವರು ಹಿಂದೆಯೇ ನಿರ್ಣಯ ಮಾಡಿ ಇದಕ್ಕೆ ಖರ್ಚಾಗುವುದರಲ್ಲಿ ಕಾಲು ಭಾಗ ಕೊಡುವುದಾಗಿ ಒಪ್ಪಿದ್ದಾರೆ. ಈ ಬಗ್ಗೆ ಈಗಾಗಲೇ ಅಂದಾಜು ಮತ್ತು ಪ್ಲಾನು ಆಗಿದೆ. ಎಷ್ಟು ಕಟ್ಟಬೇಕೆಂದು ತಿಳಿಸಿದಲ್ಲಿ ಮುನಸಿಪಾಲಿಟಿ ಕಟ್ಟಲು ಸಿದ್ಧರಾಗಿದ್ದಾರೆ. ಈ ವಿಚಾರದಲ್ಲಿ ಅನೇಕ ಪತ್ರಗಳು ಬರೆದು ಕಳುಹಿಸಿದ್ದೆ. ಇಷ್ಟಾದರೂ ಏನೂ ಕಾರ್ಯಕ್ರಮ ಕೈಕೊಂಡಂತೆ ಕಾಣಲಿಲ್ಲ. ಈಗಲಾದರೂ ಇದಕ್ಕೆ ಗಮನಕೊಟ್ಟು ಈ ಸೇತುವೆಯನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶಿವಮೊಗ್ಗಾದಲ್ಲಿ ಇನ್ನೊಂದು ಚರಿತ್ರಾರ್ಹವಾದ ಸೇತುವೆ ಮುಡುಬ ಸೇತುವೆ. ಅದರ ಬಗ್ಗೆ ಭಿನ್ನಾಭಿಪ್ರಾಯವೇನೇ ಇದ್ದರೂ ರಾಜಕೀಯ ಬೇಡ. ಅದು ಹಿಂದೆಯೇ ಆಗಬೇಕಾಗಿತ್ತು. ಕೆಲವು ಕಾರಣಗಳಿಂದ ಅದು ನಿಂತಿದೆ. ಜಾಗ್ರತೆ ಅದರ ಕೆಲಸವನ್ನು ಕೈಕೊಳ್ಳಬೇಕು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ನಿಸ್ವಾರ್ಥತೆಯಿಂದ ದುಡಿದ ಶ್ರೀಯುತ ಡಿ. ಆರ್. ಮಾನಪ್ಪನವರು ಮತ್ತು ಶ್ರೀಯುತ ಕೆ. ಟಿ. ಶಾಮೇಗೌಡರ ಪುತ್ರರು ಮರಣ ಹೊಂದಿದರು. ದೋಣಿಯಲ್ಲಿ ನದಿ ದಾಟುವಾಗ ಅದನ್ನು ಹೇಳಲು ವಿಷಾದವಾಗುತ್ತದೆ. ಜಾಗ್ರತೆ ಅದನ್ನು ಮಾಡಿಸಿಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಇನ್ನು ಅಯನೂರು-ಮಾಲೂರು-ಹಲಗೆರೆ ರಸ್ತೆ ವಿಚಾರ. ಅದು ಕೇವಲ 22½ ಮೈಲಿಗಳ ರಸ್ತೆ. ಎಲ್ಲಾ ಮಂತ್ರಿಗಳೂ ಅದನ್ನು ನೋಡಿದ್ದಾರೆ. ಆ ರಸ್ತೆಯಲ್ಲಿ 10 ಮೈಲಿ ಹೋಗಲು ಒಂದು ಗಂಟೆ ಬೇಕು. ಇದರ ಅನುಭವ ಮಾನ್ಯ ಕೈಗಾರಿಕಾ ಮಂತ್ರಿಗಳಿಗಿದೆ ಅಲ್ಲಿಗೆ ಸಮೀಪದಲ್ಲಿ ಶಂಕರಗುಡ್ಡ ಹಾರನಹಳ್ಳಿ ಮೈನ್ಸ್ ಇವೆ. ಆ ರಸ್ತೆಯಲ್ಲಿ ಬಿ. ಎಂ. ಡಿ. ಲಾರಿಗಳು ಮತ್ತು ಅರಣ್ಯ ಇಲಾಖೆಯ ಲಾರಿಗಳು ತುಂಬಾ ಓಡಾಡುತ್ತವೆ. Iron and Steel works Bhadravathi ಲಾರಿಗಳೂ ಓಡಾಡುತ್ತವೆ. ಅದು ತುಂಬಿದ ಲಾರಿಗಳು ಅಂದರೆ (Loaded Lory)

ಮಳೆ ಬಂದರೆ ಆ ರಸ್ತೆಯಲ್ಲಿ ಯಾರೂ ಹೋಗುವುದಕ್ಕಾಗುವುದಿಲ್ಲ. ಯಾರಿಗಾದರೂ ಸ್ವಲ್ಪ ಹೃದಯದ ತೊಂದರೆ ಇದ್ದರೆ ಅಲ್ಲಿ ಹೋಗಬೇಕಾದ ಆವಶ್ಯಕತೆಯೇ ಇರುವುದಿಲ್ಲ. ಹಾಗಿದೆ ಆ ರಸ್ತೆ. ಆ ರಸ್ತೆಯಲ್ಲಿ ಸಂಚಾರ ಹೆಚ್ಚಾಗಿದೆ, ಅಲ್ಲಿ ಹೆಚ್ಚು ಜನ ಓಡಾಡುತ್ತಾರೆ. ಈ ರಸ್ತೆಯ ವಿಚಾರವಾಗಿ ಅರಣ್ಯ ಖಾತೆಯ ಸಚಿವರಲ್ಲಿ ಮಾತಾಡಿದ್ದೇನೆ. ಲೋಕೋಪಯೋಗಿ ಸಚಿವರಲ್ಲಿ ವಿನಂತಿ ಮಾಡಿದ್ದೇನೆ ಮತ್ತು ಕೈಗಾರಿಕಾ ಮಂತ್ರಿಗಳಿಗೂ ಹೇಳಿದ್ದೇನೆ. B.M.D. ಯವರು, ಅರಣ್ಯ ಇಲಾಖೆಯವರು Iron and Steel Works ನವರು ರಸ್ತೆಗಾಗಿ ಹಣ ಕೊಡಲು ಸಿದ್ಧರಾಗಿದ್ದಾರೆ. ಈ ಎಲ್ಲ ಹಣ ಸೇರಿಸಿ ಈ ರಸ್ತೆಯನ್ನು ಜಾಗ್ರತೆ ಮಾಡಲೇ ಬೇಕು ಎಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶಿವಮೊಗ್ಗಾ ತಾಲ್ಲೂಕು ಕುಂಸಿ ಹೋಬಳಿ ಬೋರಡಿ ಗ್ರಾಮದ ಬಳಿ ಎರಡೂವರೆ ಮೈಲಿ ಕೊರಗಿ ಹೊರಬೈಲು ರಸ್ತೆ ಓಡಾಡುವಂತಿಲ್ಲ. ಮಳೆಗಾಲದಲ್ಲಿ ದ್ವೀಪ ಇದ್ದಹಾಗೆ ಆಗಿ ಅಲ್ಲಿಂದ ಯಾರೂ ಬೇರೆ ಕಡೆಗೆ ಬರುವುದಕ್ಕಾಗುವುದಿಲ್ಲ. ಎರಡೂವರೆ ಮೈಲಿ ರಸ್ತೆಯನ್ನು ಮಾಡಿ ಆ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಅನೇಕ ಬಾರಿ ಈ ಬಗ್ಗೆ ಅರ್ಜಿಗಳನ್ನು ಕೊಟ್ಟು ಏನು ಮಾಡಿದರೂ ಹಣವಿಲ್ಲವೆಂದು ನಿಂತುಹೋಗಿವೆ. ಈ ಬಾರಿ ಇದನ್ನು ಮಾಡಲೇಬೇಕು. ಕುಂಸಿ ವಾಟರ್ ವರ್ಕ್ಸ್ 1952ರಲ್ಲಿ ಮಂಜೂರಾಗಿದೆ. ಆಗ 44 ಸಾವಿರ ರೂಪಾಯಿ ಅಂದಾಜಾಗಿತ್ತು. ಟ್ಯಾಂಕ್ ಕಟ್ಟಿದ್ದಾರೆ. ಈಗ 1965ನೇ ಇಸವಿಯಲ್ಲಿದ್ದೇವೆ. ಕೆರೆಯಲ್ಲಿ ಬಾವಿ ತೆಗೆದಿದ್ದಾರೆ. 20 ಅಡಿ ನೀರು ಬಂದಿಲ್ಲ. 9 ನಲ್ಲಿಪೈಪ್ ಹಾಕಿದ್ದಾರೆ. ಇದರ ಕಥೆ ಏನು ಎಂದು ತಿಳಿಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಲಾದರೂ ಅದನ್ನು ಪೂರ್ತಿ ಮಾಡುವ ಪ್ರಯತ್ನ ಮಾಡುತ್ತೀರಾ? ದಯಮಾಡಿ ಜಾಗ್ರತೆ ಮಾಡಿಸಬೇಕಾಗಿ ವಿನಂತಿ.

ಇನ್ನು ಶಿವಮೊಗ್ಗ ಒಳಚರಂಡಿ ವಿಷಯ. ಇದರಲ್ಲಿ ಸ್ಥಳೀಯ ಸಂಸ್ಥೆಯ ಕೆಲಸ ಮುಗಿದಿದೆ. ಸಿವಿಲ್ ವರ್ಕ್ಸ್ ಎಲ್ಲ ಮುಗಿದಿದೆ. ಮೆಕ್ಯಾನಿಕಲ್ ವರ್ಕ್ಸ್ ಆಗಬೇಕಾಗಿದೆ. ಅದಕ್ಕೆ ಬೇಕಾದ ಯಂತ್ರಗಳು ಬಂದು ಐದಾರು ವರ್ಷವಾಯಿತು. ಯಂತ್ರಗಳೆಲ್ಲ ಹಾಗೆಯೇ ಬಿದ್ದಿವೆ. ಐಡ್ಲ್ ಆಗಿದೆ 14 ವರ್ಷ ಆಯಿತು ಶುರುವಾಗಿ ಮಂಗಳೂರಿನಲ್ಲಿ ಕೇವಲ 2 ವರ್ಷದಲ್ಲಿ ಹೇಗೆ ಮುಗಿಯಿತು ? ಇಲ್ಲಿ ಏಕೆ ಇಷ್ಟುತಡ? ಈಗಲಾದರೂ ಇದನ್ನು ಬೇಗ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಸರ್ಕಾರ ಮುನಿಸಿಪಾಲಟಿಗಳಿಗೆ ಸಾಲವನ್ನು ಕೊಟ್ಟಿದ್ದು ಇನ್ನು ಕೆಲಸವೇ ಆಗಿಲ್ಲ. ಈಗಾಗಲೇ ಹಣವನ್ನು ವಾಪಸು ಕೊಡಬೇಕೆಂದು ಕೇಳುತ್ತಿದ್ದಾರೆ. ಅದರ ಮೇಲೆ ಬಡ್ಡಿ ಬೆಳೆಯುತ್ತಿದೆ. ಲೋಕೋಪಯೋಗಿ ಮಂತ್ರಿಗಳೂ, ಸ್ಥಳೀಯ ಸಂಸ್ಥೆಗಳ ಮಂತ್ರಿಗಳಿಗೆ ತಿಳಿಸಿ ಬಡ್ಡಿ ಮಾಫಿಮಾಡಿಸಿ ಶಿವಮೊಗ್ಗ ಮುನಿಸಿಪಾಲಟಿಯಲ್ಲಿ ಒಳಚರಂಡಿ ಕೆಲಸ ಆದ ಮೇಲೆ ಕಂತುಗಳ ಪ್ರಕಾರ ವಸೂಲು ಮಾಡುವಂತೆ ತಿಳಿಸಬೇಕೆಂದು P.W.D. ಮಂತ್ರಿಗಳಲ್ಲಿ ವಿನಂತಿ. ಆ ಮೇಲೆ ಸೆಸ್ ಹಾಕಿ ಹಣ ಕಟ್ಟಬಹುದು.

ತುಂಗ ಮತ್ತು ಭದ್ರ ನಾಲೆಗಳಿವೆ. ಆ ನಾಲೆಗಳಲ್ಲಿ ಬಿಸಿಲು ಕಾಲದಲ್ಲಿ ಮೂರು ನಾಲ್ಕು ತಿಂಗಳು ನೀರು ಬರುವುದಿಲ್ಲ. ಕಬ್ಬು ಮತ್ತು ಬತ್ತ ಬೆಳೆ ಬರುವಾಗ ನೀರಿಗೆ ತೊಂದರೆಯಾಗುತ್ತದೆ. ಇಂಜಿನಿಯರುಗಳನ್ನು ಕೇಳಿದರೆ ಮೇನ್ ಚಾನಲ್ಸ್ ಸರಿಯಾಗಿಲ್ಲ ಆದ್ದರಿಂದ ನೀರಿಲ್ಲ ಎಂದು ಹೇಳುತ್ತಾರೆ. ಪ್ರತಿ ಸಲವೂ ಹೀಗೆಯೇ ಆಗಿದೆ. ಈ ಬೇಸಿಗೆಯಲ್ಲಾದರೂ ತೊಂದರೆ ಆಗದ ಹಾಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶಿವಮೊಗ್ಗಾ ತಾಲ್ಲೂಕು ಗಾಜನೂರು ಬಳಿ ಕಡಲೆವೊಡ್ಡು ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡುವುದರಿಂದ ಸಾವಿರಾರು ಎಕರೆ ನೀರಾವರಿಯಾಗುತ್ತದೆ. ಅದಕ್ಕೆ ಬಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದಾರೆ. ಅದಕ್ಕಾಗಿ ಸಚಿವರನ್ನು ಅಭಿನಂದಿಸುತ್ತೇನೆ. ಎಸ್ಟಿಮೇಟ್ ಎಲ್ಲ ಆಗಿದೆ. ಜಾಗ್ರತೆಯಾಗಿ ಕೆಲಸ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಸರ್ಕಾರಕ್ಕೆ ಬರಬೇಕಾದ ಹಣ ಅನೇಕ ಬಾಬುಗಳಲ್ಲಿ ಇದೆ ಎಂದು ವಿಧಾನಸಭೆಯಲ್ಲಿ ತಿಳಿದು ಬಂತು. ಅದನ್ನು ಜಾಗ್ರತೆ ವಸೂಲು ಮಾಡಿಕೊಂಡು ಆ ಣ ಇದಕ್ಕೆ ಕೊಟ್ಟರೆ ಈ ಕೆಲಸಗಳು ಜಾಗ್ರತೆ ಆಗುತ್ತವೆ.

ನಮ್ಮ ಲೋಕೋಪಯೋಗಿ ಮಂತ್ರಿಗಳೂ, ನೀರಾವರಿ ಮಂತ್ರಿಗಳೂ ಬಹಳ ಉತ್ಸಾಹ ಶಾಲಿಗಳು, ಯುವಕರೂ ಆಗಿದ್ದಾರೆ, ಬಹಳ ಚುರುಕಾಗಿದ್ದಾರೆ. Smart ಅಂತರಾಲ್ಲ ಹಾಗೆ ಅದೇ ರೀತಿಯಲ್ಲಿ ಈ ಇಲಾಖೆಯೂ ಚುರುಕಾಗಿ ಅಲ್ಲಿ ಕೆಲಸ ಮಾಡುವವರೂ ಚುರುಕಾದರೆ ಕೆಲಸ ಕಾರ್ಯಗಳೂ ಚುರುಕಾಗಿ ಆಗುತ್ತವೆ ಎಂದು ವಿನಂತಿ ಮಾಡಿಕೊಂಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾರೆನ್ನ.—ಮಹಾಸ್ವಾಮಿ, ಸರ್ಕಾರದವರು ಸಭೆಯ ಮುಂದೆ ಮಂಡಿ ಸಿರುವಂಥ ಬೇಡಿಕೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಸ್ವಾಮಿ, ಈ ಸರ್ಕಾರ ಸುಖೀ ರಾಜ್ಯವನ್ನು ಸ್ಥಾಪಿಸಬೇಕು, ನಾವು ಜನರ ಹಿತಕ್ಕಾಗಿ ಇರುವುದು ಎಂದು ಘೋಷಿಸಿ ಜನರ ಹಿತವನ್ನು ಎಷ್ಟರಮಟ್ಟಿಗೆ ಕಾಪಾಡಿದ್ದಾರೆ. ಅವರ ಹಿತ ಎಷ್ಟರಮಟ್ಟಿಗೆ ಮುಂದುವರಿಯುತ್ತಿದೆ ಎಂಬುದು ಈ ಸರ್ಕಾರದ ಆಡಳಿತ ವ್ಯವಹಾರಗಳನ್ನು ವಿಮರ್ಶೆ ಮಾಡಿದರೆ ನಮಗೆ ಚೆನ್ನಾಗಿ ಗೊತ್ತಾಗುತ್ತದೆ. ಸರ್ಕಾರದ ಆಡಳಿತ ಬ್ರಿಟಿಷರ ಕಾಲದಲ್ಲಿ ಯಾವರೀತಿ ಇತ್ತೋ ಅದಕ್ಕಿಂತಲೂ ಹಿಂದೆ ಹೋಗಿದೆಯೇ ಹೊರತು ಪ್ರಜಾಪ್ರಭುತ್ವ ಮಾದರಿಯಲ್ಲಿ ಅದರ ಧೋರಣೆಯನ್ನು ಮತ್ತು ನೀತಿಯನ್ನು ಬದಲಾವಣೆ ಮಾಡಿದ್ದು ಕಂಡುಬರುವುದಿಲ್ಲ. ಈ ಸರ್ಕಾರವು ಆಡಳಿತ ವರ್ಗವನ್ನು, ಆ ಯಂತ್ರವನ್ನು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಬೆಳೆಯುಲಕ್ಕೆ ಅವಕಾಶವನ್ನು ಸ್ವಲ್ಪವೂ ಮಾಡಿಕೊಟ್ಟಿಲ್ಲ ಎನ್ನುವುದು ಸ್ಪಷ್ಟವಾಗಿ ನಮಗೆ ತಿಳಿಯುವು ದಾಗಿದೆ. ಅವರು ಇಂದಿನ ದಿವಸ ರಾಜ್ಯದ ಪ್ರಜೆಗಳ ನೌಕರರಾಗಿ, ರಾಜ್ಯದ ಸೇವಕರಾಗಿ ಜನತೆಯ ಸೇವಕರಾಗಿ ಅವರ ಅಧಿಕಾರವನ್ನು ಚಲಾವಣೆ ಮಾಡಬೇಕು ಎನ್ನುವ ನೀತಿಯನ್ನು ಅಧಿಕಾರ ವರ್ಗ ಲ್ಲಿದ ಬೆಳೆಸಲಿಕ್ಕೆ ಈಸರ್ಕಾರ ಪ್ರಯತ್ನ ಮಾಡಲಿಲ್ಲ. ಕೇವಲ ಮಂತ್ರಿಗಳ ಅಥವಾ ಅವರಿಗೆ ಸಂಬಂಧ ಪಟ್ಟವರ ಗುಲಾಮ ರಾಗಿದ್ದುಕೊಂಡು ಅವರು ಬೆಳೆಯಬೇಕು ಎನ್ನುವ ಮನೋವೃತ್ತಿಯನ್ನು ಅಧಿಕಾರ ವರ್ಗದಲ್ಲಿ ಬೆಳೆಸಿಕೊಂಡು ಬಂದಂತಾಗಿದೆ. ಇದಕ್ಕೆ ಕಾರಣವೇನೆಂದರೆ, ಈಗಲೇ ಅವರು ತಮ್ಮ ಇರುವಿಕೆಗಾಗಿ ಐದು ರೂಪಾಯಿ, ಹತ್ತು ರೂಪಾಯಿ ಭಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಈ ಹೊತ್ತು ಒಂದು ಕುಟುಂಬದ ಖರ್ಚನ್ನು, ನೌಕರನ ಖರ್ಚನ್ನು ಪರಿಶೀಲಿಸಿ ನೋಡಿದರೆ ಯಾವ ಸಣ್ಣ ಕುಟುಂಬವಾದರೂ 200 ರೂಪಾಯಿ ಇಲ್ಲದೆ ಸಂರಕ್ಷಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ಸರ್ಕಾರಅಂಕಿ ಸಂಖ್ಯೆಗಳಿಂದ ತಿಳಿದು ಕೊಂಡಿರಬಹುದು. ನಮಗಾದರೂ ಇವತ್ತು ಸಿಕ್ಕತಕ್ಕ 16 ರೂಪಾಯಿ ಒಂದು ದಿನಕ್ಕೆ ಸಾಕಾಗುವುದಿಲ್ಲ. ಈ ರೀತಿ ಇರುವಾಗ ಕೆಳದರ್ಜೆ ನೌಕರವರ್ಗದವರಿಗೆ ಕೊಡತಕ್ಕ ಅಲ್ಪವೇತನದಿಂದ ಅವರ ಕುಟುಂಬವನ್ನು ಹೇಗೆ ರಕ್ಷಣೆ ಮಾಡಬೇಕು ಎಂಬುದನ್ನು ವಿಚಾ ರಿಸಲಾಗಿ ಅವರು ಭಿಕ್ಷುಕರಾಗಿ ನಮ್ಮ ಮುಂದೆ ಕೈ ಮುಗಿದುಕೊಂಡು ನಿಲ್ಲಬೇಕಾದ ಪರಿಸ್ಥಿತಿ ಬಂತು. ಸರ್ಕಾರ ಅವರಿಗೆ ಐದು ರೂಪಾಯಿ ಅಥವಾ ಏಳು ರೂಪಾಯಿಗಳನ್ನು ಕೊಟ್ಟಿರಬಹುದು.

(ಶ್ರೀ ಗೋಪಾಲ ಸಾಲಿನ್ಸ)

ಆದನ್ನಾದರೂ ಅವರು ಮನಿಆರ್ಡರ್ ಮಾಡಿ ವಾಪಸ್ ಮಾಡಿದ್ದಾರೆ. ಮುಂದೆ ಅವರು ಉಪವಾಸ ಮಾಡಬೇಕು ಎನ್ನುವಂಥ ಚಳುವಳಿಗಳಿಂದ ತಮ್ಮ ಅಸಮಾಧಾನವನ್ನು ಸೂಚಿಸುವಂಥ ಪರಿಸ್ಥಿತಿಗೆ ಬರುತ್ತಿದ್ದಾರೆ. ಹೀಗಿರುವಾಗ ಆಡಳಿತ ಹೇಗೆ ಬೆಳೆಯಬೇಕು, ಹೇಗೆ ಆಡಳಿತ ಆಗಬೇಕು ಎನ್ನುವುದನ್ನು ನೀವೇ ತಿಳಿದುಕೊಳ್ಳಬಹುದು.

ಈಗ ಕೃಷಿ ಇಲಾಖೆಯನ್ನು ತೆಗೆದುಕೊಂಡರೆ ಆ ಖಾತೆಯವರು ರೈತನ ಬಳಿಗೆ ಹೋಗಿ ಅವನಿಗೆ ಬೇಕಾದ ಪದಾರ್ಥಗಳನ್ನು ಒದಗಿಸಿ, ಅವನಿಗೆ ಬೇಕಾಗುವ ಸಾಮಗ್ರಿಗಳನ್ನು ಹೆಚ್ಚಿಸಬೇಕು. ಹಾಗೆ ಮಾಡದೆ ವಿಧಾನಸೌಧದ ಬಳಿಗೆ ಬರಬೇಕು, ಡೆಪ್ಯುಟಿ ಕಮಿಷನರ ಕಚೇರಿ ಬಳಿ ಬರಬೇಕು ಎನ್ನುವುದಾದರೆ ಅವರು ವೇಳೆಯನ್ನು ಈ ರೀತಿ ಕಳೆದರೆ ಆಹಾರ ಸಾಮಗ್ರಿಗಳು ಹೇಗೆ ಜಾಸ್ತಿಯಾಗಬೇಕು ? ಹಾಗೆಯೇ ಲೋಕೋಪಯೋಗಿ ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸವನ್ನು ಮಾಡುವ ಕಾಲದ ಬದಲಿಗೆ ಆಂದೋಳನಗಳಲ್ಲಿ, ಚಳುವಳಿಗಳಲ್ಲಿ, ಪ್ರದರ್ಶನಗಳಲ್ಲಿ ಭಾಗವಹಿಸಿದರೆ ಕಾಲಹರಣವಾಗುತ್ತದೆ. ಯಾವ ಕೆಲಸವೂ ಆಗುವುದಿಲ್ಲ. ಅವರು ಚಳುವಳಿಗಳನ್ನು ಮಾಡದೆ ಇದ್ದರೆ ಬದುಕಲಿಕ್ಕೇ ಸಾಧ್ಯವಿಲ್ಲ. ಇದಕ್ಕೆ ಸರ್ಕಾರ ಏನು ಜವಾಬು ಕೊಡುತ್ತದೆ? ಯಾವಾಗ ಸರ್ಕಾರದ ಯಂತ್ರವನ್ನು, ಸರ್ಕಾರದ ಆಡಳಿತವನ್ನು ನಡೆಸತಕ್ಕ ನೌಕರ ವರ್ಗದಲ್ಲಿ ಸಮಾಧಾನವಿಲ್ಲ, ಆಗ ಆಡಳಿತ ಸರಿಯಾಗಿ ನಡೆಯುವುದಿಲ್ಲ, ದಕ್ಷತೆಯಿಂದ ಮುಂದುವರೆಯುವುದಿಲ್ಲ ಎಂದಾದ ಮೇಲೆ ರಾಜ್ಯದ ಜನತೆಗೆ ಎಲ್ಲಿಂದ ಸುಖ ಬರಬೇಕು ಎಂಬುದನ್ನು ಮಾನ್ಯ ಮಂತ್ರಿಗಳೇ ಹೇಳಬೇಕು.

4-15 P.M.

ಕಳೆದ ವರ್ಷ ಕೊಟ್ಟಂಥ ಬಡ್ಜೆಟ್ ಪ್ರಕಾರ ನಮ್ಮ ಊರಿನ ಜನರಿಗೆ ವಾರಕ್ಕೆ ಅರ್ಧ ಕಿಲೊ ಅಕ್ಕಿ ಕೊಡಿಸುವ ಯೋಗ್ಯತೆ ಬಂತು. ಮುಂದಿನ ವರ್ಷದಲ್ಲಿ ಈ ಅರ್ಧ ಕಿಲೊ ಅಕ್ಕಿ ಕೂಡ ಸಿಕ್ಕುವ ಪರಿಸ್ಥಿತಿ ಇದೆಯೋ ಇಲ್ಲವೋ ಎಂದು ನಮ್ಮ ಜನತೆಗೆ ಭಯ ಹುಟ್ಟಿದೆ. ಇದಕ್ಕೆ ಕಾರಣ ಈಗಿನ ಆಡಳಿತವೇ ಸರಿಯಾಗಿಲ್ಲ. ಎಷ್ಟೋ ಯೋಜನೆಗಳನ್ನು ಈ ದೇಶದ ಮುಂದೆ ಸರ್ಕಾರದವರು ಇಟ್ಟಿದ್ದಾರೆ. ಈಗಾಗಲೇ ಒಂದು, ಎರಡನೆ, ಮೂರನೆಯ ಯೋಜನೆಗಳನ್ನು ಮುಗಿಸಿ 4ನೇ ಯೋಜನೆಗೆ ಕೈ ಹಾಕಿದ್ದಾರೆ. 5ನೇ ಯೋಜನೆಯನ್ನು ಮುಂದೆ ಯೋಚನೆ ಮಾಡಬೇಕಾಗಿದೆ. ಇವರು ಸುಮ್ಮನೆ ಯೋಜನೆಗಳ ಲೆಕ್ಕ ಮಾಡಿದರೆ ಸಾಕೇ ? ಯಾವಾಗಲೂ ಇವರು ಆ ಯೋಜನೆಗಳ ಪರಿಣಾಮವೇನಾಗಿದೆಯೆಂಬುದನ್ನು ತಿಳಿಯಬೇಕು. ನನಗೆ ಈ ಆಹಾರ ಸಾಮಗ್ರಿಗಳ ಉತ್ಪತ್ತಿಯೇನೋ ಈ ಸಾರಿ ಬಹಳ ಕಡಿಮೆಯಾಗಿದೆ ಎಂದು ಅನ್ನಿಸುತ್ತದೆ. ಆ ಸಂಖ್ಯೆಗಳನ್ನು ನೋಡಿದರೆ ಇವರು ಏನು ಅಂದಾಜನ್ನು ಮಾಡಿದ್ದರೋ ಅದರ ಅರ್ಧಕ್ಕಿಂತ ಜಾಸ್ತಿ ಉತ್ಪತ್ತಿಯಾಗಿರುವುದು ಬಹಳ ಕಡಿಮೆ. ಇವರೇನೋ ಅಂಕಿ ಅಂಶಗಳನ್ನು ಕೊಟ್ಟಿರಬಹುದು. ಆದರೆ ಕಾರ್ಯತಃ ನೋಡಿದಾಗ ಅಷ್ಟು ಹೆಚ್ಚು ಉತ್ಪತ್ತಿಯಾಗಿದೆ ಎಂಬುದು ರುಜುವಾತು ಆಗುವುದಿಲ್ಲ. ಮುಖ್ಯವಾಗಿ ಜನರಿಗೆ ಸುಲಭ ಕ್ರಯದಲ್ಲಿ ಆಹಾರ ಪದಾರ್ಥಗಳು ಸಿಗಬೇಕು. ಇಲ್ಲದಿದ್ದರೆ ಇವರ ಅಂಕಿ ಅಂಶಗಳು ನಿಜವಲ್ಲ, ಸತ್ಯಕ್ಕೆ ದೂರವಾಗಿದೆ ಎಂಬುದು ಅದರಿಂದಲೇ ಸ್ಪಷ್ಟವಾಗಿದೆ. ಜನಜೀವನಕ್ಕೆ ಅತ್ಯವಶ್ಯವಾಗಿರುವ ಆಹಾರ ಸಾಮಗ್ರಿಗಳು ಸಿಗುವುದೇ ಇಲ್ಲ. ಅಂದಮೇಲೆ ಇವರು ಈಗ ಹಾಕಿರತಕ್ಕ ಯೋಜನೆಗಳ ಪರಿಣಾಮ ಒಳ್ಳೆಯದಾಗಿದೆಯೋ ಅಥವಾ ಉತ್ಪಾದನೆ ಜಾಸ್ತಿಯಾಗಿದೆಯೋ ಎನ್ನುವುದನ್ನು ಅಂಕಿ ಅಂಶಗಳ ಮೂಲಕ ಏನು ಆಧಾರವಿದೆಯೆಂಬುದನ್ನು ತಿಳಿಸಬೇಕು. ಇವರು ಈಗ ಶರಾವತಿ ಮತ್ತು ಇನ್ನು ಇತರ ಯೋಜನೆಗಳನ್ನು ಹಾಕಿರಬೇಕು. ಆ ಯೋಜನೆಗಳು ಫಲ ಕೊಡುವ ಕಾಲ ಬಹಳ ಮುಂದಿದೆ. ಇದರಲ್ಲಿ ಜನತೆಯ ಶಕ್ತಿ ಬೆಳೆಯಬೇಕು. ಅಲ್ಲದೆ ಇದಕ್ಕೆ ಸರ್ಕಾರದವರು ಏನು ಮಾಡಿದ್ದಾರೆಂದು ಕೇಳಿದರೆ ಅದಕ್ಕೆ ಉತ್ತರವೇ ಇಲ್ಲ. ಸರ್ಕಾರದವರು ತಮ್ಮಲ್ಲಿ ತಾವೇ ತಿದ್ದಿಕೊಳ್ಳದೆ ತಮ್ಮವರಲ್ಲಿಯೇ ಅಸಮಾಧಾನವನ್ನು ಹುಟ್ಟಿಸಿ ತಂತಮ್ಮಲ್ಲಿಯೇ ಗುಂಪುಗಾರಿಕೆಯನ್ನು ಬೆಳೆಸಿಕೊಳ್ಳತಕ್ಕ ಪರಿಸ್ಥಿತಿ ಈಗಾಗಲೇ ಬರುತ್ತಿದೆ. ಇದನ್ನು ಸರಿಪಡಿಸಬೇಕು. ಉತ್ತಮ ಸರ್ಕಾರವನ್ನು ನಡೆಸಿ, ನಾವೆಲ್ಲರೂ ಅದಕ್ಕೆ ಬೆಂಬಲವನ್ನು ಕೊಡುತ್ತೇವೆ. ಇತರರೆಲ್ಲರೂ ನಮ್ಮ ಹಾಗೆಯೇ ಹೆಚ್ಚಿನ ಬೆಂಬಲವನ್ನು ಕೊಡುತ್ತಾರೆ. ಆದರೆ ಹಾಗಾಗುತ್ತಿಲ್ಲ ಇದು ಯೋಗ್ಯವಾದ ನೈತಿಕ ಮಟ್ಟವೇ ಎಂಬುದನ್ನು ಅವರು ಹೇಳಬೇಕು. ಇನ್ನೂ ಕೆಲವು ಇಲಾಖೆಗಳಿವೆ. ಆ ಇಲಾಖೆಗಳಿಗೆ ಅನೇಕ ಯೋಜನೆಗಳನ್ನು ವಹಿಸಿಕೊಡುತ್ತಿದ್ದಾರೆ. ಈ ಯೋಜನೆಗಳಿಗಿಂತ ಸಿಬ್ಬಂದಿಯೇ ಜಾಸ್ತಿ ಇರುತ್ತದೆ. ದೊಡ್ಡ ದೊಡ್ಡ ಅಧಿಕಾರಿಗಳ ಸಂಖ್ಯೆಯೇ ಬೆಳೆಯುತ್ತಾ ಇದೆ. ಅದರಿಂದ ಜನಗಳಿಗೆ ಸಿಕ್ಕುವ ರಕ್ಷಣೆ ಕಡಿಮೆಯಾಗುತ್ತಾ ಇದೆ. ಮುಖ್ಯವಾಗಿ ಸೋಷಿಯಲ್

ವೆಲ್‌ಫೇರ್ ಇಲಾಖೆಯನ್ನು ತೆಗೆದುಕೊಂಡರೆ ಇದರಲ್ಲಿ ಸ್ಪಷ್ಟವಾದ ಕೆಲವು ಅಂಶಗಳಿವೆ. ಕೆಲವು ದಿವಸಗಳಿಂದಲೂ ಈ ಇಲಾಖೆಯ ಬಗ್ಗೆ ಮೈಸೂರು ಸಂಸ್ಥಾನದಲ್ಲಿ ಹರಿಜನರಿಗೆ ಏನೇನು ಸೌಲಭ್ಯಗಳು ದೊರೆಯುತ್ತಾ ಇದೆಯೋ ಅವು ಸಮಾಜಕಲ್ಯಾಣ ಇಲಾಖೆಯಿಂದ ನಡೆಯುತ್ತಾ ಇಲ್ಲ. ಈ ಇಲಾಖೆಯಲ್ಲಿ Weaker Sections ಎಂಬುದಾಗಿ ಏನೇನಿವೆಯೋ ಅವಕ್ಕೆ ರಕ್ಷಣೆಯನ್ನು ಕೊಡತಕ್ಕಂಥ ವಿಭಾಗವೇ ಇಲ್ಲ. ಇದರಲ್ಲಿ ನೋಡಿದರೆ ದೊಡ್ಡ ದೊಡ್ಡ ಅಧಿಕಾರಿಗಳು ಸಂಚಾರ ಮಾಡುವಂಥ ಒಂದು ವಿಷಯ ಮಾತ್ರ ಕಾಣುತ್ತಿದೆ. ಹಿಂದೆ ಮೈಸೂರು ಮಹಾರಾಜರುಗಳ ಕಾಲದಲ್ಲಿ ಬ್ರಿಟಿಷರ ಕಾಲದಲ್ಲಿ ಕೆಲವು ಹಾಸ್ಟಲುಗಳಲ್ಲಿ ಹೆಚ್ಚುಕಡಿಮೆಯಾದುದು ತಿಳಿದರೆ ಕೂಡಲೆ ಇನ್‌ಸ್ಪೆಕ್ಷನ್ ಮಾಡಿ ಜಿಲ್ಲೆಯಿಂದ ಜಿಲ್ಲೆಗೆ ಅಲ್ಲಿರತಕ್ಕವರನ್ನು ವರ್ಗ ಮಾಡಿ ಸರಿಪಡಿಸುತ್ತಿದ್ದರು. Weaker Sectionsಗೆ ಎಲ್ಲೆಲ್ಲಿ ಅವರಿಗೆ ಅವರ ಹಿತರಕ್ಷಣೆ ಹಾಗೂ ಹಕ್ಕುಬಾಧ್ಯತೆಗಳ ರಕ್ಷಣೆ ಸಿಗುವುದಿಲ್ಲವೋ ಅಲ್ಲಲ್ಲಿರತಕ್ಕ ಇಲಾಖೆಗಳನ್ನು ಪ್ರವೇಶಿಸಿ ಅಲ್ಲಿನ ವಿಚಾರಗಳನ್ನು ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಘಟನಾತ್ಮಕವಾದ ರಕ್ಷಣೆಯನ್ನು ದೊರಕಿಸಿಕೊಡುವುದಕ್ಕೆ ತಕ್ಕ ಅನುಕೂಲಗಳನ್ನು ಮಾಡುತ್ತಿದ್ದರು. ಆದರೆ ಈಗ ಒಂದೊಂದು ಆಫೀಸಿನಲ್ಲಿ ಕೇವಲ ಎರಡು ವರ್ಷಗಳು ಮಾತ್ರ ಕೆಲಸ ಮಾಡಿದ್ದರೂ ಅಂತಹ ಆಫೀಸರುಗಳನ್ನು ಟ್ರಾನ್ಸ್‌ಫರ್ ಮಾಡಿ ಮಹಮದ್ ಬಿನ್ ತೊಗಲಖನ ರಾಜ್ಯಾಡಳಿತ ರೀತಿಯಲ್ಲಿ ಇವರು ಈ ಆಫೀಸುಗಳನ್ನು ನಡೆಸುತ್ತಿದ್ದಾರೆ. ಇದರಿಂದ ಏನು ಪರಿಣಾಮವಾದೀತು ! ಇನ್ನುಳಿದ ಕೆಲವು ವರ್ಷಗಳ ಅವಧಿಯಲ್ಲಿ ಯಾವ್ಯಾವ ಕೆಲಸಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ತರುತ್ತಾರೆಂಬುದು ಗೊತ್ತಿಲ್ಲ. ಈ ಸಭೆಯಲ್ಲಿ ಇವರು ಘಟನಾತ್ಮಕವಾದ ಆಶ್ವಾಸನೆಯನ್ನು ಕೊಟ್ಟಿರುವ ಪ್ರಕಾರ ಹೇಗೆ ನಡೆಸಬೇಕೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈ ಸಂಬಂಧದಲ್ಲಿ ಹೇಳುವುದು ಇದೆ. ಇನ್ನು ಸರ್ಕಾರೀ ಕೆಲಸಗಳಲ್ಲಿ ಅವರನ್ನು ನೇಮಕ ಮಾಡುವಕಾರ್ಯದಲ್ಲಿ ಶೇಕಡ 18 ರಷ್ಟನ್ನು ಅವರಿಗೆ ಮೀಸಲಾಗಿಟ್ಟಿದ್ದಾರೆ. ಅದನ್ನು ಅವರಿಗೆ ಘಟನಾತ್ಮಕವಾಗಿ ಕೊಡಬೇಕಾಗಿದೆ. ಅದನ್ನು ಬೆಳೆಸಬೇಕಾದರೆ ಪ್ರತಿಯೊಂದು ಇಲಾಖೆಯ ಸಚಿವರೂ ಕೂಡ ಆಯಾ ಇಲಾಖೆಗಳಿಂದ ಅಂಕಿ ಅಂಶಗಳನ್ನು ತರಿಸಬೇಕು. Local Candidates ಅಂದರೆ ಸ್ಥಳೀಯ ನೌಕರರನ್ನು ರಾಜ್ಯದ ಕೆಲವು ಭಾಗಗಳಲ್ಲಿ ಅಧಿಕಾರಿಗಳಾಗಿ ನೇಮಿಸಿಕೊಂಡರೆ ಅದನ್ನು ಸರ್ಕಾರದವರು ಪರಿಶೀಲಿಸಬೇಕು. 1961ನೇ ಇಸವೀಯ ತನಕ ಹರಿಜನರ ಸಂಖ್ಯೆಗೆ ಅನುಗುಣವಾಗಿ ದಾಮೂಷಾ ಪ್ರಕಾರ ಅವರು ನೇಮಕವಾಗಿಲ್ಲ. ಆದ್ದರಿಂದ ಲೋಕಲ್ ಕ್ಯಾಂಡಿಡೇಟ್ಸ್ ಎಂಪ್ಲಾಯಾಮೆಂಟ್ ಎಕ್ಸ್‌ಚೇಂಜು ಮೂಲಕ ಬರಬೇಕೆಂಬುದಾಗಿ ಸರ್ಕಾರೀ ಆಜ್ಞೆ ಹೊರಟಿತು. ಆ ಪ್ರಕಾರ ಕೆಲವು ಅಧಿಕಾರಿಗಳನ್ನು ನೇಮಕ ಮಾಡಿದರು. ಆಗ ನಾಲ್ಕೈದು ವರ್ಷಗಳಿಂದಲೂ ಇದ್ದಂಥ ಲೋಕಲ್ ಕ್ಯಾಂಡಿಡೇಟ್ಸನ್ನು ನೀವೆಲ್ಲಾ ಮನೆಗೆ ಹೋಗಿ, ಮೊನ್ನೆ ತಾನೆ ರೆಕ್ರೂಟ್‌ಮೆಂಟ್ ಆಗಿ ಕ್ಯಾಂಡಿಡೇಟ್ಸ್ ಬಂದಿದ್ದಾರೆಂದು ಹೇಳಿದರು. ಆ ಆಜ್ಞೆಯಿಂದಾಗಿ ಅನೇಕ ಮಂದಿ ಹಿಂದುಳಿದ ಜನರು ಕೆಲಸಗಳನ್ನು ಬಿಟ್ಟು ಹೋಗಬೇಕಾಯಿತು. ಆ ಸಂಖ್ಯೆಯಲ್ಲಿ ಹೆಚ್ಚು ಹೋದವರು ಲೆಜಿಸ್ಲೇಚರ್ ಇಲಾಖೆಯಿಂದ. 6 ಜನ ಲೋಕಲ್ ಕ್ಯಾಂಡಿಡೇಟ್ಸ್ ಹೊರಗೆ ಹೋದವರಲ್ಲಿ 4 ಜನರು ಷೆಡ್ಯೂಲ್ಡ್ ಕ್ಯಾಸ್ಟ್‌ನವರು. ಹಾಗೆಯೇ ಪಿ.ಡಬ್ಲ್ಯೂ.ಡಿ. ಮತ್ತು ಇತರ ಎಲ್ಲಾ ಇಲಾಖೆಗಳಲ್ಲಿಯೂ ಹೆಚ್ಚಿಗೆ ಹೊರಗೆ ಹೋದವರು ಸ್ಥಳೀಯ ಲೋಕಲ್ ಕ್ಯಾಂಡಿಡೇಟ್ಸ್. ಆದರೆ 1-1-56ರ ಮೊದಲು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಸೇರಿಕೊಂಡಿದ್ದಂಥ ಎಲ್ಲ ನೌಕರರಿಗೂ ಅವರವರ ಕೆಲಸಗಳನ್ನು ಮಾತ್ರ ರೆಗ್ಯುಲರೈಜ್ ಮಾಡಿದ್ದಾರೆ. ಅವರಿಗೆ ಮಾತ್ರ ರಕ್ಷಣೆಕೊಟ್ಟಿದ್ದಾರೆ. 1-1-56 ರಿಂದೀಚೇಗೆ ಯಾರ್ಯಾರು ಸೇರಿದ್ದಾರೋ ಅಂತಹವರನ್ನು ಮಾತ್ರ ಹೊರಗೆ ಕಳುಹಿಸಿದ್ದಾರೆ. ಇದು ಯಾವ ನ್ಯಾಯ ? ಈ ವಿಚಾರದಲ್ಲಿ ಕೆಲವು ಇಲಾಖೆಗಳ ಅಧಿಕಾರಿಗಳು ಹಾಗೂ ಕೆಲವು ಸಚಿವರುಗಳು ಅವನ್ನು ವಿಚಾರಿಸುತ್ತೇವೆ, ರಕ್ಷಣೆಯನ್ನು ಅವರಿಗೆ ಕೊಡುತ್ತೇವೆಂಬುದಾಗಿ ಭರವಸೆಯನ್ನು ಕೊಟ್ಟಿದ್ದಾರೆ. ನಾನೂ ಸಹ ಆ ವಿಚಾರವನ್ನು ಬರೆದಿದ್ದೇನೆ. ಅವರಲ್ಲಿ ಹೆಚ್ಚಿಗೆ ಅಲ್ಪಸ್ವಲ್ಪ ಮಿನಿಮಂ ಕ್ವಾಲಿಫಿಕೇಷನ್ ಇರುವವರು ಸೇರಿದ್ದಾರೆ. ಕೆಲವರಿಗೆ ಏಜ್‌ಬಾರ್ ಆಗಿದೆ. ಅಂತಹವರು ಹೊರಗೆ ಹೋಗಬೇಕಾಗಿತ್ತು ಆದರೆ ಸರ್ಕಾರದ ಘೋಷಣೆ ಅಂತಹವರನ್ನು ಕೇವಲ 9 ತಿಂಗಳುಗಳು ಮಾತ್ರ ನೇಮಕಮಾಡಬಹುದು, ಅದರ ನಂತರ ಅವರನ್ನು ಇಟ್ಟುಕೊಂಡರೆ ತಪ್ಪು ಎಂಬುದಾಗಿರುವುದರಿಂದ ಈಗ ಅವರನ್ನು ವಿಚಾರಿಸಬೇಕು. 3-4 ವರ್ಷಗಳ ಕಾಲ ಉದ್ಯೋಗ ಮಾಡಿಕೊಂಡು ಅನುಭವಸ್ಥರಾಗಿ, ದಕ್ಷ ಕೆಲಸಗಾರರನ್ನು ಈಗ ನೀವು ಹೊರಗೆ ಹೋಗಿ ಎಂದು ಹೇಳುವುದು ಸರಿಯಲ್ಲ. ಈ ರೀತಿ ಕೇವಲ ಷೆಡ್ಯೂಲ್ಡ್‌ಕ್ಯಾಸ್ಟ್‌ನವರಿಗೆ ಹೇಳುವುದಿಲ್ಲ. ಎಲ್ಲಾ ಪಂಗಡಗಳಲ್ಲಿರುವವರ ಈಗಿನ ಹುದ್ದೆಗಳನ್ನು ರೆಗ್ಯುಲರೈಜ್ ಮಾಡಿ ಹೊಸ ಹುದ್ದೆಗಳಿಗೆ ಮಾತ್ರ ರೆಕ್ರೂಟ್‌ಮೆಂಟ್ ಕಮಿಟಿ ಉಮೇದುವಾರರನ್ನು ಹಾಕಿ. ಅನೇಕ ವರ್ಷಗಳ ಕಾಲ ಸರ್ವಿಸ್ ಮಾಡುವವರ ಅನುಭವವನ್ನು ಸರ್ಕಾರ ಉಪಯೋಗಮಾಡಿಕೊಳ್ಳಬೇಕು. ಒಂದು ಕಡೆ ರೆಕ್ರೂಟ್‌ಮೆಂಟ್ ಕಮಿಟಿ ಇನ್ನೊಂದು ಕಡೆ ಪಬ್ಲಿಕ್ ಸರ್ವಿಸ್ ಕಮಿಷನ್, ಮತ್ತೊಂದು ಕಡೆ ಅಧಿಕಾರವರ್ಗದವರು.

(ಶ್ರೀ ಗೋಪಾಲ ಸಾರೆನ್ನ)

ಹೀಗೆ ಮೂರು ವಿಧಗಳಲ್ಲಿ ನೇಮಕ ಮಾಡಿಕೊಂಡು ಹೋಗಬೇಡಿ ಎಂಬುದಾಗಿ ನಾನು ಹೇಳುತ್ತೇನೆ. ಇನ್ನು ಗೆಜೆಟೆಡ್ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಕಮಾಡಿಕೊಳ್ಳುವುದರಲ್ಲಿ ಒಂದು ಕಡೆ ಇಂಟರ್‌ವ್ಯೂ ಇಲ್ಲ, ರೈಟಿಂಗ್ ಟೆಸ್ಟ್ ಮಾಡಿಲ್ಲವೆನ್ನುವ ಕಾರಣಗಳಿಂದ ಮತ್ತು ಇವರ ಅವ್ಯವಸ್ಥೆಯಿಂದ ಸುಪ್ರೀಂ ಮತ್ತು ಹೈಕೋರ್ಟುಗಳಿಗೆ ಹೋಗಿ ನಿರ್ಗತಿಕರಾಗಿ ಇನ್ನೂ ಅವರುಗಳೆಲ್ಲಾ ಅಲೆದಾಡುತ್ತಿದ್ದಾರೆ. ಅದು ಸೋಷಿಯಲ್ ವೆಲ್‌ಫೇರ್ ಆಫೀಸರುಗಳು ಮತ್ತು ತಹಶೀಲ್ದಾರರುಗಳ ಅನಾಹುತಕ್ಕೆ ಕಾರಣವಾಯಿತು. ಈ ರೀತಿ ಜನಗಳಿಗೆ, ನೌಕರರಿಗೆ ಅಸಮಾಧಾನವಾಗುವುದಕ್ಕೆ ದುರಾಡಳಿತವೇ ಕಾರಣ. ಇವೊತ್ತಿನದಿವಸ ಸರ್ಕಾರದವರು ಆಡಳಿತವನ್ನು ಸರಿಪಡಿಸಬೇಕು. ಯಾವಾಗ ಸರ್ಕಾರದವರು ಇದನ್ನೆಲ್ಲಾ ಸರಿಪಡಿಸುತ್ತಾರೆಯೋ, ಯಾವಾಗ ಜನರಿಗೆ ಒಳ್ಳೆಯದಾಗುತ್ತದೆಯೋ ಎನ್ನತಕ್ಕ ಒಂದು ಸಂಶಯ ಜನರಿಗೆ ಬಂದಿದೆ.

4-30 P. M.

ಇನ್ನೂ ಸರ್ಕಾರದ ಕೈಕೆಳಗೆ ಕೆಲಸ ಮಾಡತಕ್ಕಂಥ ನೌಕರರ ಪರಿಸ್ಥಿತಿಯನ್ನು ಆದಷ್ಟು ಬೇಗ ಸುಧಾರಿಸಬೇಕು. ಈ ರಾಜ್ಯದಲ್ಲಿ ನೌಕರರ ಸಂಬಳ ಸಾರಿಗೆಯಲ್ಲಿ ಯಾವ ತಾರತಮ್ಯವೂ ಇರಬಾರದು. ಕೇಂದ್ರ ಸರ್ಕಾರದ ನೌಕರರಿಗೇ ಒಂದು ಸಂಬಳ, ರಾಜ್ಯಸರ್ಕಾರದವರಿಗೇ ಒಂದು ಸಂಬಳ ಮುನಿಸಿಪಾಲಿಟಿಯವರಿಗೇ ಒಂದು ಸಂಬಳ, ಸರ್ಕಾರದ ಮಂತ್ರಿ ಮಂಡಲದಲ್ಲಿ ಕೆಲಸಮಾಡತಕ್ಕವರಿಗೇ ಒಂದು ಸಂಬಳ ಇರಬಾರದು. ನಮ್ಮ ರಾಜ್ಯದಲ್ಲಿ ಒಂದೇ ವಿಧವಾದ ಕೆಲಸಕ್ಕೆ ಒಂದೇ ವಿಧವಾದ ಸಂಬಳ ಇರಬೇಕು. ಕೇಂದ್ರ ಸರ್ಕಾರದ ಗುಮಾಸ್ತರಿಗೇ ಒಂದು ಸಂಬಳ, ರಾಜ್ಯಸರ್ಕಾರದ ಗುಮಾಸ್ತರಿಗೇ ಒಂದು ಸಂಬಳ, ಪಂಚಾಯಿತಿಯ ಗುಮಾಸ್ತರಿಗೇ ಒಂದು ಸಂಬಳ, ಕೇಂದ್ರ ಸರ್ಕಾರದ ಜವಾನರಿಗೇ ಒಂದು ಸಂಬಳ, ರಾಜ್ಯ ಸರ್ಕಾರದ ಜವಾನರಿಗೇ ಒಂದು ಸಂಬಳ ಇರಬಾರದು. ಈ ಅಂತರವನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು. ಮದ್ರಾಸ್ ರಾಜ್ಯ ಮತ್ತು ಇನ್ನು ಕೆಲವು ರಾಜ್ಯಗಳು ತಮ್ಮ ನೌಕರರಿಗೆ ಆದಷ್ಟು ಹೆಚ್ಚಿನ ಸವಲತ್ತುಗಳನ್ನು ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಅಷ್ಟನ್ನಾದರೂ ಕೊಡುವುದು ಅಗತ್ಯ. ಯಾವುದನ್ನೂ ಕೊಡದೇ ಇದ್ದರೆ ಸರ್ಕಾರದವರ ಉದ್ದೇಶ ಏನಿರಬೇಕೋ ನನಗೆ ಗೊತ್ತಿಲ್ಲ. ಒಂದೇ ರಾಜ್ಯದಲ್ಲಿ ಒಂದೇ ವಿದ್ಯಾರ್ಹತೆ, ಒಂದೇ ವಿಧವಾದ ಕೆಲಸ, ಒಂದೇ ವಿಧವಾದ ಉದ್ಯೋಗಕ್ಕೆ ಒಂದೇ ವಿಧವಾದ ಪ್ರತಿಫಲ ದೊರಕುವ ಹಾಗೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಆ ರೀತಿಯಲ್ಲಿ ನಮ್ಮ ಸರ್ಕಾರದವರು ಏರ್ಪಾಡು ಮಾಡಿದರೆ ನಮ್ಮ ಸರ್ಕಾರದ ನೌಕರರು ದಕ್ಷತೆಯಿಂದ ಕೆಲಸಮಾಡುತ್ತಾರೆ, ಸರ್ಕಾರದ ಆಡಳಿತವೂ ಉತ್ತಮವಾಗುತ್ತದೆ. ಆದ್ದರಿಂದ ರಾಜ್ಯದ ಜನಗಳಿಗೆ ಸುಖ ಲಭಿಸುತ್ತದೆ. ಅಷ್ಟರಮಟ್ಟಿಗೆ ಮಾಡುವುದಕ್ಕೆ ನಿಮಗೆ ಎಲ್ಲಿಯ ತನಕ ಸಾಧ್ಯವಿಲ್ಲವೋ ಅಲ್ಲಿಯ ತನಕ ನೀವು ಎಂದರೆ ಆಡಳಿತವರ್ಗದವರು ಅಧಿಕಾರದಲ್ಲಿದ್ದರೂ ಕೂಡ ಜನಗಳಿಗೆ ಪ್ರಯೋಜನವಾಗುವುದಿಲ್ಲ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

[MR. DEPUTY SPEAKER in the Chair].

Smt. VASANTHALATA V. MIRJANKAR (Kumta).—Sir, while welcoming the Demands that are placed before the House, I would like to make a few observations over the same. I shall confine myself to Public Works. While I carefully went through the budget estimates, it has given me rather a severe jolt and I am seeking your permission to make a few observation on the same. While going through these estimates I find that the needs of our district have not been given due consideration while formulating these estimates. I need not say that the district of North Canara is a hilly one with dense forests and the only means of communication is road. The rivers which were sometime ago navigable up to a certain limit, are all silted up. As you all know our district is most conspicuous in the absence of railways too. Though this matter of

getting railway line to our district is pressed from time immemorial we are confident that our Chief Minister will press our claim and get us our long cherished railway link in the foreseeable future.

Regarding the new works there is no mention about them in the budget. Rural communications also has not been taken into consideration. It was only yesterday that a question was put on the floor of the House regarding the progress made as regards rural communication in the district of North Canara and the reply was that we are not able to have even 10 miles in this district. We have got national highways, State highways, Central Fund roads and rural communication roads also. As regards the major roads are concerned, work on the existing roads have been carried on. The Kumta Bilgi Siddapur roads were started long back. Last time during the budget session I appealed to the Government to improve these roads, metal and asphalt them. Otherwise due to heavy rains whatever work that was done on the roads, will go as waste. Further more there are a good number of bridges and culverts to be constructed on the same road. I do not see any provision made in the current budget. Without these bridges and culverts, I do not think any progress on these roads will serve the needs of the area. As far as ore roads are concerned, time and again I have been pressing for improvement of Hosakanbi-Hebbal-Tadri Road leading to a minor port Tadri or on coast the of N.Kanara roads. This minor port of North Canara is the nearest port to the Hubli Railway Station. If this small part of the road is improved to the ore carrying standards, I am certain that part of the area would develop in no time and every ton of iron ore exported form the port of Tadri will save to our Government Rs. 2. per ton of ore Exported.

So far as rural communications are concerned, when the Government itself is not in a position to maintain and improve these roads I do not know why the Government should thrust its reponsibility on the Taluk Development Boards when the normal funds available with them are too meagre even to carry out legitimate duties entrusted to them. Though the forest demands are not before us now, I would like to make a mention of the same because most of the roads that are referred do pass through dense forests and even the forest material that is being carried passes on these roads only. Hence there are quite a good number of forest road salso. I would appeal to the Minister to get some grants from the Forest Department for the maintenance of these roads as well as some of the important roads I have mentioned before. We are grateful to the Government for having realised the importance of kar lands. That is one of the important problems of North Canara. The Government is good enough to improve the kar lands under minor irrigation and work has already started. I had to make a mention about kar lands because we have about 14 to 15 thousand acres of kar lands.

You are aware if these lands are brought under cultivation, yield per acre of land would be 5 times the normal yield. The total cost of bringing these lands under cultivation would be like 14 crores. Calculating

(SMT. VASANTHALATA V. MIRJANKAR)

at Rs. 1,000 per acre, the provision that is made in the present Budget is unquestionably a meagre one. If it is a token grant provision, I have no objection.

The work that has to be done on these works is not like normal P. W. D. road works. These will have to be completed before the monsoon. So, I will appeal to the Minister concerned to see that in no way these works are affected. There are certain works which are held up for want of estimates, revised or otherwise. While preparing these estimates, I feel that due thought should be given as otherwise the work will suffer. If the plans or estimates are to be revised, I dont think the record progress could be achieved. If once the work is taken up on Departmental side, the progress of the work could not be hindered.

I want to make general observations on the importance of development of Ports work in our area. The Government of India are contemplating to export ore through the major ports of the Country. If this is so, our ports in North Kanara District will not see the dawn of the day. If these ports are to be developed, encouragement is to be given to these minor ports. Some liberal concessions should be given particularly to the District of North Kanara. I found Sir, that several Districts are now moving ore. It is only our District which is facing great obstacles in the quick transport. On Hubli-Karwar Road, three weigh bridges are installed out of 7 weigh bridges installed in the State. For such a dist nce of 1 0 miles, I dont think there is any necessity of having 3 weigh bridges on this road. Most of the transport operators engaged in transport of ore have left this State and gone away. We have to consider the difficulties of these transport operators on ore carrying roads. The cost of the fuel, spare parts of trucks and vehicles have gone considerably high. I feel that Government should give some concessions to such of the operators plying on Karwar Hubli Road and encourage transporting of ore to the ports of Karwar District. Sir, one more weigh bridge has been installed in Balegoli. It has not been commissioned as yet. I appeal to Government to see that weigh bridge at Balegoli is not commissioned and some concession is given to the Transport Porters carrying ores to the District. Lastly, I once again appeal to the Minister for P. W. D. to see that imbalance in the disparity in the development of the backward area is removed and due attention is given to the development of North Kanara Ports in the interest of the State and in the interest of the people of Karwar. I thank you for having given me a chance to express my views.

† SRI L. B. BIRJE (Khanapur).—[In Marathi].

‡ ಶ್ರೀ ಎಸ್. ಎಸ್. ಕೊಳ್ಕೆಬೈಲ್ (ಕುಂದಾಪುರ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಭೆಯ ಮುಂದೆ ಇರುವ ಜನರಲ್ ಅಡ್ಮಿನಿಸ್ಟ್ರೇಷನ್, ಕ್ಯಾಪಿಟಲ್ ಔಟ್‌ಲೇ ಆನ್ ಇಲೆಕ್ಟ್ರಿಸಿಟಿ ಸ್ಕೀಮ್ಸ್, ಪಬ್ಲಿಕ್ ವರ್ಕ್ಸ್, ಪೋರ್ಟ್ಸ್ ಅಂಡ್ ಪೈಲಟೇಜ್, ಕ್ಯಾಪಿಟಲ್ ಔಟ್‌ಲೇ ಆನ್ ಪೋರ್ಟ್ಸ್—ಈ ಡಿಮ್ಯಾಂಡುಗಳನ್ನು ಅನುಮೋದಿಸುತ್ತಾ ಇವುಗಳ ವಿಷಯದಲ್ಲಿ ಕೆಲವು ಸೂಚನೆಗಳನ್ನು ಸರಕಾರಕ್ಕೆ ಕೊಡಬೇಕೆಂದು ಆಲೋಚನೆ ಮಾಡಿದ್ದೇನೆ.

5 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮೀ, ಮಾನ್ಯ ಸದಸ್ಯರು ಯಾರದೋ ಸೀರೆ ತೆಗೆದುಕೊಂಡು ಬಂದು ಮೈಮೇಲೆ ಹೊದೆದುಕೊಂಡಿದ್ದಾರೆ, ಅಲ್ಲವೇ?

ಶ್ರೀ ಎಸ್. ಎಸ್. ಕೊಳ್ಕೇಬೈಲ್.—ಈ ರೀತಿ ಮಧ್ಯೆ ಇಂಟರಪ್ಷನ್ ಮಾಡಿದರೆ ನನಗೆ ಮಾತನಾಡಲು ಕೊಟ್ಟ ವೇಳೆ ಹಾಳಾಗುತ್ತದೆ. ಸ್ವಾಮೀ, ಇವತ್ತಿನ ದಿವಸ ಸರಕಾರವನ್ನು ಎಲ್ಲ ಅಧಿಕಾರಿಗಳು ಟೀಕೆ ಮಾಡುವುದು ಕಡಿಮೆಯಾಗಿಲ್ಲ. ಕಾಂಗ್ರೆಸ್ ಪಕ್ಷದ ಸದಸ್ಯರಿರಲಿ: ಮಂತ್ರಿಗಳಿರಲಿ ಯಾವುದು ಕಡಿವೆಯಾದರೂ ಕ್ರಿಟಿಸೈಜ್ ಮಾಡುವುದು ಕಡಿಮೆಯಾಗಿಲ್ಲ. ಇದಕ್ಕೆ ಮುಖ್ಯ ಕಾರಣರಾದವರು ಅಧಿಕಾರಿಗಳು ಎಂದು ಹೇಳಿದರೆ ಅದು ತಪ್ಪಾಗಲಾರದು. ಯೋಜನೆಗಳ ವಿಫಲತೆಗೆ ಅಧಿಕಾರಿಗಳೇ ಕಾರಣ. ಕಾಂಗ್ರೆಸ್ ರೂಪಿಸುವ ಯೋಜನೆಗಳ ಧೋರಣೆಗೆ ಅನುಗುಣವಾಗಿ; ಅಧಿಕಾರಿಗಳು ವರ್ತಿಸುತ್ತಿಲ್ಲ. ಕಾಂಗ್ರೆಸ್ ಧೋರಣೆಯಲ್ಲಿ ಅವರಿಗೆ ಆಸಕ್ತಿ ಇಲ್ಲ. ಆದುದರಿಂದ ಇಷ್ಟಿನ ಅಪವಾದ ಸರಕಾರದ ಮೇಲೆ ಬರುವುದಕ್ಕೆ ಅಧಿಕಾರಿಗಳೇ ಕಾರಣ. ಇದನ್ನು ಹೇಳಲು ವಿಷಾದವಾಗುತ್ತದೆ. ಅಧಿಕಾರಿಗಳು ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ಧೋರಣೆಯನ್ನೇ ಅನುಸರಿಸುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಇದ್ದ ಅಧಿಕಾರಿಗಳ ಮನೋವೃತ್ತಿಯನ್ನು ಈಗಲೂ ಅನುಸರಿಸುತ್ತ ಬಂದಿದ್ದಾರೆ. 1947ರಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ನಂತರ ಕೂಡ ನಮ್ಮ ರಾಜ್ಯ ಸರಕಾರದಲ್ಲಿ ಹಾಗೂ ಕೇಂದ್ರ ಸರಕಾರದಲ್ಲಿ ಸಹ ಇಂಥ ಅತೃಪ್ತ ಅಧಿಕಾರಿಗಳು ಇದ್ದಾರೆ. ಅವರು ಮಾಡುವ ವರ್ತನೆಯಿಂದ ಕಾಂಗ್ರೆಸ್ ಧೋರಣೆಯನ್ನು ಅವರು ಪರಿಪಾಲಿಸಿಲ್ಲ. ಯಾರಾದರೂ ಖಾದಿ ವಸ್ತ್ರ ಹಾಕಿಕೊಂಡು ಬಂದರೆ, ಗಾಂಧಿ ಟೋಪಿ ಹಾಕಿಕೊಂಡು ಬಂದರೆ ಇಂಥ ಅಧಿಕಾರಿಗಳು ತಿರಸ್ಕಾರ ಮನೋಭಾವ ತೋರಿಸುತ್ತಾರೆ. ಈ ಮನೋಭಾವ ಹೆಚ್ಚಾಗಿದೆ. ಕಾಂಗ್ರೆಸ್ ಪಕ್ಷದ ಮಾನ್ಯ ಸದಸ್ಯರು ಸಭೆಯಲ್ಲಿ ಭಾಷಣ ಮಾಡುವಾಗ್ಗೆ ಸಹ ಇಂಥ ತಿರಸ್ಕಾರ ಮನೋಭಾವ ಕಂಡುಬರುತ್ತದೆ. ಇದು ಮೈಸೂರು ದೇಶದಲ್ಲಿ ಮಾತ್ರ ಇದೆ ಎಂದು ಅಲ್ಲ. ಎಲ್ಲ ರಾಜ್ಯಗಳಲ್ಲಿಯೂ ಇದು ಕಂಡುಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರು ಹೇಳುವುದು, ಗಾಂಧೀ ಟೋಪಿ ಹಾಕಿಕೊಂಡು ಹೋದರೆ ಏನು ಬೇಕಾದ್ದು ಮಾಡಬಹುದೇನು?

ಶ್ರೀ ಎಸ್. ಎಸ್. ಕೊಳ್ಕೇಬೈಲ್.—ಏನು ಮಾಡಬೇಕು ಏನು ಮಾಡುವುದು ಬೇಡ ನಮಗೆ ಗೊತ್ತಿದೆ. ಸಪ್ಟೆಂಬರ್ ತಿಂಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಅಕ್ಕಿ ಇರಲಿಲ್ಲ. ನಾನು ಇಲ್ಲಿಗೆ ಬಂದು ಈ ವಿಷಯವನ್ನು ಮುಖ್ಯ ಮಂತ್ರಿಗಳಿಗೆ ಹೇಳಿದೆ. ಅವರು ಬಹಳ ಸಹಾನುಭೂತಿಯಿಂದ ಕೇಳಿಕೊಂಡು ಅಕ್ಕಿ ಕೊಟ್ಟು ಕಳಿಸಲು ಅಧಿಕಾರಿಗಳಿಗೆ ಹೇಳಿ ಹುಕುಂ ಕೊಟ್ಟರು. ಅಧಿಕಾರಿಗಳು ಈ ಆರ್ಡರ್ ಮನ್ನಣೆ ಮಾಡದೆ ಅದನ್ನು ಜಾರಿಗೆ ಕೊಡಲಿಲ್ಲ. ಅನೇಕ ಜನರು ನಮ್ಮ ಜಿಲ್ಲೆಯಲ್ಲಿ ಆಹಾರವಿಲ್ಲದೆ ಕಷ್ಟ ಪಡಬೇಕಾಯಿತು. ನಾನು ಪತ್ರ ಬರೆದು ಈ ಸಮಾಚಾರವನ್ನು ತಿಳಿಸಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ದರವು 110 ರೂಪಾಯಿ ಇದ್ದಿತು. ರೇಷನ್ ಬರುತ್ತದೆ ಎಂದು ಎಲ್ಲರೂ ಹೇಳಿದರೂ ಕೂಡ ಆಹಾರ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿಲ್ಲ. ಜನರಲ್ ಅಡ್ಮಿನಿಸ್ಟ್ರೇಷನ್ ಹತೋಟಿಗೆ ತಂದರೆ ಇದು ಸಾಧ್ಯವಾಗುತ್ತದೆ. ಸಾಮಾನ್ಯ ಜನತೆಗೆ ಜೀವನ ನಡೆಸಿಕೊಂಡು ಹೋಗಲು ಕಷ್ಟವಾಗುತ್ತಿದೆ. ನಿನ್ನೆಯ ದಿನ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳುತ್ತಿದ್ದರು, ಅಧಿಕಾರಿಗಳಲ್ಲಿರುವ ಡಿಕ್ಟೇಟರ್‌ಷಿಪ್ ಮನೋವೃತ್ತಿಯನ್ನು ಅಂತ್ಯಗೊಳಿಸಬೇಕು ಎಂದು ಅವರೂ ಸಹ ಹೇಳುತ್ತಿದ್ದರು. ಇಂಥ ಮನೋವೃತ್ತಿ ಇರುವುದು ಸರಿಯಲ್ಲ. ಇದು ಕೂಡಲೆ ಹೋಗಬೇಕು. ಇಂಥ ಅಧಿಕಾರಿಗಳು ಕನ್ನಡದಲ್ಲಿ ಮಾತನಾಡುವುದಿಲ್ಲ. ಇವರು ಜನ ಸಾಮಾನ್ಯದೊಂದಿಗೆ ಬೆರೆತುಕೊಳ್ಳುವುದಿಲ್ಲ. ಜನ ಸಾಮಾನ್ಯರ ಸಂಪರ್ಕ ಇಟ್ಟುಕೊಳ್ಳುವುದಿಲ್ಲ. ಇವರು ತಮ್ಮ ಒಂದು ಪ್ರತ್ಯೇಕ ಸೊಸೈಟಿ ಮಾಡಿಕೊಂಡಿರುತ್ತಾರೆ. ಯಾವಾಗಲೂ ಇಂಗ್ಲೀಷಿನಲ್ಲಿ ಮಾತನಾಡುತ್ತಾರೆ. ಕನ್ನಡ ಮಾತನಾಡುವುದಿಲ್ಲ. ಅವರ ಹತ್ತಿರ ನಮ್ಮಂಥವರು ಹೋದರೂ ಕೂಡ ನಮಗೆ ಮರ್ಯಾದೆ ಇಲ್ಲ. ಇಂಥ ಸಂದರ್ಭದಲ್ಲಿ ಜನರು ಹೋದರೆ ಮರ್ಯಾದೆ ಇರುತ್ತದೆಯೇ?

ಸ್ವಾಮೀ, ನಾವು ಈ ಮೈಸೂರು ಸಂಸ್ಥಾನಕ್ಕೆ 1-11-1956ರಲ್ಲಿ ಇಂಟಿಗ್ರೇಷನ್ ಆದಾಗ ಬಂದು ಸೇರಿದೆವು. ಅಲ್ಲಿಂದ ಇಲ್ಲಿಯವರೆಗೂ ಈ ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿನಲ್ಲಿ ಆಗಬೇಕಾಗಿದ್ದ ಆ ಅಧಿಕಾರಿಗಳ ಹಾಗೂ ನೌಕರರ ಒಂದು ಸೀನಿಯಾರಿಟಿ ಪಟ್ಟಿ ಇನ್ನೂ ತಯಾರಾಗಿಲ್ಲ. ಇದರಿಂದ ನೌಕರಿಯಲ್ಲಿರತಕ್ಕ ಅನೇಕರಿಗೆ ಬಿಗುಪ್ಸೆಯುಂಟಾಗಿದೆ; ಇದರಲ್ಲಿ ಕೆಲವರು ವೆಸ್ಟೆಡ್ ಇಂಟ್ರೆಸ್ಟ್ ಇರತಕ್ಕವರು ಸೇರಿಕೊಂಡು ಇದನ್ನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನೂ

(ಶ್ರೀ ಎಸ್. ಎಸ್. ಕೊಳ್ಕೇಬೈರ್)

ಆಗಿಲ್ಲ; ಕೇಂದ್ರದವರ ಆಜ್ಞೆ ಬಂದಿಲ್ಲ, ಹೈಕೋರ್ಟಿನಲ್ಲಿ ರಿಟ್ ಹಾಕಿ ಪ್ರೊಹಿಬಿಟ್ ಮಾಡಿಸಿದ್ದಾರೆ ಎಂತ ನಾನಾ ಕಾರಣಗಳನ್ನು ಹೇಳುತ್ತಾ ಇದನ್ನು ಹಿಂದಕ್ಕೆ ಹಾಕುತ್ತಿದ್ದಾರೆ. ಹೀಗಾಗಿ ಯಾರು ಯಾರಿಗೆ ಭಡತಿ ಸಿಕ್ಕಬೇಕಾಗಿತ್ತೋ ಅವರಿಗೆ ಸಿಕ್ಕದಂತಾಗಿ ಅವರಲ್ಲಿ ಅತೃಪ್ತಿ ಮೂಡಿದೆ. ಅವರಲ್ಲಿ ಅಸೂಯೆ ಜಾಸ್ತಿಯಾಗುತ್ತಿದೆ. ಇದರಿಂದ ಅಡ್ಮಿನಿಸ್ಟ್ರೇಷನ್‌ನಲ್ಲಿ ಬಹಳ ಶಿಥಿಲವಾಗುತ್ತಿದೆ. ಆದರೆ ಇದೇನೂ ಅಂಥ ಒಂದು ದೊಡ್ಡ ಕೆಲಸವಲ್ಲ. ನಮ್ಮ ಅಧ್ಯಕ್ಷರಂಥವರಿಗೆ ಇದನ್ನು ಕೊಟ್ಟಪಕ್ಷದಲ್ಲಿ ಅವರು ಇದನ್ನು ಒಂದೇ ತಿಂಗಳಲ್ಲಿ ಮುಗಿಸಬಲ್ಲರು. ಆದ್ದರಿಂದ ಯನ್ನು ಬೇಗ ತಯಾರಿಸತಕ್ಕದ್ದು ಅತ್ಯಗತ್ಯ. ಇಲ್ಲವಾದರೆ ಆಡಳಿತ ಇನ್ನೂ ಶಿಥಿಲವಾಗತಕ್ಕ ಪರಿಸ್ಥಿತಿ ಒದಗಬಹುದು.

ಇನ್ನು ನಾನು ಆಹಾರ ಪರಿಸ್ಥಿತಿಯ ಬಗ್ಗೆ ಎರಡು ಮಾತುಗಳನ್ನು ಆಡಬಯಸುತ್ತೇನೆ. ಆದರೆ ನಾನು ಸೂಕ್ಷ್ಮವಾಗಿ ಒಂದೆರಡು ವಿಚಾರ ತಿಳಿಸುತ್ತೇನೆ. ನಮ್ಮ ಜಿಲ್ಲೆಯಮಟ್ಟಿಗೆ ಹೇಳುವುದಾದರೆ, ಇಂಥ ಕಾನೂನುಗಳನ್ನು ಮಾಡುವುದರಿಂದ ಜನರು ಅಂದರೆ ಅಧಿಕಾರಿಗಳು ಕೆಳಮಟ್ಟಕ್ಕೆ ಬರಲು ಅವಕಾಶವಾಗುತ್ತೆ ಎಂದು. ಆದರೆ ಅವರು ಲಂಚ ತೆಗೆದುಕೊಳ್ಳುತ್ತಾರೆಂದು ನಾನು ಹೇಳುವುದಿಲ್ಲ. ಆದರೆ ನಮ್ಮ ಆ ವಿಜಿಲೆನ್ಸ್ ಕಮಿಟಿಗೆ ಹೆಚ್ಚಿನ ಕೆಲಸ ಬೀಳುತ್ತೆ ಎಂದು ಇಷ್ಟುಮಾತ್ರ ಹೇಳುತ್ತೇನೆ. ನಮ್ಮ ಪಕ್ಕದ ಜಿಲ್ಲೆಯಾದ ಶಿವಮೊಗ್ಗದಲ್ಲಿ ಅಕ್ಕಿ ಬೇಕಾದಷ್ಟಿದ್ದರೂ ಅದರ ಪಕ್ಕದ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿ ಇಲ್ಲದೆ ಅಲ್ಲಿ ಕ್ವಿಂಟಾಲಿಗೆ ಈಗ 110ರಿಂದ 150 ರೂಪಾಯಿಗಳವರೆಗೂ ಅಕ್ಕಿಯ ರೇಟಾಗಿದೆ. ಇದಕ್ಕೆಲ್ಲಾ ಕಾರಣ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಅಕ್ಕಿ ಹೋಗಬಾರದೆಂದು ಮಾಡಿದ್ದೇ. ಇಲ್ಲಿ ಮಾಡತಕ್ಕ ಆಜ್ಞೆಗಳನ್ನು ಬೇಡ ಎಂತ ನಾನು ಹೇಳುವುದಿಲ್ಲ. ಆದರೆ ನಾನು ಜನರ ಕಷ್ಟವನ್ನು ವರ್ಣನೆಮಾಡುತ್ತಿದ್ದೇನೆ. ಮೊನ್ನೆತಾನೆ ಯಾರೋ ಅಕ್ಕಿಗೆ ವಿಷ ಬೆರಸಿ ತಿಂದು ಪ್ರಾಣಬಿಟ್ಟ ವಿಚಾರ ಹೇಳಿದರು. ಈ ದಿವಸ ನಮ್ಮ ಜಿಲ್ಲೆಯಲ್ಲಾದರೋ ಹೆಂಗಸರ ಮೈಮೇಲೆ ಒಂದು ಚೂರೂ ಚಿನ್ನವಿಲ್ಲ. ತಾಳಿಯೊಂದನ್ನು ಬಿಟ್ಟರೆ ಬೇರೇನೂ ಇಲ್ಲ. ಅಂಥವರು ಅಲ್ಲಿ ಒಂದು ಅಕ್ಕಿ ಕಾಳೂ ಸಿಗದಿದ್ದಾಗ ಏನು ಮಾಡಬೇಕು ? ಅದಕ್ಕಾಗಿ ನಾನು ಈ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈ ಸಮಿತಿಯ ನೇಮಕ ಬಹಳ ಅಗತ್ಯವಾದುದೆಂದು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ವಿಚಾರಕ್ಕೆ ಬಂದರೆ—ನಮ್ಮ ಜಿಲ್ಲೆಗೆ ಯಾವುದೋ 1—2 ಯೋಜನೆಗಳನ್ನು ತಂದಿದೆ ಎಂದು ಹೇಳಿ ಅಲ್ಲಿ ಇನ್ನೂ ಯಾವ ಕೆಲಸವನ್ನೂ ಮಾಡದೆ ಕೈ ಬಿಟ್ಟಿದ್ದಾರೆ. ಅಲ್ಲಿಗೆ ವೆಸ್ಟ್ ಕೋಸ್ಟ್ ರಸ್ತೆ ಬಂದಿದೆ, ಹಾರ್ಬರ್ ಇದೆ ಎಂತ ಹೇಳಿ ಇತರೇ ಕೆಲಸಗಳನ್ನು ಕೈಬಿಟ್ಟಿದ್ದಾರೆ. ಆದರೆ ಈ ರಸ್ತೆಯಿಂದ ಜಿಲ್ಲೆಯ ಒಳಭಾಗದ ಜನರಿಗೇನೂ ಪ್ರಯೋಜನವಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಬಂದಿದ್ದಾಗ ನಾನು ಅವರಿಗೆ ಸಮಗ್ರವಾಗಿ ಅಲ್ಲಿರತಕ್ಕ ಪರಿಸ್ಥಿತಿಯನ್ನೆಲ್ಲಾ ತೋರಿಸಿದ್ದೇನೆ. ಅಲ್ಲಿರತಕ್ಕ ಪ್ರತಿಯೊಂದು ಸೇತುವೆಯೂ ಇಂದೋ ನಾಳೆಯೋ ಬೀಳತಕ್ಕ ಪರಿಸ್ಥಿತಿಯಲ್ಲಿವೆ. ನಾನು ಕಳೆದ 3 ವರ್ಷಗಳಿಂದಲೂ, ಅಂದರೆ, ನಾನು ಇಲ್ಲಿಗೆ ಸದಸ್ಯನಾಗಿ ಬಂದಾಗಿನಿಂದಲೂ, ಈ ಸೇತುವೆಗಳ ವಿಚಾರವನ್ನು ತಿಳಿಸುತ್ತಲೇ ಬಂದಿದ್ದೇನೆ. ಆದರೆ ಸರ್ಕಾರದವರು ಒಂದನ್ನೂ ಕೈಗೊಂಡಿಲ್ಲ. ನನ್ನ ಕ್ಷೇತ್ರವಾದ ಬ್ರಂಹಾವರ ಕ್ಷೇತ್ರದಲ್ಲಿ ನಾಲ್ಕಾರು ಸೇತುವೆಗಳಿವೆ, ಅಲ್ಲಿ ಜನ ಸಂಚಾರಕ್ಕೆ ಅಗತ್ಯವಾಗಿರತಕ್ಕ ಕೆಲವು ರಸ್ತೆಗಳಿವೆ. ಅವುಗಳನ್ನುಮಾಡಿಸಿ ಕೊಡಬೇಕು ಎಂಬುದಾಗಿ ಮಾನ್ಯ ಲೋಕೋಪಯೋಗಿ ಶಾಖೆಯ ಸಚಿವರಿಗೆ ನಾನು ಪತ್ರ ಬರೆದಿದ್ದೆ. ಆದರೆ ಅವರು ಕಾಗದಕ್ಕೆ ಉತ್ತರವನ್ನೇನೋ ಬೇಗ ಕೊಡುತ್ತಾರೆ.

ಅಧ್ಯಕ್ಷರು.—ರಸ್ತೆಯನ್ನು ಮಾಡತಕ್ಕ ವಿಚಾರದಲ್ಲಿ ಮಂತ್ರಿಗಳು ತಡೆಹಿಡಿದಿದ್ದಾರೆಯೇ ?

ಶ್ರೀ ಎಸ್. ಎಸ್. ಕೊಳ್ಕೇಬೈರ್.—ನಾನೀಗ ಕೇಳುತ್ತಿರುವುದು ಸೇತುವೆಗಳ ವಿಷಯ. ನಾನು ಅವರಿಗೆ 20-12-64ರಲ್ಲಿ ಬರೆದಿದ್ದ ಕಾಗದಕ್ಕೆ ಉತ್ತರ ಬರೆದಿದ್ದಾರೆ. ನಾನು ನಮ್ಮ ಕ್ಷೇತ್ರವಾದ ಬ್ರಂಹಾವರದ ಬಗ್ಗೆ ಅಲ್ಲಿರತಕ್ಕದ್ದೆಲ್ಲಾ 5-6 ರಸ್ತೆಗಳು ಮತ್ತು 20-25 ಸಾರಿಗೆಗಳು ಮತ್ತು ಸೇತುವೆಗಳು. ಇವುಗಳ ಅನುಕೂಲವಿಲ್ಲದೆ ಅಲ್ಲಿಯ ಸಾರಿಗೆ ಸಂಪರ್ಕ ಬಹಳ ಕಷ್ಟವಾಗಿದೆ. ನಮ್ಮಲ್ಲಿ ಅತಿ ತುರ್ತಾಗಿ ಆಗಬೇಕಾದ 5-6 ಸಣ್ಣ ಸೇತುವೆಗಳ ಬಗ್ಗೆ ಬಜೆಟ್ಟಿನಲ್ಲಿ 5-6 ಲಕ್ಷ ರೂಪಾಯಿಗಳನ್ನು ಒದಗಿಸಿದರೆ ಸಾಕು. ಇಷ್ಟನ್ನಾದರೂ ಮಾಡಿಸಿ ಕೊಡಿ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಮನವಿಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಈ ಕೆಲಸಗಳನ್ನು ಬಿಟ್ಟರೇನೂ

ಕೇಳುವುದಕ್ಕೆ ಅವಕಾಶವೇ ಇಲ್ಲ, ಸುತ್ತಮುತ್ತಲೂ ಅಲ್ಲಿರತಕ್ಕದ್ದೆಲ್ಲಾ ಗುಡ್ಡಗಳು, ಪರ್ವತಗಳು, ಕಾಲುವೆಗಳು. ಆದರೆ ಈ ರಸ್ತೆ ಮತ್ತು ಸಾರಿಗೆಗಳ ಸೌಕರ್ಯವಿಲ್ಲದೆ ಜನರು ಬಹಳ ಕಷ್ಟದಲ್ಲಿದ್ದಾರೆ. ನನ್ನ ಕ್ಷೇತ್ರವಾದ ಬ್ರಹ್ಮಾವರದಲ್ಲಿ ಒಂದು ಬನ್ನಾಳಿ ಸೇತುವೆ ಎಂಬುದನ್ನು 62-63ರಲ್ಲೇ ಮಂಜೂರಾಗಿ ಆ ಬಡ್ಜೆಟ್ಟಿನಲ್ಲೇ ಸೇರಿಸಿದ್ದರು. ಆದರೆ ಇದನ್ನು ಇಲ್ಲಿಯವರೆಗೂ ಮಾಡಿಲ್ಲ. ಈ ಕೆಲಸವನ್ನು ತುರ್ತು ಪರಿಸ್ಥಿತಿಯ ನೆಪದಲ್ಲಿ ಡೆಫರ್ ಮಾಡಿದ್ದಾರೆ. ಈ ಬನ್ನಾಳಿ ಸೇತುವೆಯಿಂದ ಬಹಳ ಪ್ರಯೋಜನವಿದೆ. ಮೀನುಗಾರಿಕೆಯವರಿಗೆ ಬಹಳ ಅನುಕೂಲವಿದೆ, ಮೇಲಾಗಿ ಅಂಗಾರ ಕಟ್ಟೆ ಬಂದರಿಗೆ ಸಾಮಾನು ಸಾಗಿಸುವುದಕ್ಕೆ ಅನುಕೂಲವಾಗುತ್ತದೆ. ಹೀಗೆ ಒಂದು ದೂರ ದೃಷ್ಟಿಯಿಂದ ಈ ಒಂದು ರಸ್ತೆಯನ್ನು ಮಾಡಿದ್ದಾರೆ. ಆದರೆ ಈ ಬನ್ನಾಳಿ ಸೇತುವೆ ಇಲ್ಲದೆ ಇದು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಮಾಡಿಸಿದ್ದರೂ ಪ್ರಯೋಜನವಿಲ್ಲದಂತಾಗಿದೆ.

ಈ ಸೇತುವೆ ಕಟ್ಟಲು ಬಹಳ ಒಳ್ಳೆಯ ತಳಹದಿ ಉಂಟು, ಈ ಪ್ರಾಂತ್ಯದಲ್ಲಿ ಸಾರಿಗೆ ಸಂಪರ್ಕ ಇಲ್ಲದೆ 15-20 ಪಂಚಾಯ್ತಿಗಳಿಗೆ ಬಹಳ ಕಷ್ಟವಾಗಿದೆ. ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಪ್ರವಾಸ ಮಾಡಿದಾಗ ಆ ಪಂಚಾಯ್ತಿಗಳವರೆಲ್ಲರೂ ಬಂದು ಅವರಿಗೆ ಮನವಿಗಳನ್ನು ಅರ್ಪಿಸಿದ್ದಾರೆ. ಬಹುಶಃ ಅವು ಸಂಬಂಧಪಟ್ಟ ಇಲಾಖೆಗಳಿಗೆ ಹೋಗಿರಬಹುದು, ಹೋಗಿದ್ದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾವ ತರಹದ ಆಕ್ಷೇಪಣೆಗಳನ್ನು ಎತ್ತಿದ್ದಾರೋ ಗೊತ್ತಿಲ್ಲ. ಅದನ್ನು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬಂದರುಗಳ ಸಲುವಾಗಿ 280 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರೆ. ಆದರೆ ಅದರಲ್ಲಿ ಕೇವಲ 20 ಲಕ್ಷ ರೂಪಾಯಿಗಳು ಮಾತ್ರ ಖರ್ಚಾಗಿದೆ. ಮತ್ತು ಈ ಸಲ ಮಾನ್ಯ ಮಂತ್ರಿಗಳು ಆ ಬಗ್ಗೆ ಬರೀ 8 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈ ಸಮಯದಲ್ಲಿ ಅವರು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ಸಣ್ಣ ಬಂದರುಗಳ ದುರಸ್ತಿನ ಬಗ್ಗೆ ಮತ್ತು ಅವುಗಳನ್ನು ಒಳ್ಳೆಯ ಸ್ಥಿತಿಯಲ್ಲಿ ತರುವುದರ ಬಗ್ಗೆ ಕೇಳಿರತಕ್ಕ 8 ಲಕ್ಷ ರೂಪಾಯಿಗಳು ಸಾಕಾಗಲಿಕ್ಕಿಲ್ಲ. ಕೇಂದ್ರ ಸರ್ಕಾರದವರು 280 ಲಕ್ಷ ರೂಪಾಯಿಗಳನ್ನು ಸಹಾಯವಾಗಿ ಕೊಡಲಿಕ್ಕೆ ಸಿದ್ಧರಿದ್ದರೂ ಕೂಡ ಅದನ್ನು ಖರ್ಚು ಮಾಡದೇ ಇರುವುದಕ್ಕೆ ಕಾರಣ ವೇನು ? ನಾನು ಅದನ್ನು ಹೇಳಬೇಕೆಂದರೆ, ನನಗೆ ಗೊತ್ತಿರುವ ಹಾಗೆ ಅಲ್ಲಿ ಒಬ್ಬ ಪೋರ್ಟ್ ಡೆವಲಪ್‌ಮೆಂಟ್ ಆಫೀಸರು ಇದ್ದಾರೆ. ಅವರಿಗೆ ಟೆಕ್ನಿಕಲ್ ನಾಲೆಡ್ಜ್ ಇಲ್ಲ, ಅಂತಹವರನ್ನು ಇಲಾಖೆಯ ಮುಖ್ಯಾಧಿಕಾರಿಯನ್ನಾಗಿ ಹಾಕಿದರೆ ಯಾವ ಕೆಲಸವೂ ಆಗುವುದಿಲ್ಲ. ಆದ್ದರಿಂದ ಸರ್ಕಾರದವರಿಗೆ ತಮ್ಮ ಮೂಲಕ ವಿನಂತಿಸಿಕೊಳ್ಳುವುದೇನೆಂದರೆ, ಈ ಡಿಪಾರ್ಟ್‌ಮೆಂಟಿನ ಒಬ್ಬ ಚೀಫ್ ಇಂಜಿನಿಯರನ್ನು ಅಲ್ಲಿಗೆ ಕಳುಹಿಸಿಕೊಡಬೇಕು. ಬಂದರಿನ ವಿಷಯ ಏನೂ ತಿಳಿಯದೆ ಇರತಕ್ಕ ಬುದ್ಧಿ ಇಲ್ಲದ ಆಫೀಸರನ್ನು ಹಾಕಿದರೆ ಯಾವ ದುರಸ್ತಿನ ಕೆಲಸವೂ ಆಗುವುದಿಲ್ಲ. ಬರೀ 3 ಕೋಟಿ ರೂಪಾಯಿಗಳನ್ನು ಪೋರ್ಟ್‌ನ ಬಗ್ಗೆ ಇಟ್ಟುಕೊಂಡಿದ್ದೇವೆ ಎಂದು ಹೇಳುತ್ತಾ ಇರಬಹುದೇ ವಿನಾ ಇನ್ನೇನೂ ಪ್ರಯೋಜನವಾಗುವುದಿಲ್ಲ. ಅದರಲ್ಲಿ 10-20 ಲಕ್ಷ ರೂಪಾಯಿ ಸಹ ಖರ್ಚಾಗಿಲ್ಲ. ಖರ್ಚಾಗಿರುವುದೂ ಸಹ ಕೆಲವು ದೋಣಿಗಳನ್ನು ಕೊಟ್ಟಿದ್ದಾರೆ, ಕೆಲವರಿಗೆ ಸಾಲ ಕೊಟ್ಟಿದ್ದಾರೆ. ಅಷ್ಟೇ ವಿನಾ ಬೇರೆ ಯಾವುದಕ್ಕೂ ಖರ್ಚುಮಾಡಿಲ್ಲ, ಪ್ರಯೋಜನ ಸಿಕ್ಕಿಲ್ಲ. ನಾನೇ ಸ್ವತಃ ನೋಡಿದ್ದೇನೆ. ಕುಂದಾಪುರ ಪೋರ್ಟಿಗೆ ಟೆಂಡರ್ ಆಗಿವೆ. ಎರಡು ಮೂರು ವರ್ಷಗಳಾದರೂ ಕೂಡ ಇನ್ನೂ ದುರಸ್ತು ಆಗಿಲ್ಲ. ಆದ್ದರಿಂದ ಮಾನ್ಯಮಂತ್ರಿಗಳು ತೀವ್ರಕ್ರಮ ಕೈಕೊಂಡು ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿಗೆ ಇದನ್ನು ಸಂಪೂರ್ಣವಾಗಿ ವಹಿಸಿಕೊಟ್ಟರೆ ಬಂದರುಗಳು ಅಭಿವೃದ್ಧಿಯಾಗುತ್ತವೆಯೇ ಹೊರತು ಇಲ್ಲದೇ ಇದ್ದರೆ ಏನೂ ಅನುಕೂಲವಾಗುವುದಿಲ್ಲ. ಏನೂ ತಿಳಿಯದ ಆಫೀಸರನ್ನು ಕೊಟ್ಟರೆ ಯಾವ ಪ್ರಯೋಜನವೂ ಆಗುವುದಿಲ್ಲ ಎಂದು ಹೇಳುತ್ತೇನೆ ಮತ್ತು ನಾನು ಹೇಳಿದ ಪ್ರಾಜೆಕ್ಟ್‌ಗಳು ಮತ್ತು ಬನ್ನಾಳಿ ಬ್ರಿಡ್ಜ್ ಇವುಗಳನ್ನು ಮಾಡಿಸಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon anybody, I would like to say that if any Member wants to make specific allegations against any officer, he must come and tell me and the Hon'ble Minister so that the Minister may get all the information.

Sri S. S. KOLKE BAIL.—I have placed the facts. Here is an officer who has not spent any amount. Such officer should not be kept in a big department.

ಶ್ರೀ ಎಚ್. ಡಿ. ದೇವೇಗೌಡ.—ಈ ದಿವಸ ಡಿಮ್ಯಾಂಡ್ ನಂಬರ್ 6 ಮತ್ತು ಇನ್ನೂ ಅನೇಕ ಡಿಮ್ಯಾಂಡುಗಳನ್ನು ಈ ಸಭೆಯ ಒಪ್ಪಿಗೆ ಇಟ್ಟಿದ್ದಾರೆ. ಈ ಡಿಮ್ಯಾಂಡುಗಳ ಎಲ್ಲಾ ಮೊತ್ತವನ್ನೂ ಲೆಕ್ಕ ಹಾಕಿದರೆ ಸುಮಾರು... ..

Mr. SPEAKER.—I will give the member only 15 minutes.

ಶ್ರೀ ಎಚ್. ಡಿ. ದೇವೇಗೌಡ.—ಸುಮಾರು 72 ಕೋಟಿ 27 ಲಕ್ಷ 41 ಸಾವಿರದ 200 ರೂಪಾಯಿಗಳನ್ನು ಈ ಎಲ್ಲಾ ಬೇಡಿಕೆಗಳ ಮೂಲಕ ಈ ಸಭೆಯ ಒಪ್ಪಿಗೆಯನ್ನು ಕೇಳುವುದಕ್ಕೆ ಈ ದಿವಸ ಈ ಬೇಡಿಕೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಸ್ವಾಮಿ ನಾವು ಈ ದಿವಸ ಈ ಸಭೆಯಲ್ಲಿ ಕೊಟ್ಟಂತಹ ಕೆಲವು ಸಲಹೆಗಳನ್ನು ಸರ್ಕಾರ ಬಹಳ ತೀವ್ರವಾಗಿ ಆಲೋಚನೆ ಮಾಡಬೇಕಾದ್ದು ಸರ್ಕಾರದವರ ಕರ್ತವ್ಯ ಎಂದು ಹೇಳಿ ಅವರಿಗೆ ತಿಳಿಸಲು ಇಚ್ಛೆಪಡುತ್ತೇನೆ. ಆಗಿಂದಾಗ್ಗೆ ಈ ಮಾನ್ಯ ಸಭೆಯಲ್ಲಿ ಈ ಆಯವ್ಯಯದ ಮೇಲೆ ಮಾತನಾಡತಕ್ಕ ಕಾಲದಲ್ಲಿ ಅನೇಕ ಸಲಹೆಗಳನ್ನು ಕೊಟ್ಟಿದ್ದೇವೆ. ಅವನ್ನು ಮಾನ್ಯಮಂತ್ರಿಗಳು ಸ್ವಾಗತಿಸಿದ್ದೂ ಸಹ ಕಾರ್ಯಗತ ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಅದನ್ನು ಮಾನ್ಯಮಂತ್ರಿಗಳ ಉತ್ತರದಲ್ಲಿ ತಿಳಿಸಬೇಕೆಂದು ಕೇಳಿಕೊಂಡು ನನ್ನ ಒಂದೆರಡು ಮಾತುಗಳನ್ನು ಆಡಲು ಇಚ್ಛೆಪಡುತ್ತೇನೆ. ಈ ದಿವಸ ಜನರಲ್ ಅಡ್ಮಿನ್‌ಸ್ಟ್ರೇಷನ್ ಬಗ್ಗೆ ಸುಮಾರು 3 ಕೋಟಿ 25 ಲಕ್ಷ 87 ಸಾವಿರ ರೂಪಾಯಿಗಳನ್ನು ಖರ್ಚುಮಾಡತಕ್ಕ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅನೇಕ ಜನರು ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಇವತ್ತು ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಆಗಿಲ್ಲ ಎಂದು ಹೇಳಿ ಅನೇಕ ಇಲಾಖೆಗಳ ಅಧಿಕಾರಿಗಳಲ್ಲಿ ಅಸಮ್ಮತಿ ಇದೆ. ಅದನ್ನು ಚರ್ಚೆ ಮಾಡುವುದಕ್ಕೆ ನಾನು ಈ ಸಂದರ್ಭದಲ್ಲಿ ಇಚ್ಛೆಪಡುತ್ತೇನೆ. ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಮಾಡುವುದರಲ್ಲಿ ಬಹಳ ಅತೃಪ್ತಿ ಇದೆ. ಅಧಿಕಾರಿಗಳಲ್ಲಿ ಲೋಪದೋಷ ಇರಬಹುದು. ಆದರೂ ಕೂಡ ಕೆಲವು ಸಂದರ್ಭದಲ್ಲಿ ಮಂತ್ರಿಗಳು ತಮ್ಮ ಅನುಕೂಲ ದೃಷ್ಟಿಯಿಂದ ಮಾಡಿರತಕ್ಕ ಸನ್ನಿವೇಶ ಈ ಅಧಿಕಾರ ವರ್ಗದಲ್ಲಿ ಕಂಡು ಬರುತ್ತದೆ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಯಾರುಮಾಡತಕ್ಕ ಕಾಲದಲ್ಲಿ ಕೆಲವಕ್ಕೆ ಮಾನ್ಯತೆಯನ್ನು ಕೊಡತಕ್ಕ ಅಂಶ ಕಂಡುಬಂದಿದೆ. ಅದು ಏನೆಂದರೆ ಡೇಟ್ ಆಫ್ ಜಾಯಿನಿಂಗ್ ಸರ್ವೀಸ್, ಡೇಟ್ ಆಫ್ ಹೋಲ್ಡಿಂಗ್ ಗಜೆಟೆಡ್ ಪೋಸ್ಟ್ ಮತ್ತು ಡೇಟ್ ಆಫ್ ಡ್ರಾಯಿಂಗ್ ದಿ ಹೈಯೆಸ್ಟ್ ಸ್ಕೇಲರಿ, ಹೀಗೆ ತಗೆದುಕೊಳ್ಳುವುದರಲ್ಲಿ ತಮಗೆ ಯಾವ ರೀತಿ ಅನುಕೂಲವಾಗುತ್ತದೆ. ಆ ರೀತಿ ತಮಗೆ ಬೇಕಾದವರಿಗೆ ಅವಕಾಶವನ್ನು ಕಲ್ಪಿಸಿಕೊಡತಕ್ಕ ಒಂದು ಅಂಶವನ್ನು ಇಟ್ಟುಕೊಂಡು ಕೆಲಸ ಮಾಡುವುದು, ಆ ರೀತಿ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಯಾರುಮಾಡುವುದು ವ್ಯಕ್ತಪಟ್ಟಿದೆ. ಇದರಿಂದ ಬಹಳ ಜನ ಅಧಿಕಾರಿಗಳಿಗೆ ಅವರಿಗೆ ಯಾವ ಒಂದು ನ್ಯಾಯ ದೊರೆಯಬೇಕಾಗಿತ್ತೋ, ಯಾವ ಒಂದು ಸೌಲಭ್ಯ ದೊರೆಯಬೇಕಾಗಿತ್ತೋ, ಯಾವ ಒಂದು ಹಕ್ಕುಬಾಧ್ಯತೆ ದೊರೆಯಬೇಕಾಗಿತ್ತೋ ಅದು ದೊರೆಯದೆ ಅವರಲ್ಲಿ ಬಹಳ ನಿರಾಶೆಯುಂಟಾಗಿ ತಮ್ಮ ಒಂದು ಕಾರ್ಯವನ್ನು ಮಾಡತಕ್ಕ ಕಾಲದಲ್ಲಿ ಬಹಳ ನಿರಾಶೆಯನ್ನು ಹೊಂದಿರುವುದು ಕಂಡುಬರುತ್ತಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಹಾಗೆಯೇ ಟ್ರಾನ್ಸ್‌ಫರ್ ಮತ್ತು ಎಕ್ಸ್‌ಟೆನ್‌ಷನ್ ಕೊಡುವುದರಲ್ಲಿ ಸರ್ಕಾರ ಒಂದು ಸರಿಯಾದ ಧೋರಣೆಯನ್ನು ಹಾಕಿಕೊಂಡಿಲ್ಲ ಎಂದರೆ ತಪ್ಪಾಗಲಾರದು. ಕೆಲವರಿಗೆ ಅವರು ರಿಟೈರ್ ಆಗತಕ್ಕ ಕಾಲದಲ್ಲಿ ಎಕ್ಸ್‌ಟೆನ್‌ಷನ್ ಕೊಡುವುದಿಲ್ಲ ಎಂದು ಕಡ್ಡಾಯವಾಗಿ ತಿಳಿಸುತ್ತೀರಿ. ಮತ್ತೆ ಕೆಲವರಿಗೆ ಎಕ್ಸ್‌ಟೆನ್‌ಷನ್ ಕೊಡುತ್ತೀರಿ. ಯಾವ ಒಂದು ರೀತಿ ನೀತಿ, ನಿಯಮ ಇದೆ ಎನ್ನುವುದು ಗೊತ್ತಾಗುವುದಿಲ್ಲ. ಕೆಲವು ಕಡೆ ಟೆಕ್ನಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ, ಅದೇ ರೀತಿ ನಾನ್‌ಟೆಕ್ನಿಕಲ್ ಡಿಪಾರ್ಟ್‌ಮೆಂಟಿನಲ್ಲೂ ಕೂಡ ಕೆಲವರಿಗೆ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೀರಿ ಇದಕ್ಕೆ ಕಾರಣವೇನು ? ಸರ್ಕಾರದಲ್ಲಿ ಈ ಬಗ್ಗೆ ಸರಿಯಾದ, ನಿರ್ದಿಷ್ಟವಾದ ನೀತಿ ಇಲ್ಲವೇ ? ಕೆಲವು ರಾಜಕೀಯ ಒತ್ತಡಕ್ಕೆ, ಪ್ರಭಾವಕ್ಕೆ ಒಳಗಾಗುವುದು ಇದರಿಂದ ವ್ಯಕ್ತವಾಗುತ್ತದೆ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಜನರಲ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಖರ್ಚಾಗತಕ್ಕ ಹಣ ನಿಜವಾಗಿಯೂ ರೈತನಿಗೆ ನ್ಯಾಯವನ್ನು ದೊರಕಿಸಿಕೊಡತಕ್ಕ ರೀತಿಯಲ್ಲಿ ಆಡಳಿತ ನಿರ್ವಹಣೆಯಾಗಬೇಕು. ಇವತ್ತಿನ ದಿವಸ ಯಾವ ಇಲಾಖೆಯ ಅಧಿಕಾರಿಯನ್ನು ನೋಡಿದರೂ ಕೂಡ ಕೋರ್ಟುಗಳ ಮುಂದೆ ಹೋಗಿ ತಮ್ಮ ಹಕ್ಕನ್ನು ದೊರಕಿಸಿಕೊಳ್ಳುವುದರ ಬಗ್ಗೆ, ಹೋರಾಟ ಮಾಡುತ್ತಾ ಇರುವುದು ಕಂಡುಬರುತ್ತಾ ಇದೆ. ಈ ರೀತಿ ಅವರು ತಮ್ಮ ಒಂದು ಹಕ್ಕನ್ನು ಸ್ಥಿರಪಡಿಸಿಕೊಳ್ಳುವುದಕ್ಕೆ ನ್ಯಾಯಾಲಯಗಳ ಮುಂದೆ ಹೋಗತಕ್ಕ ಸನ್ನಿವೇಶವನ್ನು ಕಲ್ಪನೆ ಮಾಡುತ್ತಾ ಇರುವುದರಿಂದ ಈ ಇಲಾಖೆಗಳಲ್ಲಿ ಸರಿಯಾಗಿ ಕೆಲಸ ಮಾಡುತ್ತಾ ಇಲ್ಲ ಎಂಬುದು ವ್ಯಕ್ತವಾಗುತ್ತದೆ. ಇವತ್ತು ಅರಣ್ಯ ಇಲಾಖೆಯನ್ನು ತಗೆದುಕೊಳ್ಳಿ, ಬೊಂಬಾಯಿ

ಕರ್ನಾಟಕದವರು ಒಂದು ಕಡೆ, ಹಳೇ ಮೈಸೂರಿನವರು ಒಂದು ಕಡೆ ಹೀಗೆ ಅಧಿಕಾರಿಗಳಲ್ಲಿ ಎರಡು ಪಾರ್ಟಿಯಾಗಿ ನ್ಯಾಯಾಲಯದ ಮುಂದೆ ಕುಳಿತಿರುವುದು ನಿಜವಾಗಿಯೂ ಶೋಚನೀಯವಾದ ವಿಚಾರ. ಜನರಲ್ ಅಡ್ಮಿನಿಸ್ಟ್ರೇಷನ್‌ನ ಆಡಳಿತವನ್ನು ಹಿಡಿದಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ಇಂತಹ ಅನ್ಯಾಯವಾಗುವುದಕ್ಕೆ ಅವಕಾಶ ಕೊಡಬಾರದು ಎಂದು ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಅಧಿಕಾರಿಗಳ ಎನರ್ಜಿ ಮತ್ತು ಕಾಲವೆಲ್ಲಾ ಇದರಲ್ಲೇ ವ್ಯರ್ಥವಾಗುವುದಕ್ಕೆ ಸರ್ಕಾರ ಅವಕಾಶಕೊಡಬಾರದು. ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಗಮನ ಕೊಡಬೇಕು. ಈಗಾಗಲೇ ಕೆಟ್ಟ ಹೆಸರು ಬಂದಿದೆ, ಈ ಆಡಳಿತದ ಬಗ್ಗೆ ಒಂದು ಬಲಹೀನತೆ ಇದೆ ಎಂದು ಹೇಳುತ್ತಾ ಇರುವುದನ್ನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗುತ್ತದೆ. ಅನೇಕ ಆರ್ಡರುಗಳನ್ನು ಮಾಡುತ್ತಾರೆ, ಮತ್ತೆ ಅವುಗಳು ಬದಲಾವಣೆಯಾಗತಕ್ಕ ಸಂದರ್ಭಗಳು ಅನೇಕವು ಕಂಡುಬರುತ್ತವೆ. ಯಾವ ತತ್ವದ ಆಧಾರದ ಮೇಲೆ, ನೀತಿಯ ಆಧಾರದ ಮೇಲೆ ಆಗಲಿ ಅವನ್ನು ಅನುಸರಿಸಿ ಮಾಡದೇ ಅವು ಕೇವಲ ರಾಜಕೀಯ ಒತ್ತಡದಿಂದ ಮಾಡತಕ್ಕ ಹುಕುಂಗಳು ಅವು ಆಗಿವೆ. ಅಂಥದಕ್ಕೆ ಜಗ್ಗಬಾರದು ಅವಕಾಶ ಕೊಡಬಾರದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಲಂಚದ ಹಾವಳಿ ಬಗ್ಗೆ ಕೆಲವು ಮಾತುಗಳನ್ನು ಹೇಳಿ ಅದು ಯಾವರೀತಿ ತಡೆಗಟ್ಟಲ್ಪಡುತ್ತದೆಂಬುದನ್ನು ತಿಳಿಯಬೇಕಾಗಿದೆ. ಈಗಾಗಲೆ ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದ್ದಾರೆ. ಅದು ಅಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆ ಸುಧಾರಣೆ ಎಷ್ಟರಮಟ್ಟಿಗಾಗಿದೆ ಎಂಬುದನ್ನು ಹೇಳಬೇಕು. ಈಗಾಗಲೆ ಆಂಟಿ-ಕರಪ್‌ಷನ್ ಇಲಾಖೆ ಇದ್ದಾಗೂ ಸಹ ಅದರಿಂದ ಸಾಕಷ್ಟು ಸುಧಾರಣೆಯಾಗಿರುವುದಿಲ್ಲ.

5-30 P. M.

ಜನರಲ್ ಅಡ್ಮಿನಿಸ್ಟ್ರೇಷನ್ ಬಾಬಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಯನ್ನು 63 ಕೋಟಿ ರೂಪಾಯಿ ಖರ್ಚುಮಾಡುವ ಇಲಾಖೆಯನ್ನು ಕಟುವಾಗಿ ಟೀಕಿಸಬೇಕಾಗಿದೆ. ಮೈನರ್ ಇರಿಗೇಷನ್ ಬಗ್ಗೆ ಒಬ್ಬೊಬ್ಬ ಮಂತ್ರಿಗಳು ಒಂದೊಂದು ರೀತಿಯಲ್ಲಿ ಹೇಳುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆ, ಆರ್ಥಿಕ ಸಚಿವರು ಒಂದು ರೀತಿ, ಉಪಮಂತ್ರಿಗಳೇ ಒಂದು ರೀತಿ ಅವರವರ ಧಾಟಿಯಲ್ಲಿ ಹೇಳುತ್ತಿದ್ದಾರೆ. ಕೆಲವು ಅಂಶಗಳನ್ನು ಗಮನಕ್ಕೆ ತರುತ್ತೇನೆ. ಮೈನರ್ ಇರಿಗೇಷನ್ ಕೆಲಸದ ಬಗ್ಗೆ ಅನೇಕ ನಿಯಮಗಳಿವೆ. 20 ಸಾವಿರ ರೂಪಾಯಿಗಳೊಳಗಿರುವ ಕೆಲಸಗಳನ್ನು ಅಧಿಕಾರಿಗಳು ಮಂಜೂರು ಮಾಡುವ ಬಗ್ಗೆ ಕೆಲವು ನಿರ್ಬಂಧಗಳಿವೆ ಎಂದು ಹೇಳುತ್ತಾರೆ. ಅದಕ್ಕೆ ಕಾರಣ ಮನಬಂದಹಾಗೆ ಹೆಚ್ಚು ಕೆಲಸಗಳನ್ನು ಮಂಜೂರು ಮಾಡುವುದು, ಹಣಕಾಸಿನ ಹಿಡಿತವಿಲ್ಲದಿರುವುದರ ಕಾರಣ ಇವತ್ತು ಎಗ್ಜಿಕ್ಯುಟಿವ್ ಎಂಜಿನಿಯರು, ಸೂಪರಿಂಟೆಂಡಿಂಗ್ ಎಂಜಿನಿಯರು ಮತ್ತು ಚೀಫ್ ಎಂಜಿನಿಯರುಗಳಿಗೆ ಕೊಟ್ಟಿರುವ ಅಧಿಕಾರವನ್ನು ವಾಪಸು ಪಡೆದಿದ್ದಾರೆ. ನಮ್ಮ ಬಡ್ಜೆಟ್ಟೆಲ್ಲಾ ನೋಡಿದೆ, ಅನೇಕ ಕಡೆ ಲಂಪ್‌ಸಂ ಹಣ ಒದಗಿಸಿದ್ದಾರೆ. ಇವತ್ತು ಬಡ್ಜೆಟ್ಟಿನಲ್ಲಿರುವ 2 ಲಕ್ಷದ ಕೆಲಸವನ್ನು ಸೂಪರಿಂಟೆಂಡಿಂಗ್ ಎಂಜಿನಿಯರು, 10 ಲಕ್ಷದವರೆಗಿನದನ್ನು ಚೀಫ್ ಎಂಜಿನಿಯರು, 50 ಸಾವಿರದವರೆಗಿರುವುದನ್ನು ಎಗ್ಜಿಕ್ಯುಟಿವ್ ಎಂಜಿನಿಯರು ಮಂಜೂರು ಮಾಡುವುದಕ್ಕೆ ಅವಕಾಶವಿತ್ತು. ಈಗ ಆ ಅಧಿಕಾರ ಕಿತ್ತುಕೊಂಡು 20 ಸಾವಿರದೊಳಗಿರುವುದನ್ನು ಸರಕಾರ ಒಪ್ಪಬೇಕಾಗಿರುವುದರಿಂದ ಎಲ್ಲಾ ಅಧಿಕಾರ ಸರಕಾರದ ಕೈಲಿದೆ. ಅದರಿಂದ ಸರಕಾರ ತನ್ನ ಮನಬಂದಹಾಗೆ ಅಂದಾಜನ್ನು ಮಂಜೂರುಮಾಡಬಹುದು, ಅದಕ್ಕೆ ಅವಕಾಶವಾಗಿದೆ. ಇದರಲ್ಲಿ ಲೋಪದೋಷವಿದೆ. ಕೆಲವು ಡಿವಿಜನ್ನುಗಳ ಬಗ್ಗೆ ವರ್ಕ್‌ಲೋಡ್ ನೋಡಬೇಕು. ಹಾಸನ ಡಿವಿಜನ್‌ಗೆ ಒಂದೇ ಒಂದು ಕೆಲಸಕ್ಕೆ ಬಡ್ಜೆಟ್ಟಿನಲ್ಲಿ ಅವಕಾಶಮಾಡಿದ್ದಾರೆ. ಉದಾಹರಣೆಗೆ ಇದನ್ನು ಹೇಳುವುದು. ಯಾರಿಗೂ ಅನ್ಯಾಯವಾಗಬಾರದು. 100 ಕ್ಯಾಪಿಟಲ್ ಔಟಲೆ ಬಾಬಿನಲ್ಲಿ ನೆಲವಾಗಲು ಗ್ರಾಮ ಅರಕಲಗೂಡು ತಾಲ್ಲೂಕುಗಳಿಗೆ ಒಂದು ಲಕ್ಷ ಚಿಲ್ಲರೆ ಕೆಲಸಕ್ಕೆ ಅವಕಾಶಮಾಡಿದ್ದಾರೆ. ಅದೇ ಬೇರೆ ಡಿವಿಜನ್ನುಗಳಲ್ಲಿ ಸುಮಾರು 20-30 ಕೆಲಸಗಳಿಗೆ ಅವಕಾಶಮಾಡಿದ್ದಾರೆ. ಅಪೂರ್ಣವಾಗಿರುವ ಕೆಲಸಗಳಿಗೆ ಮಾತ್ರ ಒದಗಿಸಲಾಗಿದೆ ಎಂದು ಕೇಳಿದರೆ ಹೇಳುತ್ತಾರೆ. ಅಪೂರ್ಣ ಕೆಲಸಗಳೆಂದರೆ ಉಪಯೋಗವಾಗುವುದು ನಿಜ. ಆದರೆ ಅಧಿಕಾರಿಗಳಿಗಿದ್ದ ಪವರನ್ನು ಮಂತ್ರಿಗಳಿಟ್ಟುಕೊಂಡರೆ ಈಗಿರುವ ಪಟ್ಟಿ ಹೊಸ ಕೆಲಸಗಳ ಪಟ್ಟಿ ಮಾಡಿ ಲಂಪ್‌ಸಂ ಪ್ರಾವಿಷನ್ ಮಾಡುವುದರಿಂದ ಬಡ್ಜೆಟ್ಟಿನಲ್ಲಿ ಈ ವರ್ಷ ತೋರಿಸಿರುವ ಕೆಲಸಕ್ಕೆ ಮುಂದಿನ ವರ್ಷ ತಾವು spillover work ಎಂದು ಅವಕಾಶ ಕೊಡಬಹುದು; ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಒದಗಿಸಬಹುದು. ಹೀಗೆ ಮಾಡಿ ಮುಂದಿನ ಬಡ್ಜೆಟ್ಟಿನಲ್ಲಿ ಸೇರಿಸಿರುವ ಅನುಭವ ನಮಗಿದೆ. ಈ ಸಂಬಂಧದಲ್ಲಿ ಸರಕಾರ ಅನುಸರಿಸುವ ತತ್ವವೇನು ಎಂಬುದನ್ನು ಹೇಳಬೇಕು. ಲಂಪ್‌ಸಂ ಪ್ರಾವಿಷನ್ ಒದಗಿಸುವುದೇಕೆ ?

(ಶ್ರೀ ಎಚ್. ಡಿ. ದೇವೇಗೌಡ)

ಹೇಗೆ ಒಂದು ಡಿವಿಜನ್ನಿನಲ್ಲಿ ಮಾಡುವುದಾದರೆ ಉಳಿದ ಡಿವಿಜನ್ನುಗಳಲ್ಲೂ ಅದೇ ರೀತಿ ಮಾಡಬೇಕು. ಈ ದಿವಸ ಅಧಿಕಾರಿಗಳಿಗಿದ್ದ ಅಧಿಕಾರವನ್ನು ಕಿತ್ತುಕೊಂಡಿರುವುದು ಸಂಶಯಕ್ಕೆ ಎಡೆಮಾಡಿದೆ, ಅದಕ್ಕೆ ತಕ್ಕ ಸಮಾಧಾನ ಹೇಳಬೇಕು. ಕೆಲವು ಡಿವಿಜನ್ನುಗಳನ್ನು ಕೆಲಸಗಳನ್ನು ತೆಗೆದುಕೊಂಡಿಲ್ಲ, ಕೆಲವು ಕಡೆ ಜಾಸ್ತಿ ತೆಗೆದುಕೊಂಡಿದ್ದಾರೆ. ಕೆಲವು ಕಡೆ ಮಂಜೂರಾಗುವುದಕ್ಕೆ ಮುಂಚೆಯೇ ಕೆಲಸ ತೆಗೆದುಕೊಂಡಿದ್ದಾರೆ ಮತ್ತೆ ಕೆಲವು ಕಡೆ ಮಂಜೂರಾಗಿಲ್ಲ ಎಂದು ನಿಧಾನಮಾಡುತ್ತಿದ್ದಾರೆ. ಹೀಗೇಕೆ ಮಾಡಬೇಕು. 3 ವರ್ಷಗಳವರೆಗೆ ಯಾವ ಕೆಲಸವನ್ನೂ ಮಂಜೂರು ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳಿದ್ದಾರೆ. ಫ್ಲಡ್ ಡ್ಯಾಮೇಜ್‌ನಿಂದ ತೊಂದರೆಯಾಗಿರುವುದನ್ನು ಸರಿಪಡಿಸುವ ಕೆಲಸ ತೆಗೆದುಕೊಳ್ಳುವುದು ಹಣ ಬರುವುದರಮೇಲೆ ಅವಲಂಬಿಸಿದೆ ಎಂದು ಅರ್ಥ ಸಚಿವರು ಹೇಳಿದರು. ಅಂಥಾದ್ದಕ್ಕೆ ಹಣ ಕೊಡುವುದಕ್ಕಾಗುವುದಿಲ್ಲಎಂದು ಹೇಳಿದರೆ ಇಲಾಖೆ ಏಕೆ ಇಟ್ಟುಕೊಳ್ಳಬೇಕೆಂದು ಪ್ರಶ್ನೆಮಾಡ ಬೇಕಾಗುತ್ತದೆ. ಕೆರೆಗಳ ಜೀರ್ಣೋದ್ಧಾರ ಮಾಡಲು ಅಥವ ಹೊಸ ಕೆರೆ ಕಟ್ಟಲು ಹಣದ ಅಭಾವವಿದೆ ಎಂದು ಹೇಳಬಹುದು. ಆದರೆ ಡ್ಯಾಮೇಜ್ ಆದಾಗ, ಅವಶ್ಯಕವಾದ ಕೆಲಸ ಮಾಡಬೇಕಾದಾಗ ಅದನ್ನು ಹಣದ ಅನುಕೂಲತೆಮೇಲೆ ತೆಗೆದುಕೊಳ್ಳುವುದು ಬಿಡುವುದು ಯೋಜನೆಮಾಡಬೇಕಾಗುತ್ತದೆ ಎಂದು ಹೇಳುವುದು ಸರಿಯಾಗಿ ಕಾಣುವುದಿಲ್ಲ, ಅದು ಸಾಧುವಾದ ಉತ್ತರವಲ್ಲ. ಜನರಿಗೆ ಹಣವೆಲ್ಲಾ ಎಲ್ಲೋ ಕೆಲವು ಕಡೆಗಳಲ್ಲಿ ಮಾತ್ರ ಖರ್ಚಾಗುತ್ತಿದೆ ಎಂಬ ಭಾವನೆ ಬರುವುದಕ್ಕೆ ಅವಕಾಶ ಕೊಡಬಾರದು, ಇದಕ್ಕೆ ಸರಕಾರ ಬಹಳ ಗಮನ ಕೊಡುವುದು ಸೂಕ್ತ. ಹಾಸನ ಡಿವಿಜನ್ನಿನಲ್ಲಿ ತೆಗೆದುಕೊಳ್ಳಲು ಅವಕಾಶಮಾಡಿರುವ ಕೆಲಸ ನೋಡಿದರೆ ಬಹಳ ವ್ಯಥೆಯಾಗುತ್ತದೆ. ಇದಕ್ಕೆ ಕಾರಣ ಗೊತ್ತಿಲ್ಲ.

ಇನ್ನೊಂದು ಮೇಜರ್ ಮತ್ತು ಮೈನರ್ ಇರಿಗೇಷನ್ ಬಗ್ಗೆ ಸರಕಾರ ಯಾವರೀತಿ ಕೆಲಸ ಮಾಡುತ್ತಿದೆಯೋ ಗೊತ್ತಿಲ್ಲ. ಮುಖ್ಯಮಂತ್ರಿಗಳಿಗೆ ಆಸಕ್ತಿ ಹೆಚ್ಚಾಗಿರಬಹುದು ಕಾವೇರಿ ನದಿಯ ಪೂರ್ಣ ನೀರನ್ನು ಉಪಯೋಗಿಸಿ ಕೊಳ್ಳುವುದರ ಬಗ್ಗೆ ತಂದ ಖಾಸಗಿ ನಿರ್ಣಯ ಕೆಳೆದಸಾರಿ ಚರ್ಚೆಗೆ ಬಂದಾಗ ಕೊಟ್ಟ ಆಶ್ವಾಸನೆಯ ವಿತ್‌ಡ್ರಾ ಮಾಡಿದೆ ಎಷ್ಟರ ಮಟ್ಟಿಗೆ ಅದನ್ನು ಈಡೇರಿಸಿದ್ದಾರೆ ಎಂಬುದನ್ನು ಹೇಳಬೇಕು. ಹಾರಂಗಿ, ಕಬಿನಿ, ಕಡ ಮುಂತಾದ 13 ಯೋಜನೆಗಳನ್ನು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಕೊಳ್ಳಬೇಕಾಗಿತ್ತು. 1924 ರಲ್ಲಿ ಮದ್ರಾಸಿನೊಡನೆ ಆದ ಒಪ್ಪಂದದ ಪ್ರಕಾರ 1974 ರೊಳಗಾಗಿ ಕೆಲವು ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ಹಾಗೆ ಮಾಡಿರುವುದಿಲ್ಲ. ನಮ್ಮ ಹಕ್ಕನ್ನು ಉಳಿಸಿಕೊಳ್ಳುವ ಬಗ್ಗೆ ಯಾವಯಾವ ಯೋಜನೆ ಕಾರ್ಯಗತಮಾಡಲು ಎಷ್ಟುಮಟ್ಟಿಗೆ ಸಾಧ್ಯವಾಗಿದೆ ಎಂಬುದನ್ನು ತಿಳಿಸಬೇಕು. ಇದನ್ನೇಕೆ ಹೇಳುವುದೆಂದರೆ ಇವತ್ತು ಬಜೆಟ್ಟಿನಲ್ಲಿ ಕಾವೇರಿ ಬೇಸಿನ್ನಿನ ಯೋಜನೆಗಳಿಗೆ ಕೇವಲ ಒಂದು ಲಕ್ಷ 85 ಸಾವಿರ ಒದಗಿಸಿದ್ದಾರೆ. ಇಷ್ಟು ಕಡಮೆ ಹಣ ಕೊಟ್ಟಿರುವುದರಿಂದ ಸರಕಾರಕ್ಕೆ ಈ ಯೋಜನೆಗಳ ಬಗ್ಗೆ ಅಷ್ಟು ಆಸಕ್ತಿಯಿಲ್ಲ ಎಂಬ ಸಂಶಯ ಬರುತ್ತಿದೆ. ನಾನು ಸರಕಾರವನ್ನು ಟೀಕೆಮಾಡುವುದಿಲ್ಲ. ಟೆಕ್ನಿಕಲ್ ಕ್ಲಿಯರೆನ್ಸ್ ಪಡೆಯುವ ವಿಷಯದಲ್ಲಿ, ಕೇಂದ್ರ ಸರಕಾರದಿಂದ ಹಣ ಪಡೆಯುವುದರಲ್ಲಿ ಸರಕಾರ ಹೆಚ್ಚು ಆಸಕ್ತಿವಹಿಸಿದಂತೆ ಕಾಣುವುದಿಲ್ಲ ಅದರಂತೆ ಮಾನ್ಯ ಮುಖ್ಯ ಮಂತ್ರಿಗಳೂ ಸಹ ಅನೇಕ ಸಾರಿ ಇದರ ಬಗ್ಗೆ ಭರವಸೆಯನ್ನೂ ಕೊಟ್ಟಿದ್ದರು. ಆದರೆ ಹಣದ ಮುಗ್ಗಟ್ಟಿನಿಂದಲೋ ಏನೋ ಇನ್ನೂ ಆಗಲಿಲ್ಲ. ಇನ್ನು ಮುಂದಾದರೂ ಇದಕ್ಕೆ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಆಶಿಸುತ್ತೇನೆ. ಈ ಸಂದರ್ಭದಲ್ಲಿ ಸರಕಾರಕ್ಕೆ ಒಂದು ವಿಷಯವನ್ನು ಇಲ್ಲಿ ತಿಳಿಸಬಚ್ಛಿಸುತ್ತೇನೆ. ಕಾವೇರಿ ಬೇಸಿನ್‌ನನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಒಂದು ಕಾರ್ಪೊರೇಷನ್ ಎಂದು ಬೇಕಾದರೆ ಮಾಡಲಿ. ಏಕೆಂದರೆ ಈ ದಿವಸ ಸರಕಾರದಲ್ಲಿ ಹಣದ ಅಭಾವವು ಇದೆ. ಹಿಂದೆ ದಾಮೋದರ್ ವ್ಯಾಲಿ ಪ್ರಾಜೆಕ್ಟಿನ ಕಾಮಗಾರಿ ಮಾಡುವುದಕ್ಕಾಗಿ ದಾಮೋದರ ವ್ಯಾಲಿ ಕಾರ್ಪೊರೇಷನ್ ಎಂದು ಮಾಡಿ ಅದರ ಸುಪರ್ದಿಯಲ್ಲಿ ಬರುವ ನೀರಾವರಿ ಕೆಲಸಗಳನ್ನು ಮಾಡಲು ಅನುಕೂಲ ಮಾಡಿಕೊಂಡಿದ್ದರು. ಅದರಂತೆ ಕಾವೇರಿ ಬೇಸಿನ್‌ನಲ್ಲಿಯೂ ಕೂಡ ಒಂದು ಕಾರ್ಪೊರೇಷನ್ ಮಾಡಿ ಅದರ ಮೂಲಕ ಹಣವನ್ನು ಪಡೆದು ಎಲ್ಲೆಲ್ಲಿ ಇರಿಗೇಷನ್ನು ಪ್ರಾಜೆಕ್ಟುಗಳನ್ನು ಮಾಡಲು ಸಾಧ್ಯವೋ ಅವನ್ನೆಲ್ಲಾ ಮಾಡುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಮಾಡುವುದಕ್ಕೆ ಅವಕಾಶವಿದೆ. ಇದರಿಂದ ವ್ಯವಸಾಯ ಮಾಡುವ ಜನರ ಕಷ್ಟವೂ ನಿವಾರಣೆಯಾದಂತಾಗುತ್ತದೆ. ಇದನ್ನು ಮಾಡುವುದು ಸೂಕ್ತ. ಇದು ಬಹಳ ಅತ್ಯಾವಶ್ಯಕವಾದುದು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಈಗ ನಮ್ಮ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ಇಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು

ಆಶಿಸುತ್ತೇನೆ. ನಮ್ಮ ದೇಶದಲ್ಲಿ ಜನತೆಗೆ ಉಪಯುಕ್ತವಾದ ಏನಾದರೂ ಕೆಲಸಕಾರ್ಯಗಳು ನಡೆಯಬೇಕಾದರೆ ಪಿ.ಡಬ್ಲ್ಯು.ಡಿ. ಇಲಾಖೆಯಂತಹ ಒಂದು ಇಲಾಖೆ ಬಹಳ ಅವಶ್ಯಕವಾದ ಇಲಾಖೆಯಾಗಿದೆ. ನಮ್ಮ ದೇಶದಲ್ಲಿ ಅದರಲ್ಲೂ ನಮ್ಮ ಮಲೆನಾಡು ಜಿಲ್ಲೆಗಳಲ್ಲಿ ನೀರಾವರಿ ಯೋಜನೆಗಳನ್ನು ಮಾಡಲು ಹೊಡ್ಡ ದೊಡ್ಡ ಕಾಮಗಾರಿಗಳನ್ನು ಮಾಡುವುದು ಕಷ್ಟವಾಗಿರುತ್ತದೆ. ಇಲ್ಲಿರುವ ಗುಡ್ಡ ಬೆಟ್ಟಗಳ ಕೆಳಗೆ ನದಿಗಳು ಹುಟ್ಟಿ ನೀರು ಹರಿಯುತ್ತ ಬರುವುದರಿಂದ ಅಲ್ಲಲ್ಲಿ ನೀರಾವರಿ ಕೆಲಸಗಳನ್ನು ಮಾಡುವುದು ಬಹಳ ಕಷ್ಟ. ಅನೇಕ ಕಡೆಗಳಲ್ಲಿ ಇರುವಂತಹ ಕೆರೆ ಕಟ್ಟೆಗಳು ಹೇಗಿವೆ ಎನ್ನುವುದರ ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಸರಕಾರದವರು ಆಗಿಂದಾಗ್ಗೆ ವರದಿಗಳನ್ನು ತರಿಸಿಕೊಂಡು ಅದರ ಪ್ಲಾನು ಹಾಗು ಎಸ್ಟಿಮೇಟುಗಳನ್ನು ಮಾಡಿ ಅಲ್ಲಲ್ಲಿ ಕೆಲಸಗಳನ್ನು ಮಾಡಬೇಕೆಂದು ದೊಡ್ಡ ಕೆರೆಗಳ ಕೆಲಸಗಳು ಆಗುತ್ತವೆ ಮತ್ತು ಉಳಿದ ಕೆರೆಗಳ ಕೆಲಸಗಳು ಹಾಗೇ ನಿಂತುಹೋಗುತ್ತಿವೆ. ಇಂತಹ ಕೆರೆಗಳ ಆಶ್ರಯದಲ್ಲಿರುವ ಜನರು ಈ ಕೆಲಸಗಳು ಆಗುತ್ತವೆ ಎಂದು ಕಾಯುತ್ತಿದ್ದರೂ ಕೂಡ ಇನ್ನೂ ಅಲ್ಲಲ್ಲಿ ಕೆಲಸಗಳು ಪ್ರಾರಂಭವಾಗಿಯೇ ಇಲ್ಲ. ಇದನ್ನು ಮಾಡದೇ ಹೋದರೆ ರೈತರಿಗೆ ಎಷ್ಟುಮಟ್ಟಿನ ತೊಂದರೆಯಾಗುತ್ತದೆ ಎನ್ನುವುದನ್ನು ಸರಕಾರ ತೀವ್ರವಾಗಿ ಪರಿಶೀಲನೆ ಮಾಡಬೇಕಾದುದು ಬಹಳ ಪ್ರಾಮುಖ್ಯವಾದುದೆಂದು ಸರಕಾರಕ್ಕೆ ನಾನು ಸಲಹೆ ಮಾಡುತ್ತೇನೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಯ್ಯನಕೆರೆ, ಮದಗದಕೆರೆ ಇತ್ಯಾದಿ, ಕೆರೆಗಳಿದ್ದರೂ ಅವುಗಳ ಕಡೆಗೆ ಸರಕಾರ ಗಮನಿಸಿಲ್ಲ. ಇದೂ ಅಲ್ಲದೆ ಈ ಜಿಲ್ಲೆಯಲ್ಲಿ ಸಾವಿರಾರು ಎಕರೆಗಳಷ್ಟು ಜಮೀನಿಗೆ ಅನುಕೂಲವಾಗುವಷ್ಟು ಕೆರೆಗಳಿದ್ದರೂ ಕೂಡ ಅವುಗಳ ನಾಲೆಗಳೆಲ್ಲಾ ಒಡೆದು ಹೋಗಿರುವುದರಿಂದ ರೈತರಿಗೆ ಅದರಿಂದ ತುಂಬಾ ತೊಂದರೆಯಾಗಿದೆ. ಈ ವಿಷಯವನ್ನು ಅನೇಕಸಾರಿ ಸರಕಾರದ ಗಮನಕ್ಕೆ ತಂದರೂ ಇಲ್ಲಿಯವರೆಗೂ ಏನೂ ಪ್ರಯೋಜನವಾಗಲಿಲ್ಲ. ಈಗಲಾದರೂ ಸರಕಾರದವರು ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಸ್ವಾಮೀ, ಮೈಸೂರು ದೇಶ ವಿಸ್ತಾರವಾದ ಮೇಲೆ ಮಲೆನಾಡಿನ ಸಾರಿಗೆ ಸಂಪರ್ಕದ ಅಭಿವೃದ್ಧಿ ವಿಷಯದಲ್ಲಿ ಸರಕಾರದ ವ್ಯವಹಾರ ನೀತಿ ಸರಿಯಾದ ರೀತಿಯಲ್ಲಿ ಇಟ್ಟುಕೊಂಡಿಲ್ಲ ಎಂದು ನಾನು ಹೇಳದೆ ವಿಧಿ ಇಲ್ಲ. ಮೈಸೂರು ದೇಶದ ಮಾನ್ಯ ಮುಖ್ಯ ಮಂತ್ರಿಗಳು ಮಲೆನಾಡಿನ ಬಗ್ಗೆ ಬಹಳ ಆಸಕ್ತಿಯನ್ನು ವಹಿಸಿಕೊಂಡು ದೇಶದ ಅಭಿವೃದ್ಧಿ ಕೆಲಸಗಳನ್ನು ಬಹಳ ಚೆನ್ನಾಗಿ ಮಾಡತಕ್ಕ ಉತ್ಸಾಹವನ್ನೂ ಹೊಂದಿದ್ದಾರೆ. ಆದರೆ ಈ ದೇಶದ ಹಣಕಾಸಿನ ಪರಿಸ್ಥಿತಿಯಿಂದಲೋ ಏನೋ ಯಶಸ್ವಿಯಾಗಿ ಹಾಗೂ ಉತ್ತಮವಾದ ಕಾರ್ಯಗಳು ನಡೆಯಲು ಇನ್ನೂ ಅವಕಾಶ ಒದಗಲಿಲ್ಲ ಎಂದು ವಿಷಾದಿಸಬೇಕಾಗಿದೆ. ಮಲೆನಾಡು ಜಿಲ್ಲೆಗಳಲ್ಲಿ ಸರಕಾರ ಮೊದಲು ಸಾರಿಗೆ ಸಂಪರ್ಕಗಳನ್ನು ಅಭಿವೃದ್ಧಿ ಮಾಡಬೇಕು, ಇಲ್ಲಿ ಗುಡ್ಡ ಬೆಟ್ಟಗಳೇ ಹೆಚ್ಚಾಗಿರುವುದರಿಂದ ಇಲ್ಲಿನ ಜನಗಳ ಸಂಚಾರಕ್ಕೆ ಬಹಳ ಅನಾನುಕೂಲಗಳಾಗುತ್ತಲವೆ. ನಮ್ಮ ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳು ಕಳಸ ರೋಡುಗಳಲ್ಲಿ ಇನ್ನೂ ಪ್ರವಾಸ ಕೈಗೊಂಡಿಲ್ಲ. ಮಾನ್ಯ ಮಂತ್ರಿಗಳು ಈ ಭಾಗದಲ್ಲಿ ಮೇ, ಜೂನು ಹಾಗೂ ಜುಲೈ ತಿಂಗಳಲ್ಲಿ ಒಂದು ಸಾರಿ ಪ್ರವಾಸ ಬಂದರೆ ಅಲ್ಲಿರುವ ಜನಗಳ ಕಷ್ಟ ನಷ್ಟಗಳನ್ನು ಕಣ್ಣಾರೆ ನೋಡಿಕೊಳ್ಳಬಹುದು. ಇಂಗ್ಲೀಷರ ಕಾಲದಲ್ಲಿ ಮತ್ತು ಜವಾಬುದಾರಿ ಸರಕಾರ ಬರುವುದಕ್ಕೆ ಮುಂಚೆ ಆಗಿನ ಸರಕಾರದವರು ಮಲೆನಾಡು ಪ್ರದೇಶಗಳ ಅಭಿವೃದ್ಧಿಗಾಗಿ ಮಲೆನಾಡು ಇಂಪ್ರೂವ್‌ಮೆಂಟ್ ಗ್ರ್ಯಾಂಟ್ಸ್ ಹಾಗೂ ರೂರಲ್ ಕಮ್ಯೂನಿಕೇಷನ್ಸ್‌ಗಾಗಿ ಎಂದು ಪ್ರತ್ಯೇಕವಾಗಿ ದುಡ್ಡನ್ನು ಒದಗಿಸಿಡುತ್ತಿದ್ದರು. ಅದರಿಂದ ಹೇಗೋ ಅಲ್ಲಿ ಅಭಿವೃದ್ಧಿ ಕೆಲಸಗಳಾಗುತ್ತಿತ್ತು. ಈಗ ಸ್ವಾತಂತ್ರ್ಯ ಬಂದ ಮೇಲೆ ಮೈಸೂರು ದೇಶ ಬಹಳ ವಿಸ್ತಾರವಾಯಿತು ಮತ್ತು ಈಗ ಕೋಸ್ಟು ಲೈನು ಸುಮಾರು ಇನ್ನೂರು ಮೈಲಗಳಷ್ಟು ನಮಗೆ ಬಂದಿದೆ ಮತ್ತು ಇಲ್ಲಿ ಒಂದು ಮೈಲಿ ರಸ್ತೆಗಳನ್ನು ಮಾಡಬೇಕಾದರೆ ಒಂದು ಸಾವಿರಕ್ಕೆ ಮೇಲ್ಪಟ್ಟು ಖರ್ಚಾಗುತ್ತದೆ. ಅದೇನು ನಮ್ಮ ದುರದೃಷ್ಟವೋ ಏನೋ ಈಗಿನ ಸರಕಾರದ ನೀತಿಯನ್ನು ನೋಡಿದರೆ ನಮ್ಮ ಮಲೆನಾಡು ಜಿಲ್ಲೆಗಳಲ್ಲಿ ಇನ್ನೂ ಸರಿಯಾಗಿ ಸಾರಿಗೆ ಸಂಪರ್ಕಗಳು ಆಗುತ್ತಿಲ್ಲ ಎಂದು ಇಲ್ಲಿ ಸರಕಾರದ ಮುಂದೆ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸುಮಾರು 24 ಸೇತುವೆಗಳು ರಿಪೇರಿಯಾಗದೇ ಹಾಗೆ ಇವೆ. 1956ನೇ ಇಸವಿಯಲ್ಲಿ ಪ್ರಾರಂಭವಾದವು ಇನ್ನೂ ಅರ್ಧಕ್ಕೇ ನಿಂತಿವೆ. ಈಗಲಾದರೂ ಇದನ್ನು ಪೂರ್ತಿ ಮಾಡಬೇಕಾದುದು ಅವಶ್ಯಕವಾಗಿದೆ. ಇದರಲ್ಲಿ ಕೆಲವು ಪಿ.ಡಬ್ಲ್ಯು.ಡಿ.ಗೆ ಸೇರಿಲ್ಲ ಎನ್ನುತ್ತಾರೆ, ಆದುದರಿಂದ 24 ಸೇತುವೆಗಳ ಕೆಲಸವಾಗದೆ ಹೋದರೆ ಜನರು ಸಂಚಾರ ಮಾಡುವುದಕ್ಕೆ ಕಷ್ಟವಾಗುತ್ತದೆ. ಇದಕ್ಕಾಗಿ ಸರಕಾರದವರು ಸಾಕಷ್ಟು ಹಣವನ್ನು ಕೊಟ್ಟು ಇಲ್ಲಿ ಖರ್ಚು ಮಾಡುವುದಕ್ಕೆ ಅವಕಾಶ ಮಾಡಿದರೆ ಜನತೆಯ ಸಂಚಾರಕ್ಕೆ ಬಹು ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಇನ್ನೂ ಹೆಚ್ಚು ಗಮನ ತೆಗೆದುಕೊಂಡು ಇದನ್ನು ಮಾಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮಲೆನಾಡು ಜಿಲ್ಲೆಗಳಲ್ಲಿ ಮಲೆನಾಡಿನ ಅಭಿವೃದ್ಧಿಗಾಗಿ ಗ್ರಾಂಟುಗಳನ್ನು ಜಾಸ್ತಿ ಮಾಡಬೇಕೆಂದು ತಿಳಿಸುತ್ತಿದ್ದೇನೆ. ಮಲೆನಾಡು

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಜಿಲ್ಲೆಗಳಲ್ಲಿ ಆಗಬೇಕಾದ ಕೆಲಸಗಳು ಅನೇಕ ಇವೆ. ಉದಾಹರಣೆಯಾಗಿ ಇಲ್ಲಿ ಒಂದನ್ನು ಮಾತ್ರ ಹೇಳುತ್ತೇನೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಮೂರು ಕಡೆಗಳಲ್ಲಿ ಎಂದರೆ, ಸಿಂಧನೂರು, ಚಿಕ್ಕಮಗಳೂರು ಮತ್ತು ಕಮಲಾಪುರಗಳಲ್ಲಿ ಮೂರು ಬೇಸಿಕ್ ಟ್ರೇನಿಂಗು ಸ್ಕೂಲುಗಳನ್ನು ತೆರೆಯಬೇಕೆಂದು ಇತ್ತು. ಅದರಂತೆ ನಮ್ಮ ಚಿಕ್ಕಮಗಳೂರು ಬೇಸಿಕ್ ಟ್ರೇನಿಂಗ್ ಸ್ಕೂಲಿಗಾಗಿ ಪ್ಲಾನುಗಳಾಗಿ, ಅಂದಾಜುಗಳಾಗಿದ್ದರೂ ಕೂಡ ಇನ್ನೂ ಅದರ ಕೆಲಸ ಪ್ರಾರಂಭ ಮಾಡಿಲ್ಲ. ಆದರೆ ಬೇರೆ ಕಡೆಗಳಲ್ಲಿ ಆಗಿರುವ ಸ್ಕೂಲುಗಳಿಗಾಗಿ ಅಲ್ಲಿ ಹಾಸ್ಟಲುಗಳನ್ನು ಕಟ್ಟಲು ಹಣವನ್ನು ಕೊಟ್ಟಿದ್ದಾರೆಂದು ಕೇಳುತ್ತೇನೆ. ಆದರೆ ನಮ್ಮ ಚಿಕ್ಕಮಗಳೂರು ಸ್ಕೂಲಿಗೆ ಇದುವರೆಗೆ ಯಾವ ಗ್ರ್ಯಾಂಟನ್ನೂ ಕೊಡದೇ ಇರಲು ಕಾರಣವೇನು ? ಇದರ ಬಗ್ಗೆ ವಿವರಗಳನ್ನು ಕೊಡಬೇಕೆಂದು ಸರಕಾರದಲ್ಲಿ ಕೇಳುತ್ತೇನೆ. ಸಾಮಾನ್ಯವಾಗಿ ರಸ್ತೆ ಕಾಮಗಾರಿಗಳನ್ನು ಸರಕಾರ ಮಾಡಿಸಬೇಕೆಂದು ಅದಕ್ಕಾಗಿ ಯೋಜನೆಯಲ್ಲಿ ಹಣವನ್ನು ಒದಗಿಸಿದ್ದರೂ ಕೂಡ ಕೆಲಸಗಳು ಆಗುತ್ತಿಲ್ಲ. ಅಲ್ಲದೆ ನಮ್ಮ ಮಲೆನಾಡು ಭಾಗದಲ್ಲಿ ನೀರಾವರಿ ಯೋಜನೆಗಳಿಂದ ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ, ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಸುಮಾರು 50-60 ದೊಡ್ಡ ಕೆರೆಗಳು ಇವೆ ಅವನ್ನೆಲ್ಲಾ ಸರಿಪಡಿಸಬೇಕು. ಇದೂ ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪ್ರಶ್ನೆ ಬಗೆಹರಿಯಬೇಕಾಗಿದೆ. ಸರಕಾರದವರೇನೋ ಇಲ್ಲಿನ ಜನಕ್ಕೆ ಕುಡಿಯುವ ನೀರನ್ನು ಕೊಡಬೇಕೆಂದು ಅದರ ಕೆಲಸಗಳನ್ನು ಮಾಡಲು ದೊಡ್ಡ ದೊಡ್ಡ ಓವರು ಹೆಡ್ ಟ್ಯಾಂಕುಗಳನ್ನು ಕಟ್ಟಿ ಅವು ಹಾಗೇ ನಿಂತಿವೆ, ಇದರ ಬಗ್ಗೆ ಸರಕಾರದ ಗಮನವನ್ನು ಸೆಳೆಯುವುದಕ್ಕಾಗಿ ನಮ್ಮ ಭಾಗದ ಸುಮಾರು 50-60 ಜನರು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬಂದು ಅವರ ಗಮನಕ್ಕೂ ಕೂಡ ತಂದದ್ದಾಯಿತು. ಇನ್ನೂ ಈ ಕೆಲಸ ಹಾಗೇ ಇದೆ. ಕುಡಿಯುವ ನೀರಿನ ಸಮಸ್ಯೆ ಬಹ ಮುಖ್ಯವಾದುದು, ಇದನ್ನು ಆದಷ್ಟು ಜಾಗ್ರತೆಯಾಗಿ ಮುಗಿಸಿಕೊಡಬೇಕೆಂದು ಸರಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮತ್ತು ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಭತ್ತ, ಕಾಫೀ, ಏಲಕ್ಕಿ ಮತ್ತು ಅರಣ್ಯ ಸಂಪತ್ತು ಹೇರಳವಾಗಿವೆ. ಮತ್ತು ನಮ್ಮ ಜಿಲ್ಲೆಯ ಬಾಬಾ ಬುಡನ್ ಗುಡ್ಡದ ಕಡೆಯಿಂದ ಅನೇಕ ಟನ್ನುಗಳಷ್ಟು ಕಬ್ಬಿಣದ ಅದಿರು ಹೊರಕ್ಕೆ ಸಾಗಾಣಿಕೆಯಾಗುತ್ತದೆ. ಹೀಗೆ ಕಬ್ಬಿಣ ಸಾಗಾಣಿಕೆಯಾಗುವ ರಸ್ತೆಗಳಿಗಾಗಿ ಸುಮಾರು ಹನ್ನೆರಡೂವರೆ ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕೆಂದು ಇದೆ. ಆದರೆ ನಮ್ಮ ಭಾಗದಿಂದ ಸುಮಾರು 120 ಮೈಲಿ ರಸ್ತೆಗಳನ್ನು ಮಾಡಿ ಕಾರವಾರ, ಮಂಗಳೂರು ದೊಡ್ಡ ರಸ್ತೆಗೆ ಸೇರಿಸುವಂತೆ ಮಾಡಿದರೆ ಅದರಿಂದ ಕಬ್ಬಿಣದ ಅದಿರನ್ನು ಸಾಗಿಸಲು ಹೆಚ್ಚು ಅನುಕೂಲವಾಗುತ್ತದೆ. ಇದನ್ನು ಓರ್ ರೋಡಾಗಿ ಪರಿವರ್ತಿಸಿ ಇದರ ಕೆಲಸವನ್ನು ಮಾಡಿ ಕೊಡಬೇಕೆಂದು ಸರಕಾರದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಕಬ್ಬಿಣದ ಅದರು ದೇಶಕ್ಕೆ ಸಂಪತ್ತನ್ನು ಕೊಡತಕ್ಕ ಒಂದು ವಸ್ತುವಾಗಿರುವುದರಿಂದ ಈಗ ಮಂಗಳೂರಿಂದ ಹಾಸನದವರೆಗೆ ರೈಲ್ವೆ ಲೈನನ್ನು ನಿರ್ಮಾಣ ಮಾಡಬೇಕೆಂದು ಇದರ ರಸ್ತೆ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಈ ರೈಲ್ವೆ ಲೈನನ್ನು ಕಡೂರು ಮೂಲಕ ನಮ್ಮ ಭಾಗಕ್ಕೂ ಲಿಂಕ್ ಮಾಡುವಂತೆ ಒಂದು ಶಿಫಾರಸನ್ನು ಕೇಂದ್ರ ಸರಕಾರಕ್ಕೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಇದರ ಬಗ್ಗೆ ಉತ್ತರ ಕೊಡುವಾಗ ಎರಡು ಮಾತುಗಳನ್ನು ತಿಳಿಸಬೇಕಾಗಿ ಪ್ರಾರ್ಥನೆ ಮಾಡುತ್ತೇನೆ.

ಸಾಮಾನ್ಯ ಆಡಳಿತದ ಬಗ್ಗೆ ಕೆಲವು ಮಾತುಗಳನ್ನು ತಿಳಿಸಲಿಚ್ಛಿಸುತ್ತೇನೆ. ದೇಶದ ಉತ್ತಮವಾದ ಆಡಳಿತವನ್ನು ನಿರೀಕ್ಷೆ ಮಾಡುವುದು ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಂದ. ಸರಕಾರದ ಕೆಲಸವನ್ನು ಮಾಡತಕ್ಕ ಅಧಿಕಾರಿಗಳು ದೇಶಾಭಿಮಾನದಿಂದ ಕೂಡಿ ಜನತೆಗೆ ಉಪಯೋಗವಾಗುವಂತಹ ಉತ್ತಮ ಕೆಲಸಗಳನ್ನು ಮಾಡುತ್ತಾರೆಂದು ನಾವು ನಿರೀಕ್ಷೆ ಮಾಡುತ್ತೇವೆ. ಆಡಳಿತದಲ್ಲಿ ನಿಷ್ಠೆಯಿಂದ ದೇಶಾಭಿಮಾನದಿಂದ ಕೂಡಿ ಕೆಲಸ ಮಾಡುವಾಗ ಬೇಕಾದವರಿಗೆ ಒಂದು ರೀತಿ ಮತ್ತೊಬ್ಬರಿಗೆ ಒಂದು ರೀತಿಯಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ಇದೊಂದು ಮಹತ್ವದ ಪ್ರಶ್ನೆಯಾಗಿದೆ. ಈಗ ಇಲ್ಲಿ ಅಧಿಕಾರಿಗಳ ಸೀನಿಯಾರಿಟಿ ವಿಷಯದಲ್ಲಿ ಸರಕಾರದವರು ಇಷ್ಟು ಪ್ರಯತ್ನ ಮಾಡಿದರೂ ಇದರ ಪ್ರಶ್ನೆ ಇನ್ನೂ ಪೂರ್ತಿಯಾಗದೇ ಇರತಕ್ಕದ್ದು ಬಹಳ ವಿಷಾದದ ಸಂಗತಿಯಾಗಿದೆ. ಸರಕಾರದವರು ಅವರ ಸರ್ವಿಸ್ಸಿಗೆ ಸೇರಿದ ಅಧಿಕಾರಿಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ಅವರು ಹಳೆಯ ಮೈಸೂರಿನವರಾಗಲಿ, ಹೈದರಾಬಾದು ಕರ್ಣಾಟಕ ಪ್ರದೇಶದವರಾಗಿರಲಿ, ಬೊಂಬಾಯಿ ಕರ್ಣಾಟಕ ಪ್ರದೇಶದಿಂದ ಬಂದವರು ಆಗಿರಲಿ ಅವರವರುಗಳಿಗೆ ನ್ಯಾಯವಾದ ಹಕ್ಕುಬಾಧ್ಯತೆಗಳನ್ನು ಹಾಗೂ ಅವಕಾಶಗಳನ್ನು ಪಡೆಯುವುದು ಪ್ರಜಾಪ್ರಭುತ್ವದ ನೀತಿಯ ತತ್ವಕ್ಕನುಗುಣವಾಗಿರುತ್ತದೆ.

ಇನ್ನು ಸಣ್ಣಪುಟ್ಟ ಅಧಿಕಾರಿಗಳ ವರ್ಗಾವಣೆ ವಿಷಯವಾಗಿ ಹೇಳುವುದಾದರೆ ಅಂತಹ ಅಧಿಕಾರಿಗಳನ್ನು ಬಿದರ್‌ನಿಂದ ಚಿಕ್ಕಮಗಳೂರಿಗೆ ವರ್ಗ ಮಾಡಿದರೆ ಅವರ ಗತಿಏನು? ಆ ಬಗ್ಗೆ ಸರ್ಕಾರದವರು ಸಹಾಯಮಾಡಬೇಕು. ಆರೀತಿ ಅವರಿಗೆ ತೊಂದರೆ ಕೊಡಬಾರದು.

ಇನ್ನು ನಮ್ಮ ದೇಶದಲ್ಲಿ ಸಣ್ಣ ನೌಕರರ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ. ಆಹಾರ ಅಭಾವ ಪರಿಸ್ಥಿತಿ ಒಂದು ಕಡೆ ಹೆಚ್ಚಾಗಿದೆ, ದೇಶದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ. ಸರ್ಕಾರದವರು ನೌಕರರಿಗೆ ಮಾಡಬೇಕಾದ ಸಹಾಯವೇನೆಂದರೆ, ಕಡಿಮೆದರದಲ್ಲಿ ಆಹಾರ ಪದಾರ್ಥಗಳು ಸಿಕ್ಕುವಹಾಗೆ ಮಾಡಬೇಕಾದುದು, ಅವರ ಮಕ್ಕಳ ವಿದ್ಯಾಭ್ಯಾಸ ಸೌಕರ್ಯ, ವಸತಿಗಾಗಿ ಮನೆಗಳನ್ನು ಕಡಿಮೆ ಖರ್ಚಿನಲ್ಲಿ ಮಾಡಿಕೊಟ್ಟರೆ ಅವರಿಗೆ ಅನುಕೂಲವಾಗಬಹುದು. ಈಗ ದೇಶ ವಿಸ್ತಾರವಾದ ಮೇಲೆ ಅನೇಕ ಜನ ಅಧಿಕಾರಿಗಳೂ ಹಾಗೂ ಅನೇಕ ಇಲಾಖೆಗಳೂ ಬೃಹದಾಕಾರವಾಗಿ ಬೆಳೆದುಕೊಂಡು ಬರುತ್ತಾ ಇವೆ. ಆರು ಜನ ಚೇಫ್ ಇಂಜನಿಯರುಗಳು, 12 ಜನ ಸೂಪರಿಂಟೆಂಡಿಂಗ್ ಇಂಜನಿಯರುಗಳು ನಾಲ್ಕು ಜನ ಡೆಪ್ಯುಟಿ ಡೈರೆಕ್ಟರುಗಳು, ಎ. ಡಿ. ಒ. ಗಳು ಅಸಿಸ್ಟೆಂಟ್ ಇನ್‌ಸ್ಪೆಕ್ಟರುಗಳು—ಹೀಗೆ ಅನೇಕವಾಗಿ ಇಲಾಖೆಗಳು ಬೆಳೆದುಹೋಗಿರುವುದರಿಂದ ಅನೇಕ ಅಧಿಕಾರಿಗಳಿಗೆ ಸರ್ಕಾರೀ ಕಾನೂನುಗಳ ಹೆದರಿಕೆ ಇಲ್ಲದೇ ಹೋಗಿದೆ. ಈ ರೀತಿ ಆಡಳಿತನಡೆಯುತ್ತಿದೆ. ಇತ್ತೀಚೆಗೆ ಆಫೀಸರುಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಅದನ್ನು ಕಡಿಮೆಮಾಡದೇಹೋದರೆ ದೇಶದಲ್ಲಿ ಬರತಕ್ಕ ವರಮಾನವೆಲ್ಲಾ ಬರೀ ತೆರಿಗೆ ಮತ್ತು ಸಿಬ್ಬಂದಿ ಖರ್ಚಿಗೇ ಆಗುತ್ತದೆ. ಒಟ್ಟಿನಲ್ಲಿ ನನ್ನ ಕ್ಷೇತ್ರವಾದ ಚಿಕ್ಕಮಗಳೂರು ಜಿಲ್ಲೆಯನ್ನು ಎಲ್ಲಾವಿಧಗಳಲ್ಲಿಯೂ ಸರ್ಕಾರದವರು ಅಭಿವೃದ್ಧಿ ಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇಷ್ಟು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಈ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ಈ ನನ್ನ ನಾಲ್ಕುಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಅಂದಾನಯ್ಯ (ಕುಣಿಗಲ್).—ಮಾನ್ಯ ಸಭಾಪತಿಗಳೇ, ನಮ್ಮ ಮುಂದಿರತಕ್ಕ ಬೇಡಿಕೆಗಳ ಬಗ್ಗೆ ಕೆಲವಾರು ಬೇಡಿಕೆಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ ಸಾಮಾನ್ಯ ಆಡಳಿತ ವಿಚಾರವಾಗಿ ಹೇಳಬೇಕಾಗಿದೆ. ಇವತ್ತು ಆಡಳಿತವಲ್ಲಿ ದಕ್ಷತೆ, ಶಿಸ್ತು ಇವು ಬಹಳ ಕಡಿಮೆಯಾಗುತ್ತಾ ಬರುತ್ತಿದೆ. ಇದಕ್ಕೆ ನಾನಾಕಾರಣಗಳಿವೆ. ಈಗ ಸಾಮಾನ್ಯವಾಗಿ ಒಬ್ಬ ಅಧಿಕಾರಿಯನ್ನು ಪ್ರೊಮೋಷನ್ ಮಾಡುವುದರಲ್ಲಿ, ಹೊಸದಾಗಿ ನೇಮಕಮಾಡುವುದರಲ್ಲಿ, ಬೇರೆ ಕಡೆ ವರ್ಗಮಾಡುವುದರಲ್ಲಿ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯಿಂದ ಶಿಫಾರಸು ಬರಬೇಕು. ಇಲ್ಲದಿದ್ದರೆ ಏನಾದರೂ ಒಂದು ರೀತಿಯಲ್ಲಿ ಅದನ್ನು ಮಾಡಬೇಡಿ ಎಂದು ಹೇಳಿಕಳುಹಿಸಬೇಕು-ಹೀಗೆ ಬರೀ ಗುಂಪಿನ ಆಧಾರದ ಮೇಲೆ, ಜಾತಿಯ ಆಧಾರದ ಮೇಲೆ ಪ್ರೊಮೋಷನ್ಸ್, ಅಪಾಯಿಂಟ್‌ಮೆಂಟ್ಸ್ ನಡೆಯುತ್ತಾ ಇವೆ. ಸರ್ಕಾರ ಏನೇ ಕಾನೂನುಮಾಡಲಿ ರಿಕ್ರೂಟ್‌ಮೆಂಟ್ ರೂಲ್ಸನ್ನು ಬದಿಗೊತ್ತಿ ಮಂತ್ರಿಗಳು ಒಂದೊಂದು ಗುಂಪಿಗೆ ಎಷ್ಟು ಜನರು ಇರಬೇಕೆಂದು ಆರಿಸಿ ಅವರನ್ನು ನೇಮಕ ಮಾಡುತ್ತಿದ್ದಾರೆ. ಬ್ರಾಹ್ಮಣ ಮಂತ್ರಿಗಳು ಒಕ್ಕಲಿಗ ಮಂತ್ರಿಗಳು, ಹರಿಜನ ಮಂತ್ರಿಗಳು ತಮ್ಮ ಗುಂಪಿನಲ್ಲಿ ಎಷ್ಟು ಜನ ಇರಬೇಕೆಂದು ಈ ನೌಕರಿಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಇವರಿಗೆ ಯಾವ ರೂಲ್ಸ್, ಕಾನೂನುಗಳು ಬೇಕಾಗಿರುವುದಿಲ್ಲ. ಇವತ್ತು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳಲ್ಲಿ ನೋಡುತ್ತಿದ್ದೇವೆ. ಇವರು ಏನು ಅಪಾಯಿಂಟ್‌ಮೆಂಟ್ಸ್ ಮತ್ತು ಪ್ರೊಮೋಷನ್ಸ್ ಮಾಡಿದ್ದಾರೋ ಅವೆಲ್ಲಾ ಬಿದ್ದು ಹೋಗುತ್ತಿವೆ. ಇದನ್ನು ನೋಡಿದರೆ ಸರ್ಕಾರದ ಆಡಳಿತದಲ್ಲಿ ಏನು ದಕ್ಷತೆ ಇದೆ, ಇವರು ಎಷ್ಟರಮಟ್ಟಿಗೆ ಕಾರ್ಯಗಳನ್ನು ನಡೆಸುತ್ತಿದ್ದಾರೆಂಬುದನ್ನು ಇಡೀ ಪ್ರಪಂಚವೇ ನೋಡುತ್ತಿದೆ. ಇನ್ನು ಪಿ.ಡಬ್ಲ್ಯು.ಡಿ. ಅಸಿಸ್ಟೆಂಟ್ ಇಂಜನಿಯರ್ಸ್ ಪ್ರೊಮೋಷನ್ ಮಾಡುವಾಗ ಅವರ ಇಂಟಿಗ್ರೆಟಿ, ಕೆಪಾಸಿಟಿ, ಕ್ಯಾರಕ್ಟರ್-ಇವನ್ನು ನೋಡಿ ನೇಮಕ ಮಾಡಲಾಗಿದೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಇವರು ಅವರ ಒಂದು ಇಂಟಿಗ್ರೆಟಿ, ಕೆಪಾಸಿಟಿ ನೋಡಿ ಮಾಡಿರತಕ್ಕ ಪ್ರೊಮೋಷನ್ನುಗಳು ಇವತ್ತು ಏನಾಗಿವೆಯೆಂದರೆ, ಈ ಬಗ್ಗೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳ ತೀರ್ಮಾನಗಳನ್ನು ನೋಡಿದರೆ ಸಾಕು. ಈ ಸರ್ಕಾರದವರು ತಲೆ ಎತ್ತಿ ಹೋಗಬೇಕಾಗಿಲ್ಲ. ತಲೆ ಬಗ್ಗಿಸಬೇಕಾಗಿದೆ ಈ ಆಡಳಿತದಲ್ಲಿ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳತಕ್ಕ ತಹಸೀಲ್‌ದಾರ್ಸ್ ಮತ್ತು ಅಸಿಸ್ಟೆಂಟ್ ಇಂಜನಿಯರ್ಸ್ ನೇಮಕಗಳನ್ನು ನಾವು ಬಂದ ಮೇಲೆ ಮಾಡಲಿಲ್ಲ. ಈ ಸರ್ಕಾರ ಅವನ್ನು ಮಾಡಿದರು ಎಂಬುದಾಗಿ ಮಾನ್ಯ ಸದಸ್ಯರು ತಿಳಿದುಕೊಳ್ಳಕೂಡದು. ಅದು ಯಾವಾಗ ಆಗಿದೆ ಎಂಬುದನ್ನು ಅವರು ಸರಿಯಾಗಿ ತಿಳಿದುಕೊಳ್ಳಬೇಕು.

ಶ್ರೀ ಅಂದಾನಯ್ಯ.—ಅವರವರ ಜಾತಿಗೆ ಎಷ್ಟೆಷ್ಟು ಪ್ರಾತಿನಿಧ್ಯವನ್ನು ಕೊಡುತ್ತಿದ್ದಾರೆಂಬು ದನ್ನು ಅದರಿಂದಲೇ ನೋಡಬಹುದು. ಉದಾಹರಣೆಗೆ ಹೇಳುವುದಾದರೆ ತುಮಕೂರು ಜಿಲ್ಲೆಯಲ್ಲಿ ಕೇವಲ 6-9 ತಿಂಗಳೊಳಗೆ 10-6 ಜನ ಮುಖ್ಯಾಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆಂಬು ದಾಗಿ ನನಗೆ ತಿಳಿಯಿತು. ತುಮಕೂರು ಜಿಲ್ಲೆಯಲ್ಲಿ ಪ್ರತಿಯೊಂದು ದಿವಸವೂ ಕಾನೂನು ಮಂತ್ರಿ ಗಳ ಕೈವಾಡ ಇದರಲ್ಲಿ ಇವೆಯೆಂದು ಹೇಳಬಹುದು. ತುಮಕೂರು ಜಿಲ್ಲೆಯಲ್ಲಿರತಕ್ಕ ಸೂಪ ರಿಂಟೆಂಡೆಂಟ್ ಆಫ್ ಪೋಲೀಸ್, ಅಸಿಸ್ಟೆಂಟ್ ಕಮಿಷನರ್, ಡೈರೆಕ್ಟರ್ ಆಫ್ ಮೆಡಿಕಲ್ ಆಫೀಸರ್ಸ್, ಬಿ.ಡಿ.ಒ.ಗಳು ಪಬ್ಲಿಕ್ ಪ್ರಾಸಿಕ್ಯೂಟರ್, ಸರ್ಕಾರೀ ಪ್ರಾಸಿಕ್ಯೂಟರ್ ಇವರೆಲ್ಲರೂ ಒಂದೇ ಕೋಮಿಗೆ ಸೇರಿದವರು ಇದ್ದಾರೆ. ತುಮಕೂರು ಜಿಲ್ಲೆಯಲ್ಲಿ ಒಂದೇ ಕೋಮಿನ ರಾಜ್ಯಸ್ಥಾಪನೆ ಮಾಡುವುದಕ್ಕೆ ಕಾನೂನು ಮಂತ್ರಿಗಳು ಹೊರಟಿದ್ದಾರೆ. ಇದು ನಿಜವಾಗಿ ಬಹಳ ವಿಷಾದವಾಗಿದೆ. ಒಳ್ಳೆಯ ಅಧಿಕಾರಿಗಳನ್ನು 6 ತಿಂಗಳು 9 ತಿಂಗಳೊಳಗಾಗಿ ಊರಿನ ಹೊರಗಡೆಗೆ ವರ್ಗಾವಣೆ ಮಾಡಿ ಅವರಿಗೆ ಇಲ್ಲದಿರತಕ್ಕ ತೊಂದರೆಗಳನ್ನು ಕೊಡುತ್ತಿದ್ದಾರೆ. ಇದರಿಂದ ಆ ಅಧಿಕಾರಿಗಳ ಮಕ್ಕಳ ವಿದ್ಯಾಭ್ಯಾಸ ಹೇಗೆ ಎಂಬುದನ್ನು ಇವರು ತಿಳಿದುಕೊಳ್ಳಬೇಕು. ಆದರೆ ತಮ್ಮ ಇಷ್ಟ ಬಂದಂತೆ ಕೆಲಸ ಮಾಡತಕ್ಕ ಅಧಿಕಾರಿಗಳನ್ನೇ ತುಮಕೂರು ಜಿಲ್ಲೆಯಲ್ಲಿ ವರ್ಗಾವಣೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇನೋ ಒಳ್ಳೆಯವರೇ. ಆದರೆ ಕಿವಿ ಮಾತು ಕೇಳುವುದು ಜಾಸ್ತಿ.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಆ ರೀತಿ ತಿಳಿದುಕೊಂಡಿರಬಹುದು.

ಶ್ರೀ ಅಂದಾನಯ್ಯ.—ಆದರೂ ಅವರು ಕಿವಿ ಮಾತು ಕೇಳುವುದು ಜಾಸ್ತಿ. ಅವರ ಒಳ್ಳೆಯ ತನ ಇಡೀ ಪ್ರಪಂಚಕ್ಕೇ ಗೊತ್ತಿದೆ. ಆದರೆ ಕಿವಿ ಮಾತು ಕೇಳುವುದನ್ನು ಮಾನ್ಯ ಮುಖ್ಯಮಂತ್ರಿಗಳು ಬಿಡಬೇಕು.

ಇನ್ನು ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿ ತಯಾರು ಮಾಡುವುದರಲ್ಲಿ 8-10 ವರ್ಷಗಳಾ ದರೂ ಇನ್ನೂ ಆ ಪಟ್ಟಿ ಫೈನಲೈಜ್ ಆಗಿಲ್ಲ. ಇವತ್ತು ಆಡಳಿತದಲ್ಲಿ ಕೆಲಸಮಾಡುವ ಅಧಿಕಾರಿ ಗಳೊಬ್ಬರಿಗೂ ಉತ್ಸಾಹವಿಲ್ಲ. ನನ್ನ ಸೀನಿಯಾರಿಟಿ ಅನ್ಯಾಯವಾಗಿದೆ ನಾನು ಪಟ್ಟಿಯಲ್ಲಿ ಬಹಳ ಕೆಳಗೆ ಹೋಗುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಒಬ್ಬ ಪ್ರೊಫೆಸರ್ ತಾನು ಪಾಠ ಹೇಳು ತ್ತಿದ್ದಂಥ ಶಿಷ್ಯನಲ್ಲಿಗೆ ಇಂಟರ್‌ವ್ಯೂ ಮಾಡಲಿಕ್ಕೆ ಹೋಗಿದ್ದಾನೆ. ಈ ತರಹದಲ್ಲಿ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಯಾರಾಗುತ್ತಿದೆ. ಇವತ್ತು ಅಧಿಕಾರಿಗಳಲ್ಲಿ ಅವರು ಹೇಗೆ ಕೆಲಸ ಮಾಡ ಬೇಕು, ಹೇಗೆ ಕೆಲಸದಲ್ಲಿ ಉತ್ಸಾಹ ಬರುತ್ತದೆ ಎನ್ನುವ ಸಮಸ್ಯೆ ಇವತ್ತು ಉಂಟಾಗಿದೆ. ಇಂಟರ್ ಸ್ಟೇಟ್ ಸೀನಿಯಾರಿಟಿ ಪಟ್ಟಿಯನ್ನು ಮೊಟ್ಟ ಮೊದಲನೆಯದಾಗಿ ಕಾನೂನು ರೀತಿಯಲ್ಲಿ, ಅಧಿಕಾರಿ ಗಳ ದಕ್ಷತೆ, ಅವರು ಇಲಾಖೆಗಳಲ್ಲಿ ಮಾಡಿರತಕ್ಕ ಕೆಲಸದ ಅನುಭವ-ಇವೆಲ್ಲವನ್ನೂ ನೋಡಿಕೊಂಡು ಫೈನಲೈಜ್ ಮಾಡಬೇಕು. ಇಂತಹ ಸಂದರ್ಭದಲ್ಲಿ ಒಂದು ನಿದರ್ಶನವನ್ನು ಹೇಳಬೇಕಾಗಿದೆ. ಒಬ್ಬ ಹುಡುಗ ಒಬ್ಬ ಅಧಿಕಾರಿಯ ಹತ್ತಿರ ಕೆಲಸ ಕೇಳುವುದಕ್ಕೆ ಹೋದ. ಆಗ ಅವನನ್ನು ಒಳಗೆ ಕರೆದು Are you wearing thread ಎಂದು ಕೇಳಿದ್ದಕ್ಕೆ yes ಎಂದು ಹೇಳಿದನಂತೆ. ಆಮೇಲೆ ಇನ್ನೊಂದು ಪ್ರಶ್ನೆಯನ್ನು ಕೇಳಿದರಂತೆ. Has it got any weight ಎಂದು ಅದಕ್ಕೆ No ಎಂದು ಉತ್ತರ ಕೊಟ್ಟಾಗ ಆಗ ಅಧಿಕಾರಿಯು you better get out ಎಂದು ಹೇಳಿದರಂತೆ. ಇಂತಹ ಮಟ್ಟಕ್ಕೆ ನಮ್ಮ ದೇಶದ ಆಡಳಿತ ಬಂದಿದೆ. ಆಡಳಿತ ಸುಧಾರಣೆ ಯಾವಾಗ ಸರಿಹೋಗುತ್ತದೋ ಗೊತ್ತಿಲ್ಲ. ಎಷ್ಟೋ ಭಾಷಣಗಳನ್ನು ಮಾಡುತ್ತಾರೆ. ಸುಖೀರಾಜ್ಯ ಮಾಡುತ್ತೇವೆ, ಜಾತ್ಯಾತೀತ ರಾಷ್ಟ್ರ ಮಾಡುತ್ತೇವೆ, ರಾಮರಾಜ್ಯವನ್ನು ಸ್ಥಾಪನೆ ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಾ ಆ ಪ್ರಕಾರವಾಗಿ ನಡೆಯುತ್ತಾ ಇಲ್ಲ. ಇವರು ಕಾನೂನುಗಳನ್ನು ಅನುಸರಿಸುತ್ತಿರುವ ರೀತಿನೀತಿ ನೋಡಿದರೆ ನಿಜವಾಗಿ ಇವರು ದೇಶದಲ್ಲಿ ದ್ರೋಹವನ್ನು ಎಸಗುವ ದೃತ್ಯಗಳನ್ನು ಮಾಡುತ್ತಿರುವುದು ಗೊತ್ತಾಗುತ್ತಿದೆ.

ಇನ್ನು ಪಿ.ಡಬ್ಲ್ಯು.ಡಿ. ವಿಚಾರ. ನಮ್ಮ ದೇಶದಲ್ಲಿ ಪಿ.ಡಬ್ಲ್ಯು.ಡಿ.ಯಲ್ಲಿ ನಡೆಯತಕ್ಕ ಕೆಲಸ ವೇನೂ ಖಂಡಿತ ಸಮರ್ಪಕವಾಗಿಲ್ಲ. ಸಾಕಷ್ಟು ಕೆರೆ, ರಸ್ತೆ, ಸೇತುವೆ ಕೆಲಸಗಳನ್ನು ತೆಗೆದು ಕೊಂಡಿಲ್ಲ. ಎಲ್ಲಾ ತಿರುಪತಿ ಚೌರ. ಅಲ್ಲಿ ಇಲ್ಲಿ ಪಟ್ಟೆ ಎಳೆದು ಬಿಟ್ಟು ಬಿಡುವುದು ಆಗಿದೆ. ಒಂದು ಫರ್ಲಾಂಗ್ ರಸ್ತೆ ರಿಪೇರಿ ಮಾಡುವುದು. ಪುನಃ ಹಾಗೆಯೇ ಬಿಡುವುದು. ಹೀಗೆ ಎರಡು ನಮೂನೆಯ ಕೆಲಸಗಳನ್ನು ಮಾಡುತ್ತಾರೆ. ಒಂದು ಕೆರೆಯ ದುರಸ್ತಿನ ಕೆಲಸ ನೋಡುವುದು, ಅದನ್ನು ಅರ್ಧಂಬರ್ಧ ಹಾಗೆಯೇ ಬಿಡುವುದು. ಈ ಮಧ್ಯೆ ಯಾವುದಾದರೂ ಒಂದು ಕೆರೆಯನ್ನು ಉತಾವಣೆ ಮಾಡಬೇಕೆಂದು ಅರ್ಜಿ ಬಂದರೆ ಆ ಕೆಲಸವನ್ನು ಮಾಡಲಿಕ್ಕೆ ಹೋಗುವುದು. ಹೀಗಾಗಿ ಯಾವ ಕೆಲಸವನ್ನು ಪೂರ್ತಿಯಾಗಿ ಮಾಡುವಂತಿಲ್ಲ. ಇವರು ಮಾಡತಕ್ಕ ಕೆಲಸದಲ್ಲಿ ಹಣವನ್ನು

ಸದ್ವಿನಿಯೋಗ ಮಾಡುವ ಹಾಗೆಯೇ ಇಲ್ಲ. ಇವರಿಗೆ ಆ ಆಶೆಯೆಂಬುದೇ ಇಲ್ಲವೆಂದು ನನಗೆ ತೋರು ತ್ತದೆ. ಇವರು ಹಣವನ್ನು ವಿಪರೀತವಾಗಿ ಪೋಲು ಮಾಡುತ್ತಿದ್ದಾರೆ. ಇವರು ಒಂದು ಕೆರೆಯನ್ನು ಉತಾವಣೆ ಮಾಡಿದರೆ ಮತ್ತೆ ಸಿಲ್ಟ್ ಬಾರದ ಹಾಗೆ ನೋಡಿಕೊಳ್ಳಬೇಕು. ಆ ರೀತಿ ಮಾಡದೆ ಪುನಃ ಅದೇ ಕೆಲಸಗಳಿಗೆ ಮುಂದಿನ ವರ್ಷ ಅರ್ಜಿಗಳು ಬರುವಂತೆ ಕೆರೆಗಳ ಉತಾವಣೆ ಮಾಡು ತ್ತಿದ್ದಾರೆ. ಇವರಲ್ಲಿ ಒಂದು ನೀತಿ ನಿಯಮವಿಲ್ಲ. ದೇಶದ ಕೋಟ್ಯಾಂತರ ರೂಪಾಯಿಗಳ ಹಣ ವನ್ನು ಈ ಇಲಾಖೆಯಲ್ಲಿ ಅನ್ಯಾಯವಾಗಿ ಪೋಲು ಮಾಡುತ್ತಿದ್ದಾರೆ.

6-00 P.M.

ಮಾನ್ಯ ಅರ್ಥಿಕ ಸಚಿವರು ಬಡ್ಜೆಟ್ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡುವಾಗ 20 ಸಾವಿರ ರೂಪಾಯಿಗಳ ಅಂದಾಜು ಇರತಕ್ಕ ಕೆಲಸಗಳನ್ನು ಸೂಪರಿಂಟೆಂಡೆಂಟ್ ಇಂಜಿನಿಯರು ಮತ್ತು ಎಗ್ಜಿಕ್ಯುಟೀವ್ ಇಂಜಿನಿಯರುಗಳು ಮಂಜೂರು ಮಾಡಬಹುದು ಎಂದು ಹೇಳಿದರು. ಚೀಫ್ ಇಂಜಿನಿಯರ್ ಜನರಲ್ ಅವರು ಈಗ ನ್ಯೂ ಸ್ಟ್ಯಾಂಡರ್ಡ್ ಇಂಟ್ರಡ್ಯೂಜ್ ಮಾಡಿದ್ದೇವೆ, 20 ಸಾವಿರ ರೂಪಾಯಿಗಳಲ್ಲಿ ಯಾವ ಕೆರೆಯನ್ನೂ ಉಟಾವಣೆ ಮಾಡುವುದಕ್ಕಾಗುವುದಿಲ್ಲ ಅದಕ್ಕೆ 70-80 ಸಾವಿರ ರೂಪಾಯಿಗಳು ಬೇಕಾಗುತ್ತದೆ ಎಂದು ಹೇಳುತ್ತಿದ್ದಾರೆ. ಈ ನ್ಯೂ ಸ್ಟ್ಯಾಂಡರ್ಡ್ ನೀತಿ ಏನು, ಚೀಫ್ ಇಂಜಿನಿಯರ್ ಜನರಲ್ ಅವರು ಅದನ್ನು ಜಾರಿಗೆ ತರುವುದಕ್ಕೆ ಸರ್ಕಾರದ ಅನುಮತಿಯನ್ನು ಪಡೆದುಕೊಂಡಿದ್ದಾರೆಯೇ ? ಈ ವಿಚಾರದಲ್ಲಿ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ನಾನು ಕೇಳುತ್ತೇನೆ. ಈ ರೀತಿ ಇವರು ನ್ಯೂ ಸ್ಟ್ಯಾಂಡರ್ಡ್ ಇಂಟ್ರಡ್ಯೂಜ್ ಮಾಡಿರುವುದರಿಂದ ಎಗ್ಜಿಕ್ಯುಟೀವ್ ಇಂಜಿನಿಯರುಗಳು ಎಸ್ಟಿಮೇಟುಗಳನ್ನೆಲ್ಲಾ ವಾಪಸ್ಸು ಕಳುಹಿಸುತ್ತಿದ್ದಾರೆ. ಈ ನ್ಯೂ ಸ್ಟ್ಯಾಂಡರ್ಡ್‌ನ್ನು ಮಾಡಿದವರು ಯಾರು, ಇದಕ್ಕೆ ಸರ್ಕಾರದವರು ಅನುಮತಿಯನ್ನು ಕೊಟ್ಟಿದ್ದಾರೆಯೇ, ಇದು ಏನೆಂಬುದು ನನಗೆ ಅರ್ಥವಾಗುವುದಿಲ್ಲ. ಹಳೇಯ ಮೈಸೂರಿನಲ್ಲಿ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಸಣ್ಣ ಪುಟ್ಟ ಕೆರೆಗಳನ್ನು ಮಾತ್ರ ಕಟ್ಟುವುದಕ್ಕೆ ಅವಕಾಶ ಇದೆ. ಇಂಥಾ ಎಸ್ಟಿಮೇಟುಗಳೆಲ್ಲಾ ಫೈನಲ್ ಸ್ಟೇಜಿಗೆ ಬಂದಾಗ ಅವುಗಳನ್ನೆಲ್ಲಾ ವಾಪಸ್ಸು ಕಳುಹಿಸುತ್ತಿದ್ದಾರೆ. ನಮ್ಮ ಹಳೆಯ ಮೈಸೂರು ಪ್ರದೇಶದಲ್ಲಿ ಕೆರೆ ಗಳನ್ನು ಮಾತ್ರ ಕಟ್ಟುವುದಕ್ಕೆ ಮಾತ್ರ ಸಾಧ್ಯ ಇದೆ ದೊಡ್ಡ ಪ್ರಾಜೆಕ್ಟಗಳನ್ನು ಕಟ್ಟುವುದಕ್ಕೆ ಸಾಧ್ಯ ವಿಲ್ಲ. ಆದ್ದರಿಂದ ಈ ನ್ಯೂ ಸ್ಟ್ಯಾಂಡರ್ಡ್ ವಿಷಯದಲ್ಲಿ ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ಉತ್ತರವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ರೂರಲ್ ಕಮ್ಯುನಿಕೇಷನ್ಸ್ ಬಗ್ಗೆ ಒಂದೆರಡು ವಿಷಯಗಳನ್ನು ನಾನು ಹೇಳಬಯಸು ತ್ತೇನೆ. ಈ ರೂರಲ್ ಕಮ್ಯುನಿಕೇಷನ್ನಿಗೆ ಸಂಬಂಧಪಟ್ಟ ಹಾಗೆ ಅನೇಕ ರಸ್ತೆಗಳನ್ನು ಮಾಡಿದ್ದಾರೆ. ಕೆಲವು ತಾಲ್ಲೂಕುಗಳಲ್ಲಿ 50 ಮೈಲಿ, 100 ಮೈಲ 500 ಮೈಲ 600 ಮೈಲಿ ಹೀಗೆಲ್ಲಾ ಈ ರಸ್ತೆ ಗಳನ್ನು ಮಾಡಿದ್ದಾರೆ. ಕೆಲವು ಕಡೆ ಈ ರಸ್ತೆಗಳನ್ನು ರಿಪೇರಿ ಮಾಡಿಲ್ಲ. ಈ ರಸ್ತೆಗಳಲ್ಲಿ ಜನಗಳು ಪ್ರಯಾಣ ಮಾಡುವುದಕ್ಕಾಗುವುದಿಲ್ಲ. ಕೆಲವು ಹಳ್ಳಿಗೆ ಹೋಗಬೇಕಾದರೆ ಅಲ್ಲಿ ರೋಡುಗಳು ಇವೆಯೋ ಅಥವಾ ಇಲ್ಲವೋ ಎನ್ನುವುದೇ ಗೊತ್ತಾಗುವುದಿಲ್ಲ. ಸರ್ಕಾರದವರು ರೂರಲ್ ಕಮ್ಯುನಿಕೇಷನ್ ರಸ್ತೆಗಳಿಗೆ ಖರ್ಚು ಮಾಡಿರತಕ್ಕ ಹಣ ಅನ್ಯಾಯವಾಗಿ ವ್ಯರ್ಥವಾಗಿದೆ. ಆದರಿಂದ ಈ ರೂರಲ್ ಕಮ್ಯುನಿಕೇಷನ್ ರಸ್ತೆಗಳನ್ನು ಸರಿಯಾದ ರೀತಿಯಲ್ಲಿ ಮೇಂಟೇನ್ ಮಾಡುವುದು ಒಳ್ಳೆಯದು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before adjourning the House, I want to bring to the notice of the House, that seats were re-arranged and it has been notified. But the Hon'ble members are not seen in their respective seats allotted to them. It has been brought to my notice that one hon'ble member has refused.

Sri GOPALA RAO MUDUBI (Humnabad).—Sir, I have been given seat No. 67 which has been given to somebody else. The same seat has been given to two.

Mr. SPEAKER.—If it is so, I will look to it. Those who are not in their seats by tomorrow, they will pardon me, for I will treat them as absent.

The House adjourned at Five Minutes past Six of the Clock to meet again at One of the Clock on Thursday, the 11th March 1965.